
ಸಂಪುಟ 20 ಸಂಚಿಕೆ 51
ಡಿಸೆಂಬರ್ 19, 1999 ಬೆಲೆ ರೂ. 3.00
ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ

ಹೈಟೆಕ್ ಕಾಂಗ್ರೈ ಸರ್ಕಾರ ಸಾಗುತ್ತಿರುವ ದಾರಿ

ಭಗ್ನಗೊಂಡ ಒರಿಸ್ಸಾ

ಇನ್ನೂ ಬದುಕಲು ಹೋರಾಟ



ಕೈಗಾ:
ಪುನರ್ವಸತಿಗಾಗಿ
ರೈತರ
ಹೋರಾಟ

ಬಿಜೆಪಿ ಮಿತ್ರರು ಏನು ಮಾಡುತ್ತಿದ್ದಾರೆ?

ಕಾಂಗ್ರೆಸ್ ಸರಕಾರ ಸಾಗುತ್ತಿರುವ ದಾರಿ

ರಾಜ್ಯದಲ್ಲಿ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದದಿನದಿಂದ ತಮ್ಮ ಸರ್ಕಾರದ ಧೋರಣೆಗಳಿಗೆ ಸಂಬಂಧಿಸಿದ ಅನೇಕ ಪ್ರಮುಖ ಹೇಳಿಕೆಗಳನ್ನು ಮಾಡಿದೆ. ತಾನು ಸಾಗಲಿರುವ ದಾರಿಯ ಬಗೆ ಸ್ಪಷ್ಟ ಸೂಚನೆ ನೀಡಿದೆ. ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರನ್ನು ತಾವು ತುಳಿಯಲಿರುವ ದಾರಿಯ ಮಾದರಿಯನ್ನಾಗಿ ಎಸ್.ಎಂ.ಕೃಷ್ಣ ಅಂಗೀಕರಿಸಿದ್ದಾರೆ. ಹೈಟೆಕ್ ಆಡಳಿತದ ದಾರಿಯಲ್ಲಿಯೇ ಅವರ ಎಲ್ಲಾ ಧೋರಣೆಗಳ ಘೋಷಣೆಗಳೂ ಇವೆ. ಅದಕ್ಕೆ ಪ್ರತಿಫಲವಾಗಿ ಇಂದು ಅವರು ವಿಶ್ವ ಆರ್ಥಿಕ ವೇದಿಕೆ(ಡಾವೂಸ್ ಸಮ್ಮೇಳನ ನಡೆಸುವ ಸಂಘಟನೆ) ಮತ್ತು ಸಿಐಐ ಸಂಘಟಿಸಿದ 'ಭಾರತ : ಆರ್ಥಿಕ ಶೃಂಗ99' ಕ್ಕೆ ನಾಯ್ಡು ರವರ ಜೊತೆಗೆ ಕೃಷ್ಣರವರನ್ನು ಆಹ್ವಾನಿಸಿದರು. ಅಮೆರಿಕದ ಅಧ್ಯಕ್ಷ ಕ್ಲಿಂಟನ್ ಇಂದು ನಾಯ್ಡುರವರನ್ನು ಭೇಟಿ ಮಾಡಲು ಉತ್ಸುಕತೆ ತೋರುವ ಮೂಲಕ ಈ ಕಾರ್ಪೋರೇಟ್ ದಾರಿಗೆ ದೇಶದ ಮುಖ್ಯಮಂತ್ರಿಗಳನ್ನೆಲ್ಲಾ ಸೆಳೆಯುವ ಪ್ರಯತ್ನ ಮಾಡಿದ್ದಾರೆ. ಇಡೀ ದೇಶದಲ್ಲಿ 23 ವರ್ಷದ ದೀರ್ಘ ಆಡಳಿತಕ್ಕೆ ಕಾರಣವಾದ ಪ.ಬಂಗಾಳದ ಪರ್ಯಾಯ ನೀತಿಗಳ ದಾರಿ ಆಕರ್ಷಣೀಯವಾಗುವುದರ ವಿರುದ್ಧ EC-EO ದಾರಿಯನ್ನು ಉತ್ತೇಜಿಸುವ ಪ್ರಯತ್ನ ನಡೆದಿದೆ. ಆಂಧ್ರಪ್ರದೇಶಧ ವಿಧಾನ ಸಭಾ ಚುನಾವಣೆಯಲ್ಲಿ ಹಲವಾರು ಮಾರ್ಗಗಳಿಂದ ಚಂದ್ರಬಾಬು ನಾಯ್ಡು ಮರಳಿ ಅಧಿಕಾರಕ್ಕೆ ಬಂದಿದ್ದು ಈ ದಾರಿಗೆ ಮತ್ತಷ್ಟು ಪುಷ್ಟಿ ನೀಡಿದೆ. ಕರ್ನಾಟಕದಲ್ಲಿಯೂ ಈ ದಾರಿಯನ್ನು ಜನಪ್ರಿಯಮಾಡುವ, ಜನತೆಯನ್ನು

ಸಂಪಾದಕೀಯ

ಇದಕ್ಕೆ ಸೆಳೆಯುವ ತೀವ್ರ ಪ್ರಯತ್ನಗಳ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಧೋರಣೆಗಳನ್ನು ವಿಮರ್ಶೆಗೊಳಪಡಿಸಬೇಕಾಗಿದೆ.

ಮುಖ್ಯಮಂತ್ರಿಯವರ ಪತ್ರಿಕಾ ಸಂದರ್ಶನಗಳು, ರಾಜ್ಯಪಾಲರ ಭಾಷಣ ಮತ್ತು ಅದಕ್ಕೆ ಮುಖ್ಯಮಂತ್ರಿಯವರ ಉತ್ತರ, ಐಟಿ.ಕಾಮ್ ಸಮ್ಮೇಳನದಲ್ಲಿ ಮಾಡಿದ ಭಾಷಣ ಮಂತ್ರಿಮಂಡಲದ ಹಲವು ತೀರ್ಮಾನಗಳು, ಇತ್ತೀಚೆಗೆ ದೆಹಲಿಯ 'ಭಾರತ-ಆರ್ಥಿಕ ಶೃಂಗ-99' ರಲ್ಲಿ ಮುಖ್ಯಮಂತ್ರಿ ಮಾಡಿದ ಭಾಷಣ ಇದರಲ್ಲಿ ಸರ್ಕಾರದ ನೀತಿಗಳನ್ನು ಘೋಷಿಸಲಾಗಿದೆ.

ಈ ಎಲ್ಲವುಗಳ ಪ್ರಧಾನ ಅಂಶಗಳಿವು:

1. ಹೈಟೆಕ್ ಆಡಳಿತ-(ಇ-ಗವರ್ನೆನ್ಸ್-ಎಲೆಕ್ಟ್ರಾನಿಕ್ ಆಡಳಿತ) ಪಂಚಾಯ್ತಿಯವರೆಗೂ ಕಂಪ್ಯೂಟರ್ ಆಡಳಿತ, ಪ್ರತಿನಿತ್ಯ ಜಿಲ್ಲಾ ಆಡಳಿತದೊಂದಿಗೆ ಟೆಲಿ ಕಾನ್ಫರೆನ್ಸ್(ದೂರದರ್ಶಕ ಸಮ್ಮೇಳನ), ಇಲಾಖೆಗಳ ಕಂಪ್ಯೂಟರೀಕರಣ, ಇನ್‌ಫೋಸಿಸ್ ಕಂಪನಿಯವರಿಗೆ ರಾಜ್ಯದ, ಬೆಂಗಳೂರಿನ ಸುಧಾರಣೆಯ ಹೊಣೆ ನೀಡುವುದು ಆಡಳಿತದಲ್ಲಿ ಪಾರದರ್ಶಕತೆ, ದಕ್ಷತೆಯ ಘೋಷಣೆಗಳು, ವಿದಾನಸೌಧದಲ್ಲಿ 'ಪಂಚಿಂಗ್' ವ್ಯವಸ್ಥೆ, ಕಡ್ಡಾಯ ನಿವೃತ್ತಿ, ಭ್ರಷ್ಟಾಚಾರದ ವಿರುದ್ಧ ಸಮರದ ಘೋಷಣೆಗಳ ಮೂಲಕ ಜನರಲ್ಲಿ ಭ್ರಮೆ ಹುಟ್ಟಿಸುವಂತಹದು.

2. ಬಂಡವಾಳವನ್ನು ಮುಖ್ಯವಾಗಿ ವಿದೇಶಿ ಬಂಡವಾಳವನ್ನು ಎಲ್ಲಾ ರಂಗಗಳಲ್ಲಿ ಆಕರ್ಷಿಸಲು ಎಲ್ಲಾ ಸೌಲಭ್ಯಗಳನ್ನು ಸಾರುವುದು, ಕಲ್ಪಿಸುವುದು, ಸರ್ಕಾರದ ಮುಖ್ಯ ಕೆಲಸ ಇದೇ, ಉಳಿದದ್ದೆಲ್ಲಾ ಈ ಬಂಡವಾಳ ನೋಡಿಕೊಳ್ಳುತ್ತದೆ ಎನ್ನುವ ತಿಳುವಳಿಕೆ. ಆದಕ್ಕಾಗಿ ಮಾಹಿತಿ ತಂತ್ರಜ್ಞಾನ ಉದ್ಯಮಕ್ಕೆ 28 ಕೋಟಿ ರೂ. ರಿಯಾಯಿತಿಗಳು, 15 ದಿನದಲ್ಲಿ ವಿದೇಶಿ ಬಂಡವಾಳಕ್ಕೆ ಅನುಮತಿ-ಏಪ್ರಿಲ್ ತಿಂಗಳನ್ನು ಅದಕ್ಕಾಗಿಯೇ ಮೀಸಲಿಡುವ 'ಬಂಡವಾಳ ಮಾಸ' ತೆರಿಗೆ ಪದ್ಧತಿಯ ಬದಲಾವಣೆ ಇತ್ಯಾದಿ ಘೋಷಿಸಲಾಗಿದೆ.


3. ರಾಜ್ಯದಲ್ಲಿನ ಅಭಿವೃದ್ಧಿಯ ಬಗ್ಗೆ ದೊಡ್ಡ ದೊಡ್ಡ ಅವಾಸ್ತವಿಕ ಘೋಷಣೆಗಳು ಅದನ್ನು ಸಾಧಿಸಲು ವಿಶ್ವಬ್ಯಾಂಕ್‌ನಿಂದ ದೊಡ್ಡ ಸಾಲಗಳಿಗಾಗಿ ಅರ್ಜಿ ಪ್ರತಿಮಂತ್ರಿ ಶಾಖೆಯಲ್ಲಿಯೂ ಇಂತಹ ಪ್ರಯತ್ನಗಳು ನಡಿದಿವೆ. ಉದಾ: ರಸ್ತೆಗಳ ಸುಧಾರಣೆಗೆ 1200 ಕೋಟಿ ವಿಶ್ವಬ್ಯಾಂಕ್ ಸಾಲ, ವಿದ್ಯುತ್ ಸುಧಾರಣೆಗಾಗಿ 1500 ಕೋಟಿ ಹೂಡಿಕೆ, ಆರೋಗ್ಯ, ಶಿಕ್ಷಣರಂಗಗಳಲ್ಲಿ ಕೂಡ ಮಾಡುವುದಾಗಿ ಹೇಳಿದ್ದಾರೆ.

4. ಅದೇ ಸಮಯದಲ್ಲಿ ಅಲ್ಪಸಂಖ್ಯಾತರ, ದಲಿತರ ಪರ ಘೋಷಣೆಗಳು ವಸತಿ, ಶಿಕ್ಷಣದ ಬಗ್ಗೆ ಘೋಷಣೆಗಳು ಪ್ರಾದೇಶಿಕ ಅಸಮಾನತೆಯ ನಿವಾರಣೆಯಲ್ಲಿ ಆಸಕ್ತಿ ತೋರಿಸುವ ಮುಖವಾಡ ಅದಕ್ಕಾಗಿ ಸಮಿತಿಗಳ ಮೇಲೆ ಮತ್ತೊಂದು ಸಮಿತಿ ನೇಮಿಸಲಾಗುತ್ತಿದೆ.

ಈ ಎಲ್ಲಾ ಪ್ರಯತ್ನಗಳ ಮುಖ್ಯಸಾರ ಸಾಲಗಳಿಗೆ, ಬಂಡವಾಳಕ್ಕೆ ರಾಜ್ಯದ ಅಭಿವೃದ್ಧಿಯ ಕೀಲಿಕೈಯನ್ನು ಒಪ್ಪಿಸುವುದಕ್ಕಾಗಿ ಅದಕ್ಕಾಗಿ ಅವರ ಶರತ್ತುಗಳು, ಒತ್ತಾಯಗಳಿಗೆ ತಲೆಬಾಗುವುದು. ಇದರ ಭಾಗವಾಗಿ ಬೆಲೆ ದರಗಳ ಏರಿಕೆಗೆ ಮುಕ್ತ ಅವಕಾಶ, ಜನಗಳಿಗೆ ಸಾರ್ವಜನಿಕ ಸೌಲಭ್ಯಗಳ ಉಪಯೋಗದ ನಿರಾಕರಣೆ ಮುಂದಿನ ದಿನಗಳಲ್ಲಿ ಆವರಿಸಲಿವೆ. ಈಗಾಗಲೇ ಬಸ್ ದರ ಏರಿಕೆ

ಪುಟ 3 ಕ್ಕೆ

ಬಿಲ್ ಪ್ಲೀಸ್



ಕೃಪೆ: ಪೊನ್ನಪ್ಪ

ಒಂದು ಹಳ್ಳಿಯ ಒಂದು ಗ್ರಾಮಸಭೆ

ಇತ್ತೀಚೆಗೆ ಹಾನಗಲ್ ತಾಲೂಕಿನ ಕಾಡ ಶೆಟ್ಟಿಹಳ್ಳಿಯಲ್ಲಿ ನಡೆಸಲಾದ ಗ್ರಾಮ ಸಭೆ ಕೇವಲ ಕಾಟಾಚಾರದಾಗಿತ್ತು. ಇಂತಹ ಗ್ರಾಮ ಸಭೆಗಳಿಂದ ಯಾವುದೇ ಉದ್ದೇಶ ಈಡೇರುವುದಿಲ್ಲ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಕಾಡ ಶೆಟ್ಟಿಹಳ್ಳಿ ಗ್ರಾಮ ಘಟಕದ ಅಧ್ಯಕ್ಷ ಸಿ.ಎಂ. ಪಾಟೀಲರು ಅಭಿಪ್ರಾಯ ಪಟ್ಟಿದ್ದಾರೆ.

ಸಾಂವಸಗಿ, ಮಲ್ಲಿಗಾರ, ಸಾತೇನಹಳ್ಳಿ, ಶಿರಮಾಪುರ ಮತ್ತು ಕಾಡ ಶೆಟ್ಟಿ ಹಳ್ಳಿ ಎಂಬ 5 ಗ್ರಾಮಗಳನ್ನು ಒಳಗೊಳ್ಳುವ ಸಾಂವಸಗಿ ಗ್ರಾಮ ಪಂಚಾಯತ್‌ನಲ್ಲಿ ಸುಮಾರು 4 ಸಾವಿರ ಜನ ಸಂಖ್ಯೆಯನ್ನು ಪ್ರತಿನಿಧಿಸುವ 10 ಜನ ಚುನಾಯಿತ ಸದಸ್ಯರಿದ್ದಾರೆ. 6 ತಿಂಗಳಿಗೊಮ್ಮೆ ಸಭೆಗಳನ್ನು ನಡೆಸಲಾಗುತ್ತಿದ್ದರೂ ತಾಲೂಕ ಪಂಚಾಯಿತಿಯ ಜವಾಬ್ದಾರಿಯುತ ಅಧಿಕಾರಿಗಳಾಗಲಿ, ಕೃಷಿ, ನೀರಾವರಿ ಮೊದಲಾದ ಸಂಬಂಧ ಪಟ್ಟ ಇಲಾಖೆಗಳ ಮುಖ್ಯಸ್ಥರಾಗಲಿ ಹಾಜರಿರುವುದಿಲ್ಲ. ಸಭೆಗಳಿಗಾಗಿ ಗ್ರಾಮಸ್ಥರ ಅನುಕೂಲವನ್ನು ಗಣನೆಗೆ ತೆಗೆದುಕೊಳ್ಳದೆ ಸಮಯವನ್ನು ನಿಗದಿಪಡಿಸಲಾಗುತ್ತದೆ. ತಮ್ಮ ಗ್ರಾಮದ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ ಎಂಬ ಆಶಾಭಾವನೆಯಿಂದ ಗ್ರಾಮಸಭೆಗಾಗಿ ಕಾದು ಕುಳಿತುಕೊಳ್ಳುವ ಗ್ರಾಮಸ್ಥರಿಗೆ ನಿರಾಶೆಯಾಗಿ ಗ್ರಾಮ ಸಭೆಗಳು ಅರ್ಥವನ್ನೇ ಕಳೆದುಕೊಳ್ಳುತ್ತವೆ.

ಕಾಡಶೆಟ್ಟಿಹಳ್ಳಿಯಲ್ಲಿ ಅಂದು ಮಧ್ಯಾಹ್ನ 1 ಘಂಟೆಗೆ ಸಭೆ ನಿಗದಿಯಾಗಿತ್ತು. ಸಭೆ ಪ್ರಾರಂಭವಾದದ್ದು ಸುಮಾರು 2.30 ಕ್ಕೆ ಅದೊಂದೇ ದಿನ ಸಾಂವಸಗಿ ಗ್ರಾಮ ಪಂಚಾಯಿತ ವ್ಯಾಪ್ತಿಯೊಳಗಿನ ಐದೂ ಗ್ರಾಮಗಳಲ್ಲಿ ಸಭೆಗಳನ್ನು ಏರ್ಪಡಿಸಲಾಗಿತ್ತು. ಪಂಚಾಯತಿ ಅಧ್ಯಕ್ಷರು ಕಾರ್ಯದರ್ಶಿಯನ್ನು ಕರೆತಂದಿದ್ದರು. ತಾಲೂಕ ಪಂಚಾಯಿತಿಯ ಒಬ್ಬ ಮತ್ತು ಕೃಷಿ ಇಲಾಖೆಯ ಇನ್ನೊಬ್ಬ ಕಾರಕೂನರು ಹಾಜರಿದ್ದರು. 10 ಜನ ಚುನಾಯಿತ ಸದಸ್ಯರಲ್ಲಿ ಕಾಡಶೆಟ್ಟಿಹಳ್ಳಿಯಿಂದ ಚುನಾಯಿತ ರಾಗಿರುವ 3 ಜನ ಮಹಿಳಾ ಸದಸ್ಯರು ಮಾತ್ರ ಹಾಜರಿದ್ದರು. ಸುಮಾರು ಐವತ್ತು ಅರವತ್ತು ಜನ ಗ್ರಾಮಸ್ಥರು ಸೇರಿದ್ದರು. ಸಭೆಯ ಬಗ್ಗೆ ಪೂರ್ವಭಾವಿ ಪ್ರಚಾರ ಮಾಡಲು ವ್ಯವಸ್ಥೆಮಾಡದಿದ್ದುದರಿಂದ ಸಭೆಗೆ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿರಲಿಲ್ಲ.

ಅಧ್ಯಕ್ಷರು ಹಿಂದಿನ ಸಭೆಯ ಠರಾವುಗಳನ್ನು ಓದಿ ಹೇಳಿದರು. 100 ಮಿಟರ್ ಉದ್ದದ ಪಕ್ಕಾ ಗಟಾರ ನಿರ್ಮಿಸಲು 32 ಸಾವಿರ ರೂ. ಅಂದಾಜು ಮಾಡಲಾಗಿತ್ತು. ರೂ.21,900 ಖರ್ಚು ಮಾಡಿ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಲಾಗಿತ್ತು. ಈ ಬಗ್ಗೆ ಹಿಂದಿನ ಗ್ರಾಮ ಸಭೆಯಲ್ಲಿ ತುರುಸಿನ ಚರ್ಚೆ ನಡೆದಿತ್ತು. ಕೇವಲ 8 ರಿಂದ 10 ಸಾವಿರ ರೂಪಾಯಿಗಳನ್ನು ಮಾತ್ರ ಖರ್ಚುಮಾಡಿ ಸುಮಾರು 10 ರಿಂದ 12 ಸಾವಿರ ರೂಪಾಯಿಗಳನ್ನು ತಿಂದುಹಾಕಲಾಗಿದೆ ಎಂಬ ಆರೋಪ ಮಾಡಲಾಗಿತ್ತು. ಮಂಜೂರಾದ ಒಟ್ಟು ಹಣದಲ್ಲಿ ಉಳಿದ ಭಾಗವನ್ನು ಖರ್ಚುಮಾಡಿ ಕೆಲಸವನ್ನು ಪೂರ್ಣಗೊಳಿಸಬೇಕೆಂದು ಹಿಂದಿನ ಗ್ರಾಮ ಸಭೆಯಲ್ಲಿ ಠರಾವು ಪಾಸಾಗಿತ್ತು. ಈ ಸಲ ಆ ಬಗ್ಗೆ ಕೇಳಲಾಗಿ ಉಳಿದ ಹಣ ಬಿಡುಗಡೆಯಾಗಲಿಲ್ಲವೆಂದೂ, ಗಟಾರ ಬಾಬತ್ತು ಖರ್ಚು ವೆಚ್ಚದ ಲೆಕ್ಕ ಸರಿಯಾಗಿದೆ ಎಂದೂ, ಯಾವುದೇ ಅವ್ಯವಹಾರ ನಡೆದಿಲ್ಲ ವೆಂದು ಕಾರ್ಯದರ್ಶಿ ಸಾಕ್ಷಿಹೇಳಿದರು. ಓತಿಕಾಟಕ್ಕೆ ಬೇಲಿಯೇ ಸಾಕ್ಷಿ!

ಗ್ರಾಮದ ರಸ್ತೆಗಳಂತೂ ವಾರಸುದಾರರಿಲ್ಲದೆ ಅನಾಥವಾಗಿ ವರ್ಷಗಳೇ ಕಳೆದಿವೆ. ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ರಸ್ತೆ ರಿಪೇರಿ ಹೆಸರಿನಲ್ಲಿ ರಸ್ತೆಗಳ ಮೇಲೆ ಮಣ್ಣನ್ನು ಸಿಂಪಡಿಸಲಾಗುತ್ತದೆ. ಗಟ್ಟಿ ಗೊರುಜುಮಣ್ಣು ಹಾಕಿದ್ದೇವೆ ಎಂದು ಲೆಕ್ಕ ತೋರಿಸಿ ಕೆಂಪು ಪುಡಿ ಮಣ್ಣನ್ನು ಹಾಕುತ್ತಾರೆ. ಮಳೆ ಬಿದ್ದೊಡನೆ ರಸ್ತೆಗಳು ಕೆಸರಿನ ಗದ್ದೆಗಳಂತಾಗುತ್ತವೆ. ರಸ್ತೆಯ ಮಗ್ಗಲುಗಳಲ್ಲಿ ಚರಂಡಿಗಳಿಲ್ಲದಿರುವುದರಿಂದ ಕೊಳಚೆ ನೀರು ನಡು ರಸ್ತೆಯಲ್ಲಿ ಹರಿಯುತ್ತಿರುತ್ತದೆ. ಮಾಸ್ತಿ ಕಲ್ಲಿನ ಓಣಿ ರಸ್ತೆಗೆ ಅಡ್ಡಲಾಗಿ ಕೆಸರು ನೀರು ಹರಿದು ಹೋಗಲು ಸಿಮೆಂಟ್ ಪೈಪುಗಳನ್ನು ಹಾಕಲಾಗಿತ್ತು. ಪೈಪುಗಳ ಮೇಲೆ ಗೊರಜು ಹಾಕದಿದ್ದುದರಿಂದ ಅವುಗಳ ಮೇಲೆ ಟ್ರಾಕ್ಟರುಗಳು, ಚಕ್ಕಡಿಗಳು ಓಡಾಡಿ ಪೈಪುಗಳು ಒಡೆದು ಹೋಗಿವೆ. ಅನೇಕ ಬಾರಿ ಗ್ರಾಮ ಪಂಚಾಯತಿಯವರ ಗಮನ ಸೆಳೆಯಲಾಗಿತ್ತಾದರೂ ಪಂಚಾಯತಿ ಆಡಳಿತವು ಬೇಜವಾಬ್ದಾರಿಯಿಂದ ವರ್ತಿಸಿತು ಎಂದು ಗ್ರಾಮಸ್ಥರು ತೀವ್ರ ಆಕೇಪ ವ್ಯಕ್ತಪಡಿಸಿದರು.

ಜನತಾ, ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಮೊದಲಾದ ಯೋಜನೆಗಳ ಅಡಿಯಲ್ಲಿ ಹಿಂದುಳಿದ ದುರ್ಬಲ ವರ್ಗಕ್ಕೆ ಸೇರಿದವರಿಗಾಗಿ ಕೊಡಬೇಕಾದ ಮನೆ,ನಿವೇಶನ, ಭಾಗ್ಯಜ್ಯೋತಿ ಸೌಲಭ್ಯಗಳನ್ನು ಆಸ್ತಿವಂತರಿಗೇ ಕೊಡಲಾಗಿದೆ ಎಂದು ಹಿಂದಿನ ಗ್ರಾಮಸಭೆಗಳಲ್ಲಿ ಗ್ರಾಮಸ್ಥರು ಆಕ್ಷೇಪಿಸಿದ್ದರು. ಈ ಸಲದ ಗ್ರಾಮ ಸಭೆಯಲ್ಲೂ ರೈತ ಸಂಘದ ಪ್ರಮುಖರು ಈ ಪ್ರಶ್ನೆಯನ್ನು ಮತ್ತೆ ಪ್ರಸ್ತಾಪಿಸಿದರು. ಶ್ರೀಮತಿ ನೀಲವ್ವ ಕೋಂ.ಸದಾಶಿವಪ್ಪ ಜೇರಗಿ ಎಂಬ ವಿಧವೆಗೆ ಕಟ್ಟಿಸಿಕೊಡಲಾದ ಆಶ್ರಯ ಮನೆಗೆ ಕಿಟಕಿ ಬಾಗಿಲುಗಳಿಲ್ಲ. ಗೋಡೆಗಳಿಗೆ ಗಿಲಾಯಿ ಮಾಡಿರುವುದಿಲ್ಲ. ಸಂಡಾಸ್ ಹಾಗೂ ಸ್ನಾನದ ಕೋಣೆ ಕಟ್ಟಿಸಿಕೊಟ್ಟಿಲ್ಲ, ಪ್ಲಾನ್ ಹಾಗೂ ಎಸ್ಟಿಮೇಟಿನಲ್ಲಿ ಇವೆಲ್ಲವೂ ಸೇರಿದ್ದರೂ ಯಾಕೆ ಒದಗಿಸಲಾಗಿಲ್ಲ ಎಂಬುದು ರೈತ ಸಂಘದವರ ಪ್ರಶ್ನೆ. ಹಾಗೆಯೇ ಪರಿಶಿಷ್ಟ ಜಾತಿಗೆ ಸೇರಿದ ಮಾದೇವಪ್ಪ ಮಾದರ, ನಾಗಪ್ಪ ಮಾದರ, ಯಲ್ಲಪ್ಪ ಮಾದರ, ಶಿವಪ್ಪ ಮಾದರ, ಕನ್ನಪ್ಪ ತಳವಾರ ಮೊದಲಾದವರ ಮನೆಗಳನ್ನು ಕಟ್ಟಿಸಿ 3 ರಿಂದ 4 ವರ್ಷ ಕಳೆದರು ಅವುಗಳಿಗೆ ಕದ, ಬಾಗಿಲುಗಳನ್ನು ಒದಗಿಸಿಲ್ಲ. ಆಸ್ತಿವಂತರ ಮನೆಗಳಿಗೆ ಭಾಗ್ಯ ಜ್ಯೋತಿ ಬಂದಿದೆ, ಆದರೆ ಇಬ್ರಾಹಿಂಸಾಬ್ ನಂದಿಹಳ್ಳಿ, ಸಾಬ್ಜಾನ್ ಖಾಂ ಮುಲ್ಲಾ, ಮೂಬೂಲಿಖಾಂ ಮುಲ್ಲಾ, ಮಹದೇವಪ್ಪ ಮಾದರ, ಧರ್ಮಣ್ಣ ಬಡಿಗೇರ, ನೀಲವ್ವ ಜೇರಗಿ ಮೊದಲಾದವರ ಜನತಾ ಮನೆಗಳಿಗೆ ಭಾಗ್ಯ ಜ್ಯೋತಿ ಬಂದಿಲ್ಲ ಏಕೆ? ಪ್ರಶ್ನೆಗಳ ಸುರಿಮಳೆ!

ಮನೆ ಕಂದಾಯವನ್ನು ಹೆಚ್ಚಿಸಿರುವ ಗ್ರಾಮ ಪಂಚಾಯಿತಿ ತೀರ್ಮಾನವು ತೀವ್ರ ಟೀಕೆಗೆ ಒಳಗಾಯಿತು. ಈ ಸಲ ಅತಿ ವೃಷ್ಟಿಯಿಂದಾಗಿ ಅನೇಕ ಬಡವರ ಮನೆಗಳಿಗೆ ಹಾನಿಯಾಗಿ ಗೋಡೆಗಳು ಕುಸಿದು ಬಿದ್ದಿದ್ದವು. ನೈಜ ಸಂತ್ರಸ್ತರಿಗೆ ಇಲ್ಲಿಯವರೆಗೂ ಪರಿಹಾರ ದೊರಕಲಿಲ್ಲ. ಆದರೆ ಎಳ್ಳಷ್ಟು ಹಾನಿಯಾಗದೆ ಇರುವ ಕೆಲವೊಂದು ಆಸ್ತಿವಂತರು ತಮ್ಮ ರಾಜಕೀಯ ಬಲದಿಂದ ಪರಿಹಾರ ಪಡೆದುಕೊಂಡದ್ದು ಹಳೆಯ ಸುದ್ದಿ. ಇಂತಹ ಪರಿಸ್ಥಿತಿಯಲ್ಲಿ ಮನೆ ಕಂದಾಯವನ್ನು ಹೆಚ್ಚಿಸುವ ಕ್ರಮವನ್ನು ಕೈಬಿಡಬೇಕೆಂದು ಗ್ರಾಮ ಸಭೆಯು ಸರ್ವಾನುಮತದ ಠರಾವನ್ನು ಬರೆಯಿಸುವಲ್ಲಿ ಯಶಸ್ವಿಯಾಯಿತು.

ಗ್ರಾಮದ ಪ್ರಾಥಮಿಕ ಶಾಲೆಯ ಸುತ್ತಲು ಆವರಣ ಗೋಡೆಯನ್ನು ಕಟ್ಟುವ ತೀರ್ಮಾನ ಮಾಡಿ ಹಣವನ್ನು ಸಹ ಮಂಜೂರು ಮಾಡಿಕೊಳ್ಳಲಾಗಿತ್ತು. ಮಂಜೂರಾದ ಪೂರ್ತಿ ಹಣವನ್ನು ಖರ್ಚು ಮಾಡದೆ ಕಟ್ಟಿದ 50 ಮೀಟರಿನಷ್ಟು ಗೋಡೆ ಬಿದ್ದು ಹೋಗಿತ್ತು. ಹಿಂದಿನ ಗ್ರಾಮ ಸಭೆಗಳಲ್ಲಿ ಈ ಬಗ್ಗೆ ಪ್ರಶ್ನಿಸಲಾಗಿತ್ತಾದರೂ ಇಲ್ಲಿಯವರೆಗೆ ಕೆಲಸ ಪೂರ್ಣಗೊಳಿಸಲಾಗಿಲ್ಲ. ಗ್ರಾಮ ಪಂಚಾಯತಿಗೆ ಬರುವ ಅನುದಾನವನ್ನು ಗ್ರಾಮಗಳ ಅಭಿವೃದ್ಧಿ ಕೆಲಸಗಳಿಗೆ ಹಂಚಿಕೊಡುವಾಗಲೂ ದುರುದ್ದೇಶದ ಪಕ್ಷಪಾತ ಎದ್ದು ಕಾಣುತ್ತದೆ. ಗ್ರಾಮಗಳ ಜನಸಂಖ್ಯೆ ಅಥವಾ ಚುನಾಯಿತ ಸದಸ್ಯರಾದ ಸಂಖ್ಯೆಯ ಅನುಪಾತದಲ್ಲಿ ಅನುದಾನವನ್ನು ವಿತರಣೆ ಮಾಡುವ ಬದಲು ಯಾರೂ ಕೇಳುವವರು ಇಲ್ಲದ ಗ್ರಾಮಕ್ಕೆ ಹೆಚ್ಚು ಹಣವನ್ನು ಒದಗಿಸಿದ ದಾಖಲೆ ಸೃಷ್ಟಿ ಮಾಡಿ ಹಣವನ್ನು ಲಪಟಾಯಿಸಲಾಗುತ್ತದೆ!!

ಒವರ್ ಟ್ಯಾಂಕ್ ಮೂಲಕ ನಲ್ಲಿ ನೀರನ್ನು ಒದಗಿಸುವ ಕೆಲ್ಸ ಆರಂಭವಾಗಿದೆ. ಲೋಕಸಭಾ ಚುನಾವಣೆ ಹತ್ತಿರ ಬರುತ್ತಿದ್ದಂತೆ ಟ್ಯಾಂಕ್ ನಿರ್ಮಾಣ ಆಗುವ ಮೊದಲೇ ಅವಸರವಸರದಲ್ಲಿ ಕೆಲವು ಓಣಿಗಳಲ್ಲಿ ನಲ್ಲಿಗಳನ್ನು ಜೋಡಿಸಲಾಯ್ತು. ಚುನಾವಣೆಯ ನಂತರ ಕೆಲಸ ನಿಧಾನವಾಗುತ್ತಿದೆ. ಒವರ್ ಟ್ಯಾಂಕಿಗೆ ನೀರು ಸರಬರಾಜು ಮಾಡಲು ಪ್ರತ್ಯೇಕ ಕೊಳವೆ ಬಾವಿ ಇಲ್ಲ. ಗ್ರಾಮದ ನಡುವೆ ಇರುವ ಒಂದು ಕೊಳವೆ ಭಾವಿಗೆ ಜೋಡಿಸಲಾದ ಕೈ ಪಂಪನ್ನು ಬಂದ್ ಮಾಡಿ ಆ ಕೋಳವೆ ಭಾವಿಯ ನೀರನ್ನು ಟ್ಯಾಂಕಿಗೆ ಮೇಲೆತ್ತಲು ಉದ್ದೇಶಿಸಲಾಗಿದೆ. ಲಭ್ಯ ಇರುವ ಕೊಳವೆ ಭಾವಿಯೊಂದನ್ನು ಬಂದ್ ಮಾಡಿದರೆ ವಿದ್ಯುತ್ ಪೂರೈಕೆ ನಿಂತುಹೋದಾಗ ಕುಡಿಯುವ ನೀರಿಗಾಗಿ ಪರದಾಡಬೇಕಾಗು ವುದೆಂದು ಗ್ರಾಮಸ್ಥರಲ್ಲಿ ಆತಂಕ ಉಂಟಾಗಿದೆ.

ಗ್ರಾಮದ ಜನತಾ ನಿವೇಶನಗಳಿಗೆ ಹಾಗೂ ಹರಿಜನ ಕೇರಿಗೆ ಇಲ್ಲಿಯ ವರೆಗೆ ಚರಂಡಿ ನಿರ್ಮಾಣವಾಗಿಲ್ಲ. ಸಾರ್ವಜನಿಕ ಶೌಚಾಲಯವಿಲ್ಲ. ಪ್ರಾಥಮಿಕ ಶಾಲೆಗೆ ಬರುವ ಮಕ್ಕಳಿಗೆ ಮುಖ್ಯವಾಗಿ ಹೆಣ್ಣು ಮಕ್ಕಳಿಗೆ ಶೌಚಾಲಯದ ಆವಶ್ಯಕತೆಯಿದೆ. ಗ್ರಾಮದ ಜುಮ್ಮಾ ಮಸೀದಿಗೆ ಶೌಚಾಲಯದ ಆವಶ್ಯಕತೆಯಿದೆ. ಗ್ರಾಮದ ಮಹಿಳಾ ಮಂಡಳಕ್ಕೆ ಒಂದು ನಿವೇಶನವನ್ನು ನೀಡಬೇಕಾಗಿದೆ. ಗ್ರಾಮಕ್ಕೆ ಒಂದು ಸ್ಮಶಾನ ಬೇಕೆಂಬುದು ಬಹಳ ದಿನಗಳ ಬೇಡಿಕೆಯಾಗಿದೆ. ಚುನಾಯಿತ ಪ್ರತಿನಿಧಿಗಳು ಗ್ರಾಮದ ಈ ಕೆಲವು ಬೇಡಿಕೆಗಳ ಬಗ್ಗೆ ಹೆಚ್ಚು ಆಸಕ್ತಿವಹಿಸಬೇಕಾಗಿದೆ.

ಕಾಡಶೆಟ್ಟಿಹಳ್ಳಿಯಿಂದ ಕಂಚಿನೆಗಳೂರಿಗೆ ಹೋಗುವ ಒಡ್ಡಿನ ದಾರಿಯಲ್ಲಿ 3 ಮಿ... ಸೇತುವೆಗಳನ್ನು ನಿರ್ಮಿಸಲಾಗಿದೆ ಎಂದು ಹೇಳಲಾಗುತ್ತದೆ. ಆದರೆ, ಕಟ್ಟಿಸಿದ್ದು ... ಮಾತ್ರ. ಒಂದು ಸೇತುವೆಗಾಗಿ ಹಾಕಲಾಗಿದ್ದ 3 ಪೈಪುಗಳಲ್ಲಿ ... ಕಾಣೆಯಾಗಿವೆ., ಕೇಳುವವರಿಲ್ಲ. ರೈತರ ಹೊಲಗದ್ದೆಗಳಿಗೆ ಹೋಗುವ ರಸ್ತೆಗಳು ಹಾಳಾಗಿ ಬಹಳ ತೊಂದರೆಯಾಗಿದೆ. ಪಾಳಾ ಬಾದಾಮಿ ರಸ್ತೆಗೆ ಕೂಡು... ಸುಮಾರು ಮೂರುವರೆ ಕಿ.ಮೀ. ಉದ್ದದ ಬೆಳಗಾಲ ಓಣಿ ರಸ್ತೆ ತೀವ್ರ ದುರಸ್ತಿಯಾಗಬೇಕಾಗಿದೆ. ಕಾಡಶೆಟ್ಟಿಹ... ಅರಳೇಶ್ವರ ಮಾರ್ಗವಾಗಿ ಸಾಗು... ಬೆಳಗಾಲ ಪೇಟೆ ಹೊಂಕಣ ರಸ್ತೆ ನಬಾರ್ಡ್... ಯೋಜನೆಯಲ್ಲಿ ನಿರ್ಮಿಸಲಾಗಿದ್ದು ಡಾಂಬರೀಕರಣಕ್ಕಾಗಿ ಕಾಯುತ್ತಿದೆ.

ಗ್ರಾಮದ ಅಭಿವೃದ್ಧಿಗೆ ಸಂಬಂಧಿಸಿ... ಇಂತಹ ಪ್ರಶ್ನೆಗಳ ಬಗ್ಗೆ ನಿರ್ಲಕ್ಷ... ತೋರಲಾಗುತ್ತಿದೆ ಎಂದು ಗ್ರಾಮಸ್ಥರ ಪರವಾಗಿ ರೈತ ಸಂಘದ ಕಾರ್ಯಕರ್ತ... ಗ್ರಾಮಸಭೆಯಲ್ಲಿ ತೀವ್ರ ಆಕ್ಷೇ... ವ್ಯಕ್ತಪಡಿಸಿದರು. ರೈತ ಸಂಘ... ಕಾಡಶೆಟ್ಟಿಹಳ್ಳಿ ಗ್ರಾಮ ಘಟಕದ ಅಧ್ಯಕ್ಷರಾ... ಸಿ.ಎಂ.ಪಾಟೀಲ್, ಅಲ್ಲ... ಕಾರ್ಯಕರ್ತರಾದ ಮರ್ದಾನ್ ಸಾ... ಕೋಚಿ, ಈಶ್ವರಗೌಡ ಪಾಟೀಲ, ಅಬ್ದುಲ್... ಸಾಬ್ ಗೌಡಗೇರಿ, ಕಲ್ಯಾಣಗೌ... ಪಾಟೀಲ್, ಜಗದೇವಪ್ಪ ಕ್ಷವರ... ಮೊದಲಾದವರು ಅಂದಿನ ಗ್ರಾಮ ಸಭೆ... ನಡುವಳಿಕೆಯಲ್ಲಿ ಪ್ರಮುಖ ಪಾ... ವಹಿಸಿದ್ದರು.....

- ವಿಜಯಕುಮಾರ್ ದೊಡ್ಡಮ...

ಡಿಸೆಂಬರ್ 2 ರ ಧರಣಿ: ಬಂಧಿಯಾದ ಗ್ರಾ.ಪಂ. ಕಾರ್ಯದರ್ಶಿ, ನಿದ್ದೆಯಿಂದ ಎದ್ದು ಬಂದ ತಹಶೀಲ್ದಾರ

- ನೀಲಾ ಕೆ.

ಡಿಸೆಂಬರ್ 2 ರಂದು ಕರ್ನಾಟಕ ಪ್ರಾಂತ ರೈತ ಸಂಘದಿಂದ ಗ್ರಾಮ ಪಂಚಾಯಿತ್ ಮುಂದೆ ಒಂದು ದಿನ ಧರಣಿ ನಡೆಸುವ ಕಾರ್ಯಕ್ರಮಕ್ಕೆ ಕರೆಕೊಡಲಾಗಿತ್ತು. ಗುಲಬರ್ಗಾ ಜಿಲ್ಲೆಯಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಮಿತಿಯೂ ನಾಗರೀಕ ಮತ್ತು ಗ್ರಾಮೀಣ ಪ್ರದೇಶದ ಸಮಸ್ಯೆಗಳಿಗಾಗಿ ಪ್ರಾಂತ ರೈತ ಸಂಘದೊಂದಿಗೆ ಜಂಟಿಯಾಗಿ ಹೋರಾಟ ನಡೆಸಲು ತೀರ್ಮಾನಿಸಿತ್ತು. ಅಂತೆಯೇ ಹಲವಾರು ಗ್ರಾಮ ಪಂಚಾಯಿತ್ ಮುಂದೆ ಯಶಸ್ವಿ ಧರಣಿಗಳು ನಡೆದವು.

ಆದರೆ ಗುಲ್ಬರ್ಗಾ ತಾಲ್ಲೂಕಿನ ಮಹಾಗಾಂವ ಮತ್ತು ನಾಗೂರು ಪಂಚಾಯಿತ್ ಮುಂದೆ ನಡೆಸಿದ ಧರಣಿ ಮಾತ್ರ ವಿಶಿಷ್ಟ ಸ್ವರೂಪದಾಗಿತ್ತು. ಮಾತ್ರವಲ್ಲ ಪಂಚಾಯಿತ್ ಕಾರ್ಯದರ್ಶಿ ತಹಶೀಲ್ದಾರ, ಪೋಲಿಸರಿಗೆ ಚುರುಕು ಮುಟ್ಟಿಸಿದ ಹೋರಾಟವೂ ಆದಾಗಿತ್ತು.

ನಾಗೂರು ಗ್ರಾಮ ಪಂಚಾಯಿತ್ ವ್ಯಾಪ್ತಿಯಲ್ಲಿ ಬರುವ ತಡಕ್ಕಲ್ , ಹರ್ಕಂಚಿ ಗ್ರಾಮಗಳ ಜೆಎಂಎಸ್ ಮತ್ತು ಎಐಕೆಎಸ್ ಘಟಕದಿಂದ ಕಳೆದ ಒಂದು ವರ್ಷದಿಂದ ಮನೆ ನಿವೇಶನಗಳಿಗಾಗಿ ಹಸಿರು ಕಾರ್ಡುಗಳಿಗಾಗಿ ನಿರಂತರ ಹೋರಾಟ ನಡೆಸುತ್ತ ಬಂದಿರುವರು. ಹಿಂದೊಮ್ಮೆ ಮಳೆ ಬಂದು ಮನೆಯೊಳಗೆ ನೀರು ನುಗ್ಗಿದಾಗ ಗ್ರಾಮದ ಹರಿಜನ ಓಣಿಯ ಜನರೆಲ್ಲ ರಸ್ತೆಗೆ ಬಂದು ದಿಢೀರಂತ ರಸ್ತೆ ತಡೆ ಚಳುವಳಿ ನಡೆಸಿರುವ ಕಾರಣ ಜಿಲ್ಲಾ ಕೇಂದ್ರದಿಂದ ಸಹಾಯಕ ಆಯುಕ್ತ ತಹಶೀಲ್ದಾರರು ಜೀಪು ತಗೊಂಡು ದೌಡಾಯಿಸಿ ಪರಿಹಾರ ವಿತರಿಸುವ ಕೆಲಸದಲ್ಲಿ ತೊಡಗಿಸಬೇಕಾಯಿತು. ತಾತ್ಕಾಲಿಕವಾಗಿ ಕಳೆದ ವರ್ಷ ಪರಿಹಾರ ಪಡೆಯಲು ಸಾಧ್ಯವಾಯಿತು. ಆದರೆ ಶಾಶ್ವತ ಪರಿಹಾರ ಮಾತ್ರ ನೆನೆಗುದಿಗೆ ಬಿದ್ದಿತ್ತು.

ಡಿಸೆಂಬರ್ 2 ರ ಹೋರಾಟ ಜನರ ಮನಸ್ಸಿನೊಳಗಿನ ಬೇಗುದಿ ಬಯಲಿಗೆ ಬರುವಂತೆ ಮಾಡಿತು. ಡಿ. 2 ರಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಮತ್ತು ಪ್ರಾಂತ ರೈತ ಸಂಘದ ನೂರಾರು ಕಾರ್ಯಕರ್ತರು ಬಾವುಟಗಳನ್ನು ಕೈಯಲ್ಲಿ ಹಿಡಿದು ಗ್ರಾಮ ಪಂಚಾಯಿತ್ ಮುಂದೆ ಕುಳಿತರು. ಸಾಯಾಂಕಾಲ 6 ಗಂಟೆಯಾದರೂ ಒಬ್ಬ ಅಧಿಕಾರಿಯ ಪತ್ತೆ ಇಲ್ಲ. ಜನರಿಗೆ ಸಿಟ್ಟೇರ ತೊಡಗಿತ್ತು. ಪೋಲಿಸರು "ಧರಣಿ ಮುಗಿಸಿ ಮನೆಗೆ ಹೋಗಿ ...... " ಎಂದು ಹೇಳತೊಡಗಿದರು. ಗ್ರಾ. ಪಂ. ಕಾರ್ಯದರ್ಶಿಯು ಮನವಿ ಪತ್ರ ಪಡೆದ ಮೇಲೆ ಕಳಿಸುವುದಾಗಿ ನುಣುಚಿಕೊಳ್ಳತೊಡಗಿದ- ಮಹಾಗಾಂವ್ ಗ್ರಾಮ ಪಂಚಾಯಿತ್ ಗೇ ಬಂದು ಮನವಿ ಪತ್ರ ಪಡೆದು ಜನರೊಂದಿಗೆ ಸಮಸ್ಯೆಗಳ ಬಗ್ಗೆ ಚರ್ಚಿಸಿ ಆಗಿಂದ ಹಾಗೆಯೇ ತಹಶೀಲ್ದಾರ ಹೋಗಿದ್ದ ಸುದ್ದಿ ತಿಳಿಯುತ್ತಲೇ ನಾಗೂರು ಪಂಚಾಯಿತ್ ಮುಂದೆ ಧರಣಿ ಕುಳಿತವರು ಕೆರಳಿ ಕೆಂಡವಾದರು. ನುಣುಚಿಕೊಳ್ಳುವ ಕಾರ್ಯದರ್ಶಿಯನ್ನು ಪಂಚಾಯತ್ ಕಛೇರಿಯೊಳಗೆ ಕೂಡಿ ಹಾಕಿದರು. ತಹಶೀಲ್ದಾರ ಬರುವವರೆಗೆ ನಮ್ಮ ಸಮಸ್ಯೆಗಳ ಬಗ್ಗೆ ಚರ್ಚೆಯಾಗುವವರೆಗೆ ಮನೆಗೆ ಹಿಂದಿರುಗಲಾರೆವೆಂದು ಬಂದ ಜನರೆಲ್ಲಾ ಧರಣಿಯನ್ನು ಪಂಚಾಯಿತ್ ಘೇರಾವ್ ಆಗಿ ಮಾರ್ಪಡಿಸಿದರು. ರಾತ್ರಿ 9 ಘಂಟೆಯಾದರೂ ತಹಶೀಲ್ದಾರ ಬರಲಿಲ್ಲ. ಚಳುವಳಿ ತೀವ್ರ ಸ್ವರೂಪ ಪಡೆಯುತ್ತಿರುವುದರಿಂದ ಪೋಲಿಸರಿಗೂ ದಿಕ್ಕು ತೋಚದಂತಾಯಿತು. ಕೊನೆಗೆ ಗುಲ್ಬರ್ಗಾದಲ್ಲಿರುವ ತಹಶಿಲ್ದಾರ ನಿವಾಸಕ್ಕೆ ಸುದ್ದಿ ತಿಳಿದ ಕೂಡಲೇ, ನಿದ್ದೆಗಣ್ಣಲ್ಲಿದ್ದ ತಹಶೀಲ್ದಾರರಿಗೆ ಪರಿಸ್ಥಿತಿಯ ಅರಿವಾಗತೊಡಗಿತ್ತು. ಇನ್ನು ನಿಧಾನಿಸಿದರೆ ಏನೆಲ್ಲಾ ಅನಾಹುತ ಘಟಿಸಬಹುದು ಎಂಬ ಕಲ್ಪನೆ ಬರುತ್ತಿದ್ದಂತೆಯೇ ಜೀಪ್ ತಗೊಂಡು ನಾಗೂರು ಕಡೆಗೆ ಧಾವಿಸಿದರು.

ನಾಗೂರು ಗ್ರಾಮ ಪಂಚಾಯಿತ್ ಬರುವ ವರೆಗೂ ಅಲ್ಲಿನ ಚಳುವಳಿಗಾರರು ಘೋಷಣೆಗಳೊಂದಿಗೆ ಹೋರಾಟ ನಿರತರಾಗಿದ್ದರು. ಅಲ್ಲಿಗೆ ಬಂದ ತಹಶೀಲ್ದಾರರು ಜನರ ಬೇಡಿಕೆ ಪಟ್ಟಿಯನ್ನು ಪಡೆದು ಒಂದೊಂದಾಗಿ ಚರ್ಚಿಸಿದ ಮೇಲೆ ಮತ್ತು ಪರಿಹಾರ ಕೈಗೊಳ್ಳುವ ನಿರ್ಣಯ ಮಾಡಿದ ಮೇಲೆಯೇ ಪಂಚಾಯಿತ್ ಸೆಕ್ರೆಟರಿಗೆ ಮುಕ್ತಿ ದೊರೆಯಿತು. ಆದರೆ ತಹಶೀಲ್ದಾರರಿಗೆ ಮಾತ್ರ ಮುಕ್ತಿ ದೊರೆಯಲಿಲ್ಲ. ಜನರ ಆಕ್ರೋಶ ಮೇರೆ ಮೀರುತ್ತಿರುವ ಲಕ್ಷಣಗಳು ಕಾಣಿಸುತ್ತಿರುವಂತೆ ತಾವು ಇದೇ ರಾತ್ರಿ 12 ಗಂಟೆಯಾದರೂ ಜಿಲ್ಲಾಧಿಕಾರಿಗಳನ್ನು ಎಬ್ಬಿಸಿ ಜನರ ಸಮಸ್ಯೆಯ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದಾಗಿ ಹೇಳಿದ ಮೇಲೆಯೇ ಚಳುವಳಿಗಾರರು ಒಪ್ಪುವ ಸಮಯದಲ್ಲಿ ರಾತ್ರಿ 10.30 ದಾಟ್ಟಿತ್ತು.

ಅಲ್ಲಿಂದ ಸೀದಾ ಗುಲ್ಬರ್ಗಾಕ್ಕೆ ಬಂದ ತಹಶೀಲ್ದಾರರು ಜಿಲ್ಲಾಧಿಕಾರಿಯನ್ನು ನಿದ್ದೆಯಿಂದ ಎಬ್ಬಿಸಿ ಚರ್ಚಿಸಬೇಕಾಯಿತು. ಜನರ ಚಳುವಳಿ ತೀವ್ರಗೊಂಡಲ್ಲಿ ಪರಿಣಾಮಗಳು ಏನೆಲ್ಲಾ ಆಗಬಹುದು ಎನ್ನುವುದಕ್ಕೆ ಇದೊಂದು ಸಾಕ್ಷಿಯಲ್ಲವೇ?

ಈ ಚಳುವಳಿಯ ನೇತೃತ್ವ ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಮಹಾದೇವಿ ತಡಕ್ಕಲ್, ರತ್ನಮ್ಮ ತಡಕ್ಕಲ್, ದೇವೆಂದ್ರಪ್ಪ ತಡಕ್ಕಲ್, ಶಿವಶರಣಪ್ಪ, ಹರ್ಕಂಚಿ, ಗಂಗಾಧರ ಹರ್ಕಂಚಿ, ನಾಗಮ್ಮ ಹರ್ಕಂಚಿ ಇವರು ವಹಿಸಿದರು.

ಕಾಂಗ್ರೈ ಸರಕಾರ ಸಾಗುತ್ತಿರುವ ದಾರಿ

ಪುಟ 2 ರಿಂದ

ಮಾಡಿದ್ದಾರೆ. ಹಾಲಿನ ಬೆಲೆ, ಕುಡಿಯುವ ನೀರಿನ ಬೆಲೆ, ವಿದ್ಯುತ್ ದರಗಳ ಏರಿಕೆಯ ಘೋಷಣೆ ಪ್ರಯತ್ನಗಳು ನಡೆದಿವೆ. ಮತ್ತೊಂದೆಡೆ . ಮಾಲೀಕರ ಮರ್ಜಿಗಳಿಗನುಗುಣವಾಗಿ ಕಾರ್ಮಿಕ ನೀತಿಯನ್ನು ಅನುಸರಿಸುವ ಸೂಚನೆಗಳಿವೆ. ಮಾಲಿಕರ ಸಭೆಯೊಂದರಲ್ಲಿ ನಿಮ್ಮ ಇಚ್ಛೆಯೇ ನಮಗೆ ಆಜ್ಞೆ ಎಂದು ಮುಖ್ಯಮುಂತ್ರಿಗಳು ಹೇಳಿದ್ದಾರೆ. ವೇಗದ ಆಡಳಿತ ಜನರ ಮೇಲಿನ ದಬ್ಬಾಳಿಕೆ, ಚಳುವಳಿಯ ದಮನದ ವೇಗ, ಪರಿಣಾಮಕಾರಿಯನ್ನು ಹೆಚ್ಚಿಸುತ್ತದೆ ಎಂಬುದನ್ನು ಗಮನಿಸಬೇಕು. ರಾಜ್ಯದಲ್ಲಿ ಹೆಚ್ಚು ಬಡಜನತೆಯ, ಕೆಳಜಾತಿಗಳ ಬೆಂಬಲದ ಮೇಲೆ ಅಧಿಕಾರಕ್ಕೆ ಬಂದಿರುವ ಅವರ ಜೀವನಕ್ಕೆ ಮುಳುವಾಗುವ ನೀತಿಗಳನ್ನು ಅನುಸರಿಸಲಿದೆ. ಅದನ್ನು ಎದುರಿಸಲು ಜನರನ್ನು ಸಜ್ಜು ಮಾಡಬೇಕಾಗಿದೆ.

ಬೆಲೆಗಳ ಏರಿಳಿತ

ಈರುಳ್ಳಿ (ಉಳ್ಳಾಗಡ್ಡಿ) ಹಾಲು, ಆಲೂಗಡ್ಡೆ, ತೊಗರಿ, ಹತ್ತಿಯ ಬೆಲೆಗಳಲ್ಲಿ ಕುಸಿತವಾಗಿದೆ. ರೈತರು ಸ್ವಯಂ ಸ್ಫೂರ್ತಿಯಲ್ಲಿ ಹೋರಾಟಕ್ಕಿಳಿದು ಪರಿಸ್ಥಿತಿ ಬಿಗಡಾಯಿಸುವ ಮಟ್ಟಕ್ಕೆ ಹೋಗುವವರೆಗೂ ಈ ದಕ್ಷ ಹೈಟೆಕ್ ಸರ್ಕಾರ ಸ್ಪಂದಿಸಲಿಲ್ಲ. ನಂತರ ಹತ್ತುಕೋಟಿ ರೂ. ಇದ್ದ ಆವರ್ತನಿಧಿಯನ್ನು 20 ಕೋಟಿಗೆ ಏರಿಸಿ ಸರ್ಕಾರದ ಕೊಳ್ಳುವ ಬೆಲೆಯನ್ನು ಘೋಷಿತ ಆಲೂಗಡ್ಡೆ ವಿಷಯಕ್ಕೂ ಇದನ್ನು ಅನುಸರಿಸಿತು.ಆದರೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿ ಕೇಂದ್ರ ಸರ್ಕಾರದ ನೀತಿಗಳ ಫಲವಾದ ಈ ಕುಸಿತಕ್ಕೆ ಕೇಂದ್ರವೇ ಹೆಚ್ಚು ಹಣದ ವಿನಿಯೋಗ ಮಾಡಿ ನಿಧಿ ಸ್ಥಾಪಿಸಲು ಒತ್ತಾಯ ಮಾಡಬೇಕು. ಬೆಲೆ ಕುಸಿತಕ್ಕೆ ಒಳಗಾದ ಎಲ್ಲಾ ಬೆಳೆಗಳಿಗೂ ಈ ಕೊಳ್ಳುವುದನ್ನು ವಿಸ್ತರಿಸಬೇಕು. ಬೆಳೆ ಮಾರುಕಟ್ಟೆಗೆ ಬರುವ ಮೊದಲೇ ಸರ್ಕಾರದ ಕೊಳ್ಳುವ ಬೆಲೆಯನ್ನು ಘೋಷಿಸಿ ಮಾರುಕಟ್ಟೆಗೆ ಇಳಿಯಬೇಕು.

ಸಮಗ್ರ ಯೋಜನೆ

ಕರ್ನಾಟಕದ ಅಭಿವೃದ್ಧಿಗಾಗಿ ಎಂದು ಇಷ್ಟೆಲ್ಲಾ ಘೋಷಣೆಗಳನ್ನು ಮಾಡಿರುವ ಸರ್ಕಾರ ಇಂದು ರಾಜ್ಯದ ಕೈಗಾರಿಕೆ, ಕೃಷಿ, ಅಭಿವೃದ್ಧಿ ನಿರುದ್ಯೋಗ ನಿವಾರಣೆ, ಬಡತನಕ್ಕೆ ಪರಿಹಾರ ನೀಡುವ ಕರ್ನಾಟಕದ ಅಭಿವೃದ್ಧಿಗಾಗಿ ಸಮಗ್ರ ಯೋಜನೆಯನ್ನು ರೂಪಿಸುವ ಯಾವುದೇ ಪ್ರಯತ್ನ ಮಾಡಿಲ್ಲ. ಕರ್ನಾಟಕದಲ್ಲಿ ಬಿಕ್ಕಟ್ಟಿನಲ್ಲಿ ಸಿಲುಕಿರುವ ಶೇ 30 ರಷ್ಟು ಸಣ್ಣ ಕೈಗಾರಿಕೆಗಳನ್ನು, ಜವಳಿ, ಸಕ್ಕರೆ ಮೊದಲಾದ ಅನೇಕ ಉದ್ಯಮಗಳ ಬೆಳವಣಿಗೆಗೆ ಯಾವುದೇ ಗಮನ ಹರಿಸಿಲ್ಲ. ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಸಾರ್ವಜನಿಕ ಉದ್ಯಮಗಳ ಬಿಕ್ಕಟ್ಟನ್ನು ಪರಿಹರಿಸದೆ ಕೇವಲ ಹೈಟೆಕ್ ಉದ್ಯಮಗಳಿಂದ ಮಾತ್ರ ರಾಜ್ಯದ ಬೆಳವಣಿಗೆ ಹಾಗೂ ಉದ್ಯೋಗದ ನಿರ್ಮಾಣ ಆಗುವುದಿಲ್ಲ ಎಂಬುದನ್ನು ಸರ್ಕಾರ ಅರ್ಥಮಾಡಿಕೊಳ್ಳಬೇಕು. ಕೃಷಿ ಅಭಿವೃದ್ಧಿ ಸಂಶೋಧನೆಯ ಮೇಲೆ ಹಣ ಹೂಡಿಕೆ ಮೂಲಭೂತ ಸೌಕರ್ಯಗಳಾದ ರಸ್ತೆ , ವಿದ್ಯುತ್, ನೀರಾವರಿ ಇವುಗಳ ಮೇಲೆ ಸರ್ಕಾರದ ವೆಚ್ಚ, ಪಾತ್ರ ಹೆಚ್ಚಾಗಬೇಕು.

ಒಂದು ಕಡೆ ಹೈಟೆಕ್ ಮಾತನಾಡುತ್ತಿರುವಾಗಲೇ ಬಾಬಾಗಳ, ಮಠಾಧಿಪತಿಗಳ ಕಾಲಿಗೆ ಬೀಳುವ ವಾಸ್ತು, ಹೋಮಗಳಿಗೆ ಶರಣಾಗುವ ಮುಖ್ಯಮಂತ್ರಿಗಳ ಕಂದಾಚಾರವೂ ಖಂಡನೀಯ ಜಾಗತಿಕ ಮಟ್ಟದಲ್ಲಿರುವ ಐ.ಎಂ.ಎಫ್. ನಿರ್ದೇಶಿತ ದಾರಿಯನ್ನು ತುಳಿಯುತ್ತಿರುವ ಎಲ್ಲಾ ದೇಶಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ದುಡಿಯುವ ಜನ ತೀವ್ರವಾಗಿ ವಿರೋಧಿಸಿವೆ. ಸರ್ಕಾರಗಳು ಉರುಳಿ ಬಿದ್ದಿವೆ. ದೇಶದಲ್ಲಿಯೂ ಹೊಸ ಆರ್ಥಿಕ ನೀತಿಗಳನ್ನು ಕಾಂಗ್ರೆಸ್, ಸಂಯುಕ್ತರಂಗ ಹಾಗೂ ಬಿಜೆಪಿ ಸರ್ಕಾರಗಳು ಅನುಸರಿಸುತ್ತಾ ದೇಶದಲ್ಲಿ ಜನಸಾಮಾನ್ಯರಿಗೆ ದೊಡ್ಡ ಸಂಕಷ್ಟಗಳುಂಟಾಗಿವೆ. ರಾಜ್ಯದಲ್ಲಿಯೂ ಜನತಾದಳ ಸರ್ಕಾರ ಇದೇ ದಾರಿಯನ್ನು ಅನುಸರಿಸಿ ಜನರಿಂದ ದೂರಮಾಡಲ್ಪಟಿತು ಎಂಬುದರಿಂದ ರಾಜ್ಯ ಸರ್ಕಾರ ಪಾಠ ಕಲಿಯಬೇಕು. ರಾಜ್ಯದಲ್ಲಿ ಬಡವರ, ಕೆಳಜಾತಿಗಳ ಮತದ ಆಧಾರದ ಮೇಲೆ ಚುನಾಯಿತವಾದ ಸರ್ಕಾರವನ್ನು ಈ ಜನ ನಿರಾಕರಿಸುತಾರೆ. ಜನರ, ಕಾರ್ಮಿಕರ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಬಯಸುತ್ತದೆ.

ಪ್ರಾಥಮಿಕ ಸೌಲಭ್ಯಗಳಿಲ್ಲದ ಆರೋಗ್ಯ ಕೇಂದ್ರ ವೈದ್ಯರ ನೇಮಕ್ಕೆ ಒತ್ತಾಯ

ಸುಮಾರು 40 ಹಳ್ಳಿಗಳನ್ನು ಒಳಗೊಂಡು ನಿರ್ಮಿತವಾದ ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರ ಅತ್ಯಂತ ಹಳೆಯದಾದದು. ಗುಲ್ಬರ್ಗಾ ಹೈದ್ರಾಬಾದ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುಲ್ಬರ್ಗಾದಿಂದ ಕೇವಲ 30 ಕಿ.ಮೀ ಅಂತರದಲ್ಲಿದ್ದು ಯಾವ ಅಧಿಕಾರಿಗಳ, ರಾಜಕಾರಣಿಗಳ ಕಣ್ಣಿಗೂ ಬೀಳದೇ ಮರೆಯಾದ ಕೇಂದ್ರ. ಈಗ ಸುತ್ತ ಮುತ್ತಲಿನ ಸುಮಾರು 50 ಸಾವಿರ ಗ್ರಾಮಸ್ಥರು ಇದರ ಅವಲಂಬಿತರಾಗಿದ್ದಾರೆ.

ಇಂದಿಗೂ ಕಮಲಾಪುರದಲ್ಲಿಯೇ ಸಂಸಾರ ಹೂಡಿ, ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ವೈದ್ಯರು ಪುನರುಜ್ಜೀವನಗೊಳಿಸಿದ ದಾಖಲೆಯೇ ಇಲ್ಲ. ಪ್ರಾಮಾಣಿಕವಾಗಿ ಸೇವೆಗೈದ ಯಾವ ವೈದ್ಯರೂ ಹುಡುಕಿದರೆ ಸಿಗುವುದಿಲ್ಲ. ಪರಸ್ಥಳದಿಂದ ಬಂದು ಕೆಲವು ಗಂಟೆ ಹರಟೆ ಹೊಡೆದು ರೋಗಿಗಳಿಗೆ ಪುಡಿಕಟ್ಟಿದ ಹಳೇ ಔಷದಿ ಕೊಟ್ಟು ಹೊತ್ತು ಮುಳುವುದರೊಳಗೆ ಮಾಯವಾಗುವ ವೈದ್ಯರನ್ನೇ ಇಲ್ಲಿಯವರೆಗೂ ಪ್ರಾ. ಆ. ಕೇಂದ್ರ ಕಂಡಿದೆ. ವೈದ್ಯರ ಕೊರತೆಯಿಂದು ಬಹುದಿನಗಳಿಂದ ಯಾವ ವೈದ್ಯರೂ ಇಲ್ಲಿ ಕೆಲಸ ಮಾಡುತ್ತಿದ್ದಿಲ್ಲ. ಉಳಿದ ನೌಕರರ ಹಾಜರಾತಿಯೂ ಅಷ್ಟಕ್ಕಷ್ಟೆ. ಹಳ್ಳಿಯಿಂದ ಬಂಡಿ ಕಟ್ಟಿಕೊಂಡು ಬಂದ ಬಸುರಿ-ಬಾಣಂತಿಯರು, ಸಾಮಾನ್ಯ ರೋಗಿಗಳು ಪ್ರಾ.ಆ.ಕೇಂದ್ರದ ಅವ್ಯವಸ್ಥೆ ಕಂಡು ಗುಲ್ಬರ್ಗಾದ ಕಡೆಗೆ ಮುಖಮಾಡಿ ಪಯಣಿಸಿದವರೇ ಹೆಚ್ಚು.

ಕೇವಲ 25-30 ಸಾವಿರ ಜನಸಂಖ್ಯೆ ಇದ್ದಾಗ ಪ್ರಾರಂಭವಾದ ಆರೋಗ್ಯ ಕೇಂದ್ರಕ್ಕೆ ಈಗಲೂ ಅದೇ ವ್ಯವಸ್ಥೆ ಮುಂದುವರಿದಿದೆ. ಅದೇ ಆರು ಹಾಸಿಗೆಗಳು. ಔಷಧಿಗಳ ಪೂರೈಕೆಯಿಲ್ಲ, ಕ್ಷ ಕಿರಣಯಂತ್ರವಿಲ್ಲ. ಇದ್ದೊಂದು ತುರ್ತು ಸಂಚಾರಿ ವಾಹನವನ್ನು ಅಧಿಕಾರಿಗಳು ಕಛೇರಿ ಕೆಲಸಕ್ಕೆ ಬಳಸಿಕೊಳ್ಳುತ್ತಾರೆ. ಕೇಳುವವರಿಲ್ಲದ ಈ ಕೇಂದ್ರಕ್ಕೆ ಬಹಳಷ್ಟು ಹಳ್ಳಿಗಳಿಂದ ಬರುವ ರೋಗಿಗಳಿಗೆ ಸರಿಯಾಗಿ ಔಷಧೋಪಚಾರ ದೊರೆಯದೇ ನೀರಿನಂತೆ ಖರ್ಚುಮಾಡಿ ನಲುಗಿ -ನರಳಿದ ಕುಟುಂಬಗಳೇ ಹೆಚ್ಚು.

ವೈದ್ಯರ ಕೊರತೆಯನ್ನು ನೀಗಿಸುವಲ್ಲಿ ನಿರ್ಲಕ್ಷ್ಯ ವಹಿಸಿದ ಜಿಲ್ಲಾ ಆರೋಗ್ಯ ಇಲಾಖೆ ಅಧಿಕಾರಿಗಳು ಔಷದಿ ಪೂರೈಕೆಯಲ್ಲಿಯೂ ಭ್ರಷ್ಟಾಚಾರಕ್ಕೆ ಒಳಗಾಗಿ ಜನತೆಗೆ ಸರಿಯಾಗಿ ಔಷಧಿಗಳನ್ನು ಪೂರೈಸದಿರುವುದು ಹಗಲು ದರೋಡೆಯೇ ಸರಿ. ಎರಡು ಬಾರಿ ಆಯ್ಕೆಯಾದ ಬಿಜೆಪಿಯ ಶಾಸಕ ತನ್ನ ಕ್ಷೇತ್ರದ ರೈತರ, ಬಡಜನತೆಯ ಆರೋಗ್ಯದ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸದೇ ಗುತ್ತಿಗೆದಾರಿಕೆಯಿಂದ ಕಬಳಿಸಿದ ಹಣದಲ್ಲಿ ಊರೊಳಗೆ ಮೆರವಣಿಗೆ ಮಾಡಿಸಿಕೊಳ್ಳುತ್ತಿರುವುದಕ್ಕೆ ಜನ ನಾಚಿಕೆಯಿಲ್ಲದೆ ಶಾಸಕರ ವರ್ತನೆಗೆ ಒಳಗೊಳಗೇ ಅಪಹಾಸ್ಯ ಮಾಡುತ್ತಿದ್ದಾರೆ.

ಪ್ರಾ. ಆ. ಕೇಂದ್ರದ ಬವಣೆ ಕಂಡು ಸುಮ್ಮನಿರದ ಕರ್ನಾಟಕ ಪ್ರಾಂತ ರೈತ ಸಂಘ ಹೋರಾಟಕ್ಕಿಳಿಯಿತು. ಆದಕ್ಕೆ ಡಿ.ವೈ.ಎಫ್.ಐ ಮತ್ತು ಜೆಎಂಎಸ್ ಬೆಂಬಲಿಸಿದವು. ತಕ್ಷಣ ವೈದ್ಯರ ನೇಮಕವಾಗಬೇಕು, ಸಾಕಷ್ಟು ಔಷಧಿಗಳ ಪೂರೈಕೆಯಾಗಬೇಕು, ಎಕ್ಸರೇ ಯಂತ್ರ ಅಳವಡಿಸಬೇಕು, ಸಂಚಾರಿ ವಾಹನವನ್ನು ಆರೋಗ್ಯ ಕೇಂದ್ರಕ್ಕೆ ನೀಡಬೇಕು, 6 ಹಾಸಿಗೆಗಳಿಂದ 15 ಹಾಸಿಗೆಗಳಿಗೆ ಪರಿವರ್ತಿಸಬೇಕು ಮತ್ತು ಆಸ್ಪತ್ರೆಯ ಅವ್ಯವಸ್ಥೆ ಸರಿಪಡಿಸಬೇಕೆಂದು ಒತ್ತಾಯಿಸಿ ಪ್ರಾ.ಆ. ಕೇಂದ್ರದ ಎದುರು ತೀವ್ರ ಪ್ರತಿಭಟನಾ ಪ್ರದರ್ಶನ ನಡೆಸಿದರು.


ಹೊಸ ಆರ್ಥಿಕ ನೀತಿಯ ಭಾಗವಾಗಿ ಗ್ರಾಮೀಣ ಪ್ರದೇಶದ ಆಸ್ಪತ್ರೆಗಳು ದಿವಾಳಿಯಾಗುತ್ತಿರುವ ಬಗ್ಗೆ ಪ್ರಾಥಮಿಕ ಆ.ಕೇಂದ್ರದ ಅವ್ಯವಸ್ಥೆ ಕುರಿತು, ಸರ್ಕಾರದ ನಿರ್ಲಕ್ಷ್ಯದ ಬಗ್ಗೆ ಖಂಡಿಸಿ ವೀರಣ್ಣಗೌಡ ಪಾಟೀಲ ಮತ್ತು ವಿರುಪಾಕ್ಷಪ್ಪ ತಡಕಲ್ ಮತ್ತಿತ್ತರು ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡಿ ಚಳುವಳಿಯ ಅಗತ್ಯತೆ ತಿಳಿಸಿದರು.

ಹುಡುಕಾಡಿಕೊಂಡು ಬಂದ ಜಿಲ್ಲಾ ವೈದ್ಯಾಧಿಕಾರಿಗಳಾದ ಡಾ ಗೌರಮ್ಮನವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆಯ ಗಂಭೀರತೆಯನ್ನರಿತು ವಾರಕ್ಕೆರಡು ದಿನಗಳಂತೆ ಪಕ್ಕದ ಆರೋಗ್ಯ ಕೇಂದ್ರಗಳಿಂದ ಮೂವರು ವೈದ್ಯರನ್ನು ತಾತ್ಕಾಲಿಕವಾಗಿ ನೇಮಕ ಮಾಡಿದರು. ಸಾಕಷ್ಟು ಔಷದಿ ಪೂರೈಸುವುದಾಗಿ ಹಾಗೂ ವಾಹನದ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದ್ದರಿಂದ ತಾತ್ಕಲಿಕವಾಗಿ ಹೋರಾಟವನ್ನು ಹಿಂತೆಗೆದ ಕೊಳ್ಳಲಾಯಿತು.

ಹೋರಾಟ ಯಶಸ್ವಿಯಾಗಿದ್ದಕ್ಕೆ ಜನತೆಯ ಮುಖದಲ್ಲಿ ಸಂತಸದ ಕಳೆ ಇತ್ತು ಮುಂದುವರಿದು, ಪ್ರಾ.ಆ. ಕೇಂದ್ರದಂತೆಯೇ ಸರ್ಕಾರಿ ಆಯುರ್ವೇದಿಕ್ ಆಸ್ಪತ್ರೆಯ ವೈದ್ಯರ ನಿರ್ಲಕ್ಷ್ಯ ಹಾಗೂ ಅನಧಿಕೃತ ಗೈರು ಹಾಜರಿ ಕುರಿತು ಮೇಲಧಿಕಾರಿಗಳ ಗಮನಕ್ಕೆ ತಂದು ಆಸ್ಪತ್ರೆಯ ದುಸ್ಥಿತಿ ಸರಿಪಡಿಸುವಲ್ಲಿ ಯಶಸ್ವಿಯಾದರು. ಇನ್ನೂ ಹೆಚ್ಚಿನ ಆಧುನಿಕ ಸೌಲಭ್ಯಗಳನ್ನು ಪಡೆಯಲು ಶಕ್ತಿಯುತ ಸಂಘಟನೆ ಕಟ್ಟಿ ಹೋರಾಡಲು ಮುಂದಾಗೋಣ ಎಂಬ ತೀರ್ಮಾನದೊಂದಿಗೆ ಮುಂದೆ ಹೆಜ್ಜೆ ಹಾಕತೊಡಗಿದರು.

- ಕೆ.ಎಸ್. ವಸ್ತ್ರದ

ಮಾಸದ ನೆನಪುಗಳು (ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಸ್ವಾತಂತ್ರ್ಯದ ಹೊಸದರಲ್ಲೇ ಕಮ್ಯುನಿಸ್ಟರ ಮೇಲೆ ದಾಳಿ, ಭೂಗತರಾಗಬೇಕಾದ ಪರಿಸ್ಥಿತಿ, ಭೂಗತ ಜೀವನದ ಚಟುವಟಿಕೆಗಳು, ಬಂಧನ ಇತ್ಯಾದಿಗಳ ಬಗ್ಗೆ ಇದುವರೆಗೆ ಓದಿದ್ದೀರಿ. ದೇಶ ಪ್ರಜಾಪ್ರಭುತ್ವ ಸಂವಿಧಾನವನ್ನು ಅಂಗೀಕರಿಸಿದಾಗಿನ ಸನ್ನಿವೇಶವನ್ನು ಜ್ಯೋತಿಬಸು ಇಲ್ಲಿ ನೆನಪಿಸಿಕೊಂಡಿದ್ದಾರೆ.

ಪಂಡಿತ್ ನೆಹರೂ ಜತೆ ಮುಖಾಮುಖಿ

1950 ಜನವರಿ 26 ರಂದು ದೇಶ ಸಂವಿಧಾನವನ್ನು ಅಳವಡಿಸಿಕೊಂಡಿತು. ಅದರ ಮರುದಿನವೇ ಕಲ್ಕತ್ತ ಹೈಕೋರ್ಟ್ ಒಂದು ಮಹತ್ವದ ತೀರ್ಪು ನೀಡಿತು. ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ್ ಪಕ್ಷದ ಮೇಲಿನ ನಿಷೇಧ ಸಂವಿಧಾನ ಬಾಹಿರ ಎಂದು ಅದು ಸಾರಿತು. ನಿಷೇಧವನ್ನು ತೆಗೆಯಬೇಕೆಂದು ಹೇಳಿತು. ಆದರೆ ಈ ತೀರ್ಪು ಇದ್ದರೂ ರಾಜಕೀಯ ಕೈದಿಗಳನ್ನು ಕೂಡಲೇ ಬಿಡುಗಡೆ ಮಾಡಲಿಲ್ಲ.

1951 ರ ಏಪ್ರಿಲ್‌ನಲ್ಲಿ ಕಾಕಾಬಾಬು ಬಿಡುಗಡೆಗೊಂಡರು. ಆದರೆ ಒಂದು ವರ್ಷದ ನಂತರವೂ ಬಂಧನ ಪರ್ವ ಮುಂದುವರಿಯಿತು. ಅನೇಕ ಸಂಗಾತಿಗಳು ಇನ್ನೂ ಕಂಬಿಗಳ ಹಿಂದೆಯೇ ಇದ್ದರು.

ಒಂದು ಕಾನೂನುಬದ್ಧ ಸಂಸ್ಥೆಯಾಗಿ ನಮಗೆ ಕೆಲಸ ಮಾಡುವ ಒತ್ತಡಕ್ಕೆ ಸರಕಾರ ಒಳಗಾಗುತ್ತದೆ ಎಂಬುದನ್ನು ನಾವು ಅರಿತೆವು. ನಾವು ಬಿಡುಗಡೆಯಾದ ಮೇಲೆ ಪಕ್ಷದ ಕಚೇರಿಗಳನ್ನು ತೆರೆಯುವಲ್ಲಿ ನಿರತರಾದೆವು. ಎಲ್ಲವೂ ಅಸ್ತವ್ಯಸ್ತವಾಗಿತ್ತು. ಕಾಕಾ ಬಾಬೂ ಅವರ ಮುತುವರ್ಜಿಯಿಂದಾಗಿ, ಆಚಾರ್ಯ ಜಗದೀಶ್ ಬೋಸ್ ರಸ್ತೆಯಲ್ಲಿ ಪಕ್ಷದ ರಾಜ್ಯ ಕಚೇರಿ ಸ್ಥಾಪನೆಗೊಂಡಿತು. ಬಹುತೇಕ ಮುಖಂಡರು ಜೈಲಿನಲ್ಲಿದ್ದರು ಅಥವಾ ಭೂಗತರಾಗಿದ್ದರು.

ನಾನು ಸೆರೆಮನೆಯಿಂದ ಹೊರಬಿದ್ದೆ. ಒಂದು ದೊಡ್ಡ ಖಾಸಗಿ ಕಾರು ಪ್ರತಿದಿನ ನನ್ನ ಮನೆಯ ಹೊರಗೆ ನಿಂತಿರುತ್ತಿತ್ತು. ನಾನು ಹೋದಾಗಲೆಲ್ಲಾ ಅದು ನನ್ನನ್ನು ಹಿಂಬಾಲಿಸುತ್ತಿತ್ತು. ಅದು ನನ್ನ ಮೇಲೆ ಕಣ್ಣಿಟ್ಟಿರುವ ಪೊಲೀಸ್ ಪತ್ತೇದಾರಿ ಕಾರು ಎಂದು ತಿಳಿಯಲು ನನಗೆ ಹೆಚ್ಚು ಹೊತ್ತು ಬೇಕಾಗಲಿಲ್ಲ.

ಮುಖ್ಯಮಂತ್ರಿಗೆ ತರಾಟೆ

ಒಂದು ದಿನ ನಾನು ಬೇರೊಂದು ದಾರಿಯಾಗಿ ಮನೆಯಿಂದ ಹೊರಬಿದ್ದೆ. ಎರಡು ಸಲ ಟ್ಯಾಕ್ಸಿಗಳನ್ನು ಬದಲಾಯಿಸಿದೆ ಹಾಗೂ ನೇರವಾಗಿ ರೈಟರ್ಸ್ ಬಿಲ್ಡಿಂಗ್ಸ್‌ನಲ್ಲಿರುವ ಬಿಧನ್ ರಾಯ್ ಅವರ ಕೊಠಡಿಗೆ ಹೋದೆ. ನಿಮ್ಮ ಸರಕಾರ ನನ್ನನ್ನು ಬಿಡುಗಡೆ ಮಾಡಲಿಲ್ಲ, ಹೈಕೋರ್ಟ್ ಬಿಡುಗಡೆ ಮಾಡಿತು. ಬೇಹುಗಾರಿಕೆ ದಳದ ಕಾರು ನನ್ನೇಕೆ ಹಿಂಬಾಲಿಸುತ್ತಿದೆ" ಎಂದು ನಾನು ಅವರನ್ನು ಪ್ರಶ್ನಿಸಿದೆ.

ಆಗ ಡಾ. ರಾಯ್ ತಕ್ಷಣವೇ ಅಂದಿನ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಹಿರೇನ್ ಸರ್ಕಾರ್‌ರನ್ನು ಕರೆಸಿ 'ಜ್ಯೋತಿಯನ್ನು ಹಿಂಬಾಲಿಸುತ್ತಿರುವುದೇಕೆ? ಎಂದು ಕೇಳಿದರು. 'ಅವರಿಗೆ ಹಿಂಸೆಯಲ್ಲಿ ನಂಬಿಕೆಯಿದೆ' ಇದು ಹಿರೇನ್‌ರ ತಕ್ಷಣದ ಉತ್ತರವಾಗಿತ್ತು. ಹಿರೇನ್ ಸರ್ಕಾರ್ ಜತೆ ನಾನು ವಾಗ್ವಾದ ಮಾಡಿದೆ. ಅವರಿಗೆ ಹೋಗುವಂತೆ ಡಾ. ರಾಯ್ ಸೂಚಿಸಿದರು. ಅದಾದ ಮೇಲೆ ನನ್ನ ಮೇಲಿನ ಬೇಹುಗಾರಿಕೆ ನಿಂತಿತು.

ಬಹುತೇಕ ಎರಡು ವರ್ಷಗಳಿಂದ ನಾನು ಅಸೆಂಬ್ಲಿಗೆ ಗೈರುಹಾಜರಾಗಿದ್ದೆ. ಸರಕಾರ ನನಗೆ ಕೊಡಬೇಕಿದ್ದ ವೇತನದ ಬಾಕಿ ತುಂಬಾ ಇತ್ತು. ಎಲ್ಲಾ ಬಾಕಿ ಪಾವತಿಸುವಂತೆ ಡಾ. ರಾಯ್ ಆದೇಶಿಸಿದರು. ಇದ್ದಕ್ಕಿದ್ದಂತೆ ತುಂಬಾ ಹಣ ನನ್ನ ಕೈಸೇರಿತು. ಅದರ ಒಂದು ಭಾಗವನ್ನು ಪಕ್ಷಕ್ಕೆ ನೀಡಿದೆ.

1951 ರಲ್ಲಿ ಕಲ್ಕತ್ತದಲ್ಲಿ ನಡೆದ ಪಕ್ಷದ ರಹಸ್ಯ ರಾಷ್ಟ್ರೀಯ ಸಮ್ಮೇಳನಕ್ಕೆ ನಾನೂ ಒಬ್ಬ ಪ್ರತಿನಿಧಿಯಾಗಿದ್ದೆ. ಕಾಕಾಬಾಬು ಕೂಡ ಅಲ್ಲಿದ್ದರು. ಪಕ್ಷದ ಹೊಸ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳಲಾಯಿತು. ಅಜಯ್ ಘೋಷ್ ಹೊಸ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಸರಿಪಡಿಸುವಿಕೆ(Rectificatiion) ಕಾರ್ಯಕ್ರಮವೊಂದನ್ನು ಪ್ರಕಟಿಸಲಾಯಿತು.

ಐತಿಹಾಸಿಕ ರ್‍ಯಾಲಿ

ಈ ಸಮ್ಮೇಳನಕ್ಕಿಂತ ಸ್ವಲ್ಪ ಮುನ್ನ ಪಕ್ಷದ ಪಶ್ಚಿಮ ಬಂಗಾಳ ಘಟಕದ ಸಮ್ಮೇಳನ ಕಲ್ಕತ್ತದಲ್ಲಿ ನಡೆಯಿತು. ಕಾಕಾ ಬಾಬು ಪ.ಬಂಗಾಳ ಘಟಕದ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಕಲ್ಕತ್ತ ಮೈದಾನದಲ್ಲಿ ಒಂದು ಬೃಹತ್ ರ್‍ಯಾಲಿ ನಡೆಯಿತು. ಪಕ್ಷವನ್ನು ಕಾನೂನುಬದ್ಧಗೊಳಿಸಿದ ನಂತರದ ಅಂಥ ಪ್ರಥಮ ರ್‍ಯಾಲಿ ಅದಾಗಿತ್ತು. ಅದನ್ನೊಂದು 'ಐತಿಹಾಸಿಕ ರ್‍ಯಾಲಿ' ಎಂದು ಅಂದಿನ ಕೆಲ ಪತ್ರಿಕೆಗಳು ಬಣ್ಣಿಸಿದವು.

ಕೆಲವು ವಿಚಾರಗಳಲ್ಲಿ ಪಕ್ಷ ತಪ್ಪು ಮಾಡಿದೆ ಎಂಬುದನ್ನು ನಾನು ಭಾಷಣದಲ್ಲಿ ಒಪ್ಪಿಕೊಂಡೆ. ಈ ದೋಷಗಳನ್ನು ತುರ್ತಾಗಿ ಸರಿಪಡಿಸಿಕೊಳ್ಳಬೇಕಾದ ಅಗತ್ಯವನ್ನು ಒತ್ತಿ ಹೇಳಿದೆ. 'ಸ್ವಾಧೀನತಾ' ದ ಪ್ರಕಟಣೆಯನ್ನು ಪುನರಾರಂಭಿಸುವ ವಿಷಯವನ್ನು ರ್‍ಯಾಲಿಯಲ್ಲಿ ಪ್ರಕಟಿಸಲಾಯಿತು. ಸ್ವಲ್ಪ ದಿನಗಳ ನಂತರ ಪಾರ್ಕ್ ಸರ್ಕಸ್‌ನಲ್ಲಿರುವ ಮನೆಯೊಂದರಿಂದ ಅದರ ಪ್ರಕಟಣೆಯ ಪುನರಾರಂಭವಾಯಿತು.

ತೆಲಂಗಾಣ ಚಳುವಳಿಯನ್ನು ವಾಪಸು ಪಡೆಯಲಾಯಿತು. ಆದರೆ ನೇತಾರರು ಇನ್ನೂ ಜೈಲಿನಲ್ಲಿ ಕೊಳೆಯುತ್ತಿದ್ದರು. ತೆಲಂಗಾಣಕ್ಕೆ ಭೇಟಿ ನೀಡುವಂತೆ ಕಾಕಾಬಾಬು ಮತ್ತು ನನಗೆ ಪಕ್ಷ ನಿರ್ದೇಶನ ನೀಡಿತು. ದೆಹಲಿಯಲ್ಲಿ ಪಂಡಿತ ಜವಾಹರಲಾಲ್ ನೆಹರೂರನ್ನು ಭೇಟಿ ಮಾಡುವಂತೆಯೂ ಸೂಚಿಸಿತು.

ಕಾಕಾಬಾಬು ಮತ್ತು ನಾನು ತೆಲಂಗಾಣಕ್ಕೆ ತೆರಳಿ ಬಂದಿಗಳನ್ನು ಭೇಟಿ ಮಾಡಿದೆವು. ಕಾಕಾಬಾಬು ಕಲ್ಕತ್ತಕ್ಕೆ ಮರಳಿದರು ನಾನು ದೆಹಲಿಗೆ ಹೋದೆ. ಪಂಡಿತ್ ನೆಹರೂ ಮತ್ತು ನನ್ನ ನಡುವಿನ ಮಾತುಕತೆಯಲ್ಲಿ ಮೃದುಲಾ ಸಾರಾಬಾಯಿ ಮಧ್ಯಸ್ಥಿಕೆದಾರರಾಗಿ ಕಾರ್ಯನಿರ್ವಹಿಸಿದರು.

ತೆಲಂಗಾಣ ಹೋರಾಟದ ಬಂಧಿಗಳ ಬಿಡುಗಡೆ ವಿಚಾರವನ್ನು ತಾವು ಪರಿಶೀಲಿಸುವುದಾಗಿ ಪ್ರಧಾನಮಂತ್ರಿ ಆಶ್ವಾಸನೆ ನೀಡಿದರು. ವಿದೇಶಿ ನೀತಿ ಬಗ್ಗೆ ನಮ್ಮ ಅಭಿಪ್ರಾಯವೇನೆಂದು ನೆಹರೂ ನನ್ನನ್ನು ಕೇಳಿದರು. ನೀತಿ ಬಗ್ಗೆ ಮೂಲಭೂತವಾಗಿ ನಮ್ಮದೇನೂ ಆಕ್ಷೇಪವಿಲ್ಲ ಎಂದು ನಾನಂದೆ. ಆದರೆ ಕಾಶ್ಮೀರದಲ್ಲಿ ವೀಕ್ಷಕರಾಗಿ ಉಳಿಯಲು ಅಮೆರಿಕದ ಒಬ್ಬರಿಗೆ 'ಬಿಟ್ಟದ್ದೇಕೆ' ಎಂಬುದು ನಮಗೆ ಅರ್ಥವಾಗಲಿಲ್ಲ ಎಂದೆ. ಇದರಿಂದ ನೆಹರೂ ಸ್ವಲ್ಪ ಮುಜುಗರ ಪಟ್ಟಂತೆ ಕಂಡರು. ಹಾಗೂ 'ನಾನು ಒಬ್ಬ ಕಮ್ಯುನಿಸ್ಟ್ ಅಲ್ಲ. ಪ್ರತಿಯೊಬ್ಬರ ಜತೆ ನಾನು ಸಂಪರ್ಕ ಇಟ್ಟುಕೊಳ್ಳಬೇಕಾಗುತ್ತದೆ' ಎಂದರು. ಒಂದು ನಿರ್ದಿಷ್ಟ ಕಾರ್ಯದ ಮೇಲೆ ನಾನು ದೆಹಲಿಗೆ ಹೋಗಿದ್ದರಿಂದ ಇನ್ನು ಹೆಚ್ಚಿನ ವಾದಕ್ಕೆ ನಾನು ಮುಂದಾಗಲಿಲ್ಲ. ಪ್ರಧಾನಿ ಜತೆ ನಾನು 50 ನಿಮಿಷ ಕಾಲ ಇದ್ದೆ.

ಕೆಲವಾದರರೂ ಬಂಧಿಗಳು ಬಿಡುಗಡೆಗೊಳ್ಳಬಹುದು ಎಂಬ ಆಶಾವಾದದೊಂದಿಗೆ ನಾನು ಮರಳಿದೆ. ಬಿಡುಗಡೆಯ ಕೆಲಸ ಆರಂಭವಾಯಿತು. ಭೂಗತ ನಾಯಕರ ವಿರುದ್ಧ ಹೊರಡಿಸಲಾದ ವಾರಂಟ್‌ಗಳನ್ನು ಹಿಂತೆಗೆಯಲು ಕ್ರಮ ಕೈಗೊಳ್ಳಲಾಯಿತು. ನಾವು ಕೂಡಾ ಪ್ರಪ್ರಥಮ ಮಹಾಚುನಾವಣೆಯ ಕೆಲಸ ಕಾರ್ಯಗಳನ್ನು ಸರಿಯಾದ ದಿಕ್ಕಿನಲ್ಲಿ ಆರಂಭಿಸಿದೆವು.

ಸ್ವಾಧೀನತಾ ಮರುಜೀವ

1951 ಫೆಬ್ರವರಿ 9 ರಂದು 'ಸ್ವಾಧೀನತಾ' ಪ್ರಕಟಣೆ ಆರಂಭವಾಯಿತು. ನಾನು ಹೊಸ ಸಂಪಾದಕೀಯ ಮಂಡಳಿಯ ಅಧ್ಯಕ್ಷನಾದೆ. ನಮ್ಮೆಲ್ಲರ ಸಂಯುಕ್ತ ಪ್ರೋತ್ಸಾಹದ ಫಲವಾಗಿ 'ಸ್ವಾಧೀನತಾ' ಮರುಪ್ರಕಟಣೆ ಸಾಧ್ಯವಾಯಿತು. ನಾಯಕತ್ವದ ಬಹುಭಾಗ ಸೆರೆಮನೆಯಲ್ಲಿತ್ತು ಎನ್ನುವುದನ್ನು ನಾವು ನೆನಪಿಸಿಕೊಳ್ಳಬೇಕು.

ಪಕ್ಷ ಹಣಕಾಸಿನ ಮುಗ್ಗಟ್ಟಿನಲ್ಲಿರುವಾಗ ಪತ್ರಿಕೆಯನ್ನು ಪುನರಾರಂಭಿಸಿದ್ದು ಇನ್ನು ಹೆಚ್ಚಿನ ಸಾಧನೆ. ಇವೆಲ್ಲಕ್ಕಿಂತ ಹೆಚ್ಚಾಗಿ 'ಸ್ವಾಧೀನತಾ'ದ ಕತ್ತು ಹಿಸುಕಲು ಕಾಂಗ್ರೆಸ್ ಸರಕಾರ ನಿರಂತರ ಯತ್ನ ನಡೆಸಿದಾಗಲು ಅದನ್ನು ಪುನರುಜ್ಜೀವನಗೊಳಿಸಿದ್ದು ವಿಶೇಷ ಸಾದನೆಯಾಗಿತ್ತು.

1951 ಏಪ್ರಿಲ್ 27 ರಂದು ಕಾಕಾಬಾಬು ಬಿಡುಗಡೆಯ ಆದೇಶ ಹೊರಬಿತ್ತು. ನ್ಯಾಯಾಲಯ ಅವರನ್ನು ದೋಷಮುಕ್ತಗೊಳಿಸುವುದೆಂದು ಗೊತ್ತಿದ್ದರಿಂದ ಅವರನ್ನು ಬಂಧಮುಕ್ತಗೊಳಿಸದೆ ಸರಕಾರಕ್ಕೆ ಬೇರೆ ದಾರಿ ಇರಲಿಲ್ಲ. ಅಧಿಕಾರಿಗಳು ನ್ಯಾಯಾಲಯದ ತೀರ್ಪಿಗೆ ಕಾಯದೆ ಕಾಕಾಬಾಬುರನ್ನು ಬಿಡುಗಡೆಗೊಳಿಸಿದರು.

1951 ರ ಕೊನೆಯಲ್ಲಿ ಪಕ್ಷದ ಪೂರ್ಣ ಪ್ರಮಾಣದ ಪ್ರಾಂತೀಯ ಸಮಿತಿಯನ್ನು ರಚಿಸಲಾಯಿತು. ಅದಕ್ಕೆ ಮುನ್ನ ಸಂಘಟನಾ ಮತ್ತು ಕಾರ್ಯಸಮಿತಿಗಳು ಮಾತ್ರವೇ ಇದ್ದವು. ಅನೇಕ ಮುಖಂಡರು ಇನ್ನೂ ಸೆರೆಮನೆಯಲ್ಲಿದ್ದರು. ಆನಂತರದ ಘಟ್ಟದಲ್ಲಿ ಬಿಡುಗಡೆ ಹೊಂದಿದವರಲ್ಲಿ ಸರೋಜ್ ಮುಖರ್ಜಿ ಸೇರಿದ್ದರು.

ಜಿಲ್ಲೆಗಳಲ್ಲಿ ಪಕ್ಷದ ಸಂಘಟನೆ, ಬಂಧಿಗಳನ್ನು ಬಿಡುಗಡೆ ಮಾಡಿಸುವುದು, ಆಹಾರ ಬಿಕ್ಕಟ್ಟಿನ ವಿಚಾರದಲ್ಲಿ ಚಳವಳಿ, ನಿರಾಶ್ರಿತರ ಪುನರ್ ವಸತಿ ಮತ್ತು ಚುನಾವಣೆ ಕಾರ್ಯದಲ್ಲಿ ನಾವು ನಿರತರಾದೆವು. ನಾನು ಕಲ್ಕತ್ತದಲ್ಲಿ ಇದ್ದಾಗಲೆಲ್ಲ ಅಸೆಂಬ್ಲಿ ಅಧಿವೇಶನಕ್ಕೆ ಹಾಜರಾಗುತ್ತಿದ್ದೆ.

(ಮುಂದುವರಿಯುವುದು)

ರಾಯಚೂರು - ಕೊಪ್ಪಳ ಒರಿಸ್ಸಾ ಪರಿಹಾರನಿಧಿ ಸಂಗ್ರಹ

ಇಂತಹ ಪರಿಸ್ಥಿತಿ ನನ್ನ ವೈರಿಗಳಿಗೂ ಬೇಡ, ಓ ನೀವು ಸಹ ಇಂತಹ ಕಾರ್ಯಕ್ರಮಕ್ಕೆ ಮುಂದಾಗಿದ್ದೀರಾ, ಯಾವುದಪ್ಪಾ ಈ ಹೋರಾಟ ಇದು ಎಂದು ಒಬ್ಬ, ಈಗಾಗಲೇ ನಾನು ಕಳಿಸಿದ್ದೇನೆ, ನಿಮ್ಮ ಮೂಲಕ ನನ್ನ ಕಿರುಕಾಣಿಕೆ ಎಂದು ಮತ್ತೊಬ್ಬ - ಧ್ವನಿವರ್ಧಕದ ಮೂಲಕ ಒರಿಸ್ಸಾ ಪರಿಹಾರಕ್ಕೆ ನಿಧಿ ಮತ್ತು ವಸ್ತುಗಳನ್ನು ಸಂಗ್ರಹಿಸುವಾಗ, ಮೇಲಿನಂತೆ ಜನ ವಿಧವಿಧವಾಗಿ ಪ್ರತಿಕ್ರಿಯಿಸಿದರು.

ಒರಿಸ್ಸಾ ಚಂಡಮಾರುತದ ಭೀಕರತೆ ಸರಕಾರಗಳ ರಾಜಕೀಯ ಅವಕಾಶವಾದಿತನಗಳನ್ನು ಮೈಕ್‌ನಲ್ಲಿ ವಿವರಿಸುತ್ತಾ, ಒರಿಸ್ಸಾ ಘಟನೆಯನ್ನು ರಾಷ್ಟ್ರೀಯ ದುರಂತವೆಂದು ಪರಿಗಣಿಸಬೇಕೆಂದು ಒತ್ತಾಯಿಸುತ್ತಾ ತಂಡೋಪತಂಡವಾಗಿ ರಾಯಚೂರು ಸಿಂಧನೂರು ಜಾಲಿಹಾಳಗಳಲ್ಲಿ ಸಂಗ್ರಹಿಸಿದಾಗ ಸಿಕ್ಕ ಪ್ರತಿಕ್ರಿಯೆ ಇವು.

ಪಕ್ಷದ ಜಿಲ್ಲಾ ಸಮಿತಿ ಆದೇಶದಂತೆ, ಮೊದಲು ತಾಲೂಕು ಸಮಿತಿ ಶಾಖೆಗಳು ಸೇರಿ ಪಕ್ಷದ ಸದಸ್ಯರಿಗೆ ಒರಿಸ್ಸಾ ಘಟನೆ ಬಗ್ಗೆ ವಿವರಣೆಯನ್ನು ನೀಡಿ, ಅವರಿಗೆ ನಮ್ಮ ಕೈಲಾದಮಟ್ಟಿಗೆ ಸಹಾಯ ಮಾಡಲು ಮುಂದಾಗಬೇಕೆಂದು ಹೇಳಲಾಗಿತ್ತು.

ಅದರಂತೆ 22-11-99ರಂದು ಮೇಲಿನ ನಾಲ್ಕು ಕಡೆ ಸುಮಾರು 100ರಿಂದ 50ರವರೆಗೆ ಕಾರ್ಯಕರ್ತರು ಬ್ಯಾನರ್ ಝುಂಡಾ ಘೋಷಣೆ ಫಲಕ ಹಿಡಿದು ನಿಧಿಗಾಗಿ ಧ್ವನಿವರ್ಧಕದ ಮೂಲಕ ವಿನಂತಿಸಿದಾಗ ಜನ ಅತ್ಯಂತ ಆಶ್ಚರ್ಯ ಮತ್ತು ಉತ್ಸುಕತೆಯಿಂದ ನಮ್ಮ ಚಟುವಟಿಕೆಯನ್ನು ಗಮನಿಸುತ್ತಿದ್ದರು. ವಿಶೇಷವಾಗಿ ಮಧ್ಯಮವರ್ಗದ ವ್ಯಾಪಾರಿಗಳು ಅತ್ಯಂತ ಪರಿಣಾಮಕಾರಿಯಾಗಿ ನಮ್ಮ ಕರೆಗೆ ಓಗೊಡುತ್ತಿದ್ದರು. ಹುಂಡಿಯ ಡಬ್ಬಿಗಳನ್ನು ಮುಂದೆ ಹಿಡಿದಾಗ ನಾಣ್ಯಗಳಿಂದ ಹಿಡಿದು ನೂರು ರೂಪಾಯಿಗಳವರೆಗೆ ಕಾಣಿಕೆಯನ್ನು ಅಲ್ಲದೇ ಸಾಬೂನು, ಬಿಸ್ಕೇಟು, ಸೀರೆ, ಪಂಚೆಗಳನ್ನು ಅತ್ಯಂತ ತುಂಬು ಹೃದಯದಿಂದ ನೀಡುತ್ತಿದ್ದರು. ಕೆಲವು ಅಂಗಡಿಗಳಲ್ಲಿ ಶೇಟ್ ಊರಿಗೆ ಹೋಗಿದ್ದಾನೆ ನಾವು ಕೊಡುವುದಿಲ್ಲ ಎನ್ನುವುದು ಕೇಳುತ್ತಿದ್ದೆವು. ಒಬ್ಬ ವ್ಯಕ್ತಿಯಂತೂ ಕಳೆದ ಸಲ ಬಿಜೆಪಿ ಬೆಂಬಲ ಕೇಳುವಾಗ, ಒರಿಸ್ಸಾದ ಮುಖ್ಯಮಂತ್ರಿಯಾಗಿದ್ದರೂ ಗೋಮಾಂಗೋ ನಾನು ಎಂಪಿ ಎಂದು ಪಾರ್ಲಿಮೆಂಟಿನಲ್ಲಿ ಬಂದು ಮತ ಚಲಾಯಿಸಿ ವಾಜಪೇಯಿ ಸರಕಾರವನ್ನು ಒಂದು ಓಟಿನಿಂದ ಬೀಳಿಸಿದ್ದಕ್ಕಾಗಿ ಒರಿಸ್ಸಾ ಜನರಿಗೆ ಶಿಕ್ಷೆಯನ್ನು ಕೊಟ್ಟಿದ್ದಾನೆ ಎನ್ನಲೂ ಸಹ ಆರ್.ಎಸ್.ಎಸ್. ಪರಿವಾರದ ಬಳಗ ಹಿಂದೆ ಬೀಳಲಿಲ್ಲ. ಜನರ ಪ್ರತಿಕ್ರಿಯೆ ಬೆಂಬಲ ಆದರ ಪೂರ್ವಕವಾಗಿದ್ದು ಪಕ್ಷದ ಸಂಗಾತಿಗಳಲ್ಲಿ ಯಾವುದಕ್ಕಾದರೂ ಜನ ಬೆಂಬಲಿಸುತ್ತಾರೆ, ಚಟುವಟಿಕೆಗಳನ್ನು ತೀವ್ರಗೊಳಿಸುವುದರ ಮೂಲಕ ಬೆಂಬಲದ ಸದುಪಯೋಗಪಡಿಸಿ ಕೊಳ್ಳಬೇಕೆಂದು ಸಂಗಾತಿಗಳು ಹೇಳುತ್ತಿದ್ದರು.

ಹೆಬ್ಬಾಳದಲ್ಲಿ ಶ್ರಮದಾನ ಕಾರ್ಯಕ್ರಮ

ದಿನಾಂಕ 18-11-99ರಂದು ಚಿತ್ತಾಪೂರ ತಾಲೂಕಿನ ಹೆಬ್ಬಾಳದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ) ವತಿಯಿಂದ ಶ್ರಮದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಗ್ರಾಮದಲ್ಲಿನ ಬೀದಿ ಸ್ವಚ್ಛತೆ ಮತ್ತು ಚರಂಡಿಗಳ ಸ್ವಚ್ಛತೆ ಮಾಡಲಾಯಿತಲ್ಲದೆ ಮುಖ್ಯರಸ್ತೆ ಸಂಚಾರಕ್ಕೆ ಅಡ್ಡಿಪಡಿಸುವ ಗಿಡ ಗಂಟೆಗಳನ್ನು ಕಡಿದು ಸಂಚಾರಕ್ಕೆ ಸುಗಮ ವ್ಯವಸ್ಥೆ ಮಾಡಿ ರಸ್ತೆಯಲ್ಲಿರುವ ಸಣ್ಣ ತಗ್ಗು ದಿನ್ನೆಗಳನ್ನು ಮುಚ್ಚಲಾಯಿತು. ಸಂಘಟನೆಯ ಕಾರ್ಯಕರ್ತರ ಜೊತೆಗೆ ಗ್ರಾಮದಲ್ಲಿನ ರೈತರು ಭಾಗವಹಿಸಿದರು. ಈ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಡಿ.ವೈ.ಎಫ್.ಐ ಜಿಲ್ಲಾ ಕಾರ್ಯದರ್ಶಿ ಶ್ರೀಮಂತ ಹೋಳಕರ ಮಾತನಾಡಿ ಇಂದು ಹಳ್ಳಿಗಳಲ್ಲಿ ಸ್ವಚ್ಛತೆಯ ಅವಶ್ಯಕತೆ ಇದ್ದು, ಕಾಲರಾ ಮತ್ತು ಮಲೇರಿಯಾದಂತಹ ಭಯಾನಕ ರೋಗಗಳು ಕಾಣಿಸಿಕೊಳ್ಳುತ್ತವೆ ಮತ್ತು ಆನೆ ಕಾಲು ರೋಗದಂತಹವುಗಳು ಹೆಚ್ಚಾಗುವ ಸಂಭವವಿದೆ ಆದ್ದರಿಂದ ಜನರು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸರಿಯಾಗಿ ಇಟ್ಟುಕೊಂಡು ಆರೋಗ್ಯವಂತರಾಗಿ ಇರಬೇಕೆಂದು ಕರೆ ನೀಡಿದರು. ಈ ಶ್ರಮದಾನ ಕಾರ್ಯಕ್ರಮವು ಚಿತ್ತಾಪೂರ ತಾಲೂಕ ಡಿ.ವೈ.ಎಫ್.ಐ. ಅಧ್ಯಕ್ಷರಾದ ಮಹ್ಮದ ಬಾಬರಖಾನ ಅವರ ನೇತೃತ್ವದಲ್ಲಿ ನಡೆಯಿತು. ಇದರಲ್ಲಿ ಡಿ.ವೈ.ಎಫ್.ಐ. ನ ಕೃಷ್ಣಾ ಹೋಳಕರ, ಲಾಳೆ ಪಾಟೀಲ, ಮಕಬುಲ ಮೌಜಾನ, ಜಗನ್ನಾಥ ಬಂಡಿ, ರವಿ ಎಂಟಮಾನ, ಸಿದ್ದಪ್ಪಾ ಪೂಜಾರಿ, ಮಲ್ಲಪ್ಪಾ ಪೂಜಾರಿ ಅಲ್ಲದೆ ಅಣ್ಣಾರಾವ ಸಿದ್ದನಾಯಕ, ಶಾಂತಕುಮಾರ ಪಾಳ್ಳಿ, ಮರಗಪ್ಪಾ ಹೆಬ್ಬಾಳ, ವಿಶ್ವನಾಥ, ಅಹ್ಮದ ಇವರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.

ಬಬ್ಲು, ಎನ್. ತಾಂಡೂರಕರ್.

ಸಂಘ ಪರಿವಾರ ಕೋಮು ಬೆಂಕಿಗೆ ತಿದಿಯೂದುತ್ತಲೇ ಇದೆ

ಬಿಜೆಪಿ ಮಿತ್ರರ ವಿಶ್ವಾಸಾರ್ಹತೆಯ ಮುಂದೆ ಪ್ರಶ್ನೆ ಚಿಹ್ನೆ ಬಿದ್ದಿದೆ

ಹರ್ಕಿಶನ್ ಸಿಂಗ್ ಸುರ್ಜಿತ್

ಡಿಸೆಂಬರ್ 6 ರಂದು ದೇಶ ಬಾಬ್ರಿ ಮಸೀದಿ ಧ್ವಂಸದ ಕರಾಳ ಘಟನೆಯನ್ನು ಆತಂಕದಿಂದ ನೆನಪಿಸಿಕೊಂಡಿತು. ಆತಂಕ ಏಕೆಂದರೆ ಆ ಧ್ವಂಸ ಕಾರ್ಯ ನಡೆಸಿದ ಕೋಮುವಾದಿ ಶಕ್ತಿಗಳು ಅಧಿಕಾರದಮೇಲೆ ತಮ್ಮ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸಿದ್ದಾರೆ. ಬಾಬ್ರಿ ಮಸೀದಿ ಧ್ವಂಸದಲ್ಲಿ ಈಗಲೂ ಆಪಾದಿತರಾಗಿರುವವರು ಮಹತ್ವದ ಮಂತ್ರಿ ಪದವಿಗಳಲ್ಲಿ ಇದ್ದಾರಷ್ಟೇ ಅಲ್ಲ, ಧರ್ಮನಿರಪೇಕ್ಷತೆ ಭಾರತೀಯ ಸಂವಿಧಾನದ ಮೂಲಭೂತ ಸ್ವರೂಪ ಎಂದು ದೇಶದ ಅತ್ಯುಚ್ಛ ನ್ಯಾಯಾಲಯವೇ ಸಾರಿದ್ದರೂ ಅದನ್ನೇ ಬದಲಿಸುವ ಹುನ್ನಾರ ನಡೆಸಿದ್ದಾರೆ. ಅಲ್ಲದೆ ಆರ್ಥಿಕ ರಂಗದಲ್ಲಿನ ತನ್ನ ನೀತಿಗಳಿಂದಾಗಿ ಜನಗಳಲ್ಲಿ ಹೆಚ್ಚುತ್ತಿರುವ ಪ್ರತಿರೋಧದಿಂದಾಗಿ ಜನಗಳ ಗಮನವನ್ನು ಬೇರೆಡೆಗೆ ತಿರುಗಿಸುವ ದುರುದ್ದೇಶವೂ ಅದರಲ್ಲಿದೆ. ಬಿಜೆಪಿ ನೇತೃತ್ವದ ಸರಕಾರವನ್ನು ಈ ರೀತಿ ಒಂದು ಮತೀಯ ಪ್ರಭುತ್ವದ ಗಂಡಾಂತರಕಾರಿ ಹಾದಿಯಲ್ಲಿ ಮುಂದೊತ್ತುವುದನ್ನು ತಡೆಯಬಲ್ಲ ಶಕ್ತಿಯಿದ್ದರೂ ಅವರ ಮಿತ್ರರು ಬಾಯಿಮುಚ್ಚಿ ಕುಳಿತಿದ್ದಾರೆ. ತಮ್ಮ ವಿಶ್ವಾಸಾರ್ಹತೆಗೆ ಸಂಚಕಾರ ಬಂದಿದೆ ಎಂದು ಅರಿತಂತಿಲ್ಲ.

ಏಳು ವರ್ಷಗಳ ಹಿಂದೆ ಡಿಸೆಂಬರ್ 6 (ಅದು ನಮ್ಮ ಸಂವಿಧಾನದ ಶಿಲ್ಪಿ ಡಾ. ಅಂಬೇಡ್ಕರ್‌ರ ಮರಣ ವಾರ್ಷಿಕದ ದಿನವೂ ಹೌದು) 'ಕರಾಳ ಭಾನುವಾರ' ನಡೆದ್ದದ್ದೇನು ಎಂಬುದನ್ನು ನೆನಪಿಸಿಕೊಳ್ಳುವುದು ಅಪ್ರಸ್ತುತವೇನಲ್ಲ. ಅಂದು ಅಯೋಧ್ಯೆಯಲ್ಲಿ ವಿ.ಹೆಚ್.ಪಿ., ಭಜರಂಗ ದಳ ಮತ್ತಿತರ ಕೋಮುವಾದಿ ಸಂಘಟನೆಗಳು ಕಲೆಹಾಕಿದ್ದ ಜನಜಂಗುಳಿ ನಾಲ್ಕು ನೂರಾ ಐವತ್ತು ವರ್ಷಗಳಷ್ಟು ಹಳೆಯದಾದ ಬಾಬಿಮಸೀದಿಯನ್ನು ಧ್ವಂಸ ಮಾಡಿ ದೇಶದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ಮತೀಯ ಆಧಾರದಲ್ಲಿ ವಿಭಜಿಸಲು ಪ್ರಯತ್ನಿಸಿದರು. ಕೋಮುವಾದಿ-ಫ್ಯಾಸಿಸ್ಟ್ ಸಂಘಟನೆ ಆರ್.ಎಸ್.ಎಸ್. ಅದಕ್ಕೆ ಮಾರ್ಗದರ್ಶನ ನೀಡಿತ್ತು. ಇಂದು ಸರ್ಕಾರದಲ್ಲಿರುವ ಹಲವು ಮುಖಂಡರು ಅಡ್ವಾಣಿ, ಜೋಶಿ, ಉಮಾ ಭಾರತಿ ಮತ್ತಿತರರು ಅಂದು ಆ ಕರಾಳ ಕೆಲಸ ನಡೆಯುತ್ತಿದ್ದ ಜಾಗದಲ್ಲಿ ಇದ್ದರು. ಆಗ ಉತ್ತರ ಪ್ರದೇಶದಲ್ಲಿ ಬಿಜೆಪಿಯೇ ಅಧಿಕಾರದಲ್ಲಿತ್ತು.

ಈ ನಿಂದನೀಯ ಕೆಲಸದ ನಂತರ ಸೂರತ್ ಮುಂಬೈ, ಭೋಪಾಲ್, ಜಯಪುರ ಇತ್ಯಾದಿ ಕಡೆಗಳಲ್ಲಿ ಗಲಭೆಗಳು ನಡೆದವು. ಜನವರಿ 1993 ರಲ್ಲಿ ಮುಂಬೈಯಲ್ಲಿ ನಡೆದ ಗಲಭೆಗಳ ಭೀಕರತೆಯನ್ನು ಶ್ರೀಕೃಷ್ಣ ಆಯೋಗದ ವರದಿ ನಮ್ಮ ಮುಂದಿಟ್ಟಿದೆ. ಅದನ್ನಿನ್ನೂ ಮಹಾರಾಷ್ಟ್ರ ಸರ್ಕಾರ ಜಾರಿಗೆ ತಂದಿಲ್ಲ.

ಈ ಕರಾಳ ಕೃತ್ಯದ ಹಿಂದೆ

ಆದರೆ ಈ ಧ್ವಂಸಕಾರ್ಯ ಒಂದೆರಡು ದಿನಗಳಲ್ಲಿ ನಡೆದದ್ದಲ್ಲ ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು. ಮೊದಲು ತನಗೂ ಈ ಬಾಬ್ರಿ ಮಸೀದಿ ವಿವಾದಕ್ಕೂ ಏನೂ ಸಂಬಂಧವಿಲ್ಲ ಎಂದು ನಟಿಸುತ್ತಿದ್ದ ಬಿಜೆಪಿ 1990 ರಲ್ಲಿ ವಿ.ಪಿ.ಸಿಂಗರ ಸರಕಾರ ಮಂಡಲ್ ಆಯೋಗದ ಶಿಫಾರಸುಗಳನ್ನು ಜಾರಿಗೆ ತರಲು ನಿರ್ಧರಿಸಿದಾಗ

ಡಿಸೆಂಬರ್ 6 ರಂದು ಅಯೋಧ್ಯೆಯಲ್ಲಿ ಆನಂದತುಂದಿಲರಾಗಿರುವ ಜೋಶಿ ಮತ್ತು ಉಮಾಭಾರತಿ - ಇವರಿಬ್ಬರೂ ಈಗ ಕೇಂದ್ರ ಮಂತ್ರಿಗಳು



ಅದಕ್ಕೆ ಪ್ರತಿಕ್ರಮವಾಗಿ ಆಗ ಬಿಜೆಪಿ ಅಧ್ಯಕ್ಷರಾಗಿದ್ದ ಅಡ್ವಾಣಿಯವರು ರಥಯಾತ್ರೆ ನಡೆಸಿದರು, ಬಿಜೆಪಿಯ ಚುನಾವಣಾ ಚಿಹ್ನೆ ಹೊತ್ತ ಈ ಅಯೋಧ್ಯಾ ಯಾತ್ರೆಯ ದಾರಿಯುದ್ದಕ್ಕೂ ರಕ್ತಪಾತ ನಡೆಯಿತು.ಕೊನೆಗೂ ವಿ.ಪಿ.ಸಿಂಗ್ ಸರಕಾರದ ಪತನವೂ ಆಯಿತು. ಈ ಎಲ್ಲದರಲ್ಲೂ ಕಾಂಗ್ರೆಸ್ ಪಾತ್ರ ಶ್ಲಾಘನೀಯವಂತೂ ಆಗಿರಲಿಲ್ಲ.

ಈ ಇಡೀ ಅವಧಿಯಲ್ಲಿ ಮುಸ್ಲಿಂ ಅಲ್ಪಸಂಖ್ಯಾತರು ತರ್ಕಬದ್ಧ ನಿಲುವು ತಳೆದರು. ಬಾಬ್ರಿ ಮಸೀದಿ- ರಾಮಜನ್ಮಭೂಮಿ ವಿವಾದವನ್ನು ಪರಸ್ಪರ ಮಾತುಕತೆಗಳ ಮೂಲಕ ಅಥವಾ ಒಂದು ನ್ಯಾಯಾಲಯದ ತೀರ್ಪಿನ ಮೂಲಕ ಪರಿಹರಿಸಲು ಅವರು ಸಿದ್ಧರಾಗಿದ್ದರು. ನ್ಯಾಯಾಲಯದ ತೀರ್ಪು ತಮಗೆ ವಿರುದ್ಧವಾಗಿದ್ದರೂ ಅದಕ್ಕೆ ಬದ್ಧರಾಗಲು ಅವರು ಸಿದ್ದರಿದ್ದರು. ಆದರೆ ಸಂಘ ಪರಿವಾರ ತದ್ವಿರುದ್ಧ ನಿಲುವು ತಳೆಯಿತು. ನ್ಯಾಯಾಲಯದ ತೀರ್ಪು ತಮ್ಮ ಪರವಾಗಿದ್ದರೆ ಮಾತ್ರ ಅದನ್ನು ಒಪ್ಪುವುದಾಗಿ ಒಮ್ಮೆ ಹೇಳಿದರೆ, ನಂತರ ಇದು ನಂಬಿಕೆಯ ಪ್ರಶ್ನೆ, ಯಾವುದೇ ನ್ಯಾಯಾಲಯ ಈ ಬಗ್ಗೆ ತೀರ್ಪು ನೀಡುವಂತಿಲ್ಲ ಎಂಬ ನಿಲುವು ತಳೆದು ಯಾವುದೇ ತರ್ಕಸಂಗತ ಪರಿಹಾರ ಸಿಗದಂತೆ ಮಾಡಿದರು. ಅಷ್ಟೇ ಅಲ್ಲ, ಅಲ್ಪಸಂಖ್ಯಾತರಲ್ಲಿ ಭಯದ ವಾತಾವರಣ ಮೂಡಿಸಿ ಕೊನೆಗೆ ಬಾಬ್ರಿಮಸೀದಿಯನ್ನು ಧ್ವಂಸ ಮಾಡುವ ಕರಾಳ ಅಪರಾಧ ಎಸಗಿದರು. ಇದಕ್ಕಾಗಿ ಉತ್ತರ ಪ್ರದೇಶದ ಬಿಜೆಪಿ ಸರಕಾರ ಸುಪ್ರೀಂ ಕೋರ್ಟ್‌ಗೆ ನೀಡಿದ ವಾಗ್ದಾನವನ್ನೂ ಮುರಿಯಿತು.

ಕಾಂಗ್ರೆಸ್ಸಿನ ಕಾಮೀಲು

ರಾಷ್ಟ್ರೀಯ ಸಮಗ್ರತಾ ಮಂಡಳಿ ಮೂಲಕ ಸಂಪೂರ್ಣ ಬೆಂಬಲವಿದ್ದರೂ ಆಗಿನ ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರಕಾರ ಅಯೋಧ್ಯೆಗೆ ಹೋಗುವ ಕರಸೇವಕರನ್ನು ಸಂಘಟಿಸುವಲ್ಲಿ ನೆರವು ನೀಡಿ ಪರೋಕ್ಷವಾಗಿ ಮಸೀದಿ ಧ್ವಂಸಕ್ಕೆ ಕಾಣಿಕೆ ನೀಡಿತು. ನಂತರವೂ ಈ ಇಡೀ ವಿವಾದವನ್ನು ಸಂವಿಧಾನದ ಕಲಮು 138(2) ರ ಪ್ರಕಾರ ಸುಪ್ರೀಂ ಕೋರ್ಟ್‌ಗೆ ಒಪ್ಪಿಸಿ ಶೀಘ್ರ ಇತ್ಯರ್ಥಕ್ಕೆ ಪ್ರಯತ್ನಿಸದೆ, ಕಲಮು 141 ರ ಪ್ರಕಾರ ಕೇವಲ ಅಭಿಪ್ರಾಯ ನೀಡಲು ಒಪ್ಪಿಸಿದ್ದರಿಂದ ಹಾಗೂ ಸುಪ್ರೀಂ ಕೋರ್ಟ್ ಅಲ್ಲಿ ರಾಮದೇವಸ್ಥಾನ ಇರಲಿಲ್ಲ ಎಂದು ಸಾಬೀತಾದರೆ ಏನು ಮಾಡುತ್ತೀರಿ ಎಂದು ಕೇಳಿದಾಗ ಸಮಂಜಸವಾದ ಉತ್ತರ ನೀಡದ್ದರಿಂದ ಈ ವಿವಾದ ಇನ್ನೂ ಪರಿಹಾರ ಕಾಣದೇ ಉಳಿದಿದೆ. ಕಾಂಗ್ರೆಸ್ ಪಕ್ಷ ತನ್ನ ಈ ಕೋಮುವಾದಿಗಳೊಂದಿಗೆ ರಾಜಿ ಮಾಡುವ ನಿಲುವಿಗೆ 1996 ರ ಚುನಾವಣೆಗಳಲ್ಲಿ ತಕ್ಕ ಶಾಸ್ತಿ ಅನುಭವಿಸಿತು. 1952 ರ ನಂತರ ಮೊತ್ತ ಮೊದಲ ಬಾರಿಗೆ ಬಹುಮತ ಗಳಿಸಲಿಲ್ಲ ಮಾತ್ರವಲ್ಲ, ಅತೀ ದೊಡ್ಡ ಪಕ್ಷವೆಂದೂ ಅನ್ನಿಸಿಕೊಳ್ಳಲಾರದ ಸ್ಥಿತಿ ಬಂತು. ಅತ್ತ ಬಾಬ್ರಿ ಮಸೀದಿ ಧ್ವಂಸ ನಡೆದ ಸ್ವಲ್ಪ ಸಮಯದೊಳಗೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಉತ್ತರ ಪ್ರದೇಶವೂ ಸೇರಿದಂತೆ ಎಲ್ಲಾ ಕಡೆಯೂ ಸೋತಿತು. ಜನ ಸಂಘ-ಪರಿವಾರ ಎಬ್ಬಿಸಿದ ಭಾವೋದ್ರೇಕಕ್ಕೆ ತಾತ್ಕಾಲಿಕವಾಗಿ ಮಾತ್ರ ಬಲಿಯಾಗಿದ್ದರು ಎಂಬುದನ್ನು ಅದು ತೋರಿಸಿತು.

ಸಂಘ ಪರಿವಾರದ ಹುನ್ನಾರ

ಒಟ್ಟಿನಲ್ಲಿ ಅಯೋಧ್ಯಾ ವಿವಾದ ಈಗಲೂ ಪರಿಹಾರ ಕಾಣದೆ ಉಳಿದಿದೆ. ಈ ಬೆಂಕಿ ಉರಿಯುತ್ತಲೇ ಇರಬೇಕು ಎಂಬುದೇ ಸಂಘ ಪರಿವಾರದ ಹುನ್ನಾರ. ಅತ್ತ ಸಂಘ ಪರಿವಾರ ತನ್ನ ಚಟುವಟಿಕೆಗಳನ್ನು ಸ್ವಲ್ಪವೂ ತಗ್ಗಿಸಿಲ್ಲ. ಅವರ ವಿವಿಧ ಸಂಘಟನೆಗಳು ದಿನ ಬೆಳಗಾದರೆ ಬಾಬ್ರಿ ಮಸೀದಿ ಇದ್ದಲ್ಲಿ ದೇವಸ್ಥಾನ ಕಟ್ಟಿಯೇ ಕಟ್ಟುವುದಾಗಿ ಸಾರುತ್ತಿವೆ. ಅದಕ್ಕೆ ತಯಾರಿಗಳೂ ಉತ್ತರ ಪ್ರದೇಶ, ರಾಜಸ್ಥಾನದ ನಾಲ್ಕು ಕಡೆ ನಡೆಯುತ್ತಿವೆ. ಆರ್.ಎಸ್.ಎಸ್. ನ ಸರಸಂಘಚಾಲಕ ಪ್ರೊ ರಾಜೇಂದ್ರ ಸಿಂಗರಂತರೂ ಇನ್ನೂ ಮುಂದೆ ಹೋಗಿ ಕಾಶಿ, ಮಥುರಾ ಪ್ರಶ್ನೆಗಳನ್ನು ಎತ್ತುವುದಾಗಿ ಸಾರಿದ್ದಾರೆ. ಒಬ್ಬನೇ ಒಬ್ಬ ಬಿಜೆಪಿ ಮುಖಂಡನೂ ಈ ಆರ್.ಎಸ್.ಎಸ್. ಯಜಮಾನ್‌ನ ಹೇಳಿಕೆಯ ಬಗ್ಗೆ ಪ್ರತಿಕ್ರಿಯಿಸುವ ಧೈರ್ಯವನ್ನು ತೋರಿಲ್ಲ. ಯಾವುದೇ ಪ್ರಾರ್ಥನಾ ಸ್ಥಳ ಆಗಸ್ಟ್ 15, 1947 ರಂದು ಯಾವ ಸ್ಥಾನ-ಮಾನ ಪಡೆದಿತ್ತೋ ಅದನ್ನು ಬದಲಿಸಬಾರದು ಎಂಬ ದೇಶದ ಕಾನೂನಿಗೇ ಆರ್.ಎಸ್.ಎಸ್. ಮುಖ್ಯಸ್ಥರ ಈ ಹೇಳಿಕೆ ವಿರುದ್ಧವಾಗಿದ್ದರೂ ಬಿಜೆಪಿ ಮುಖಂಡರೆಲ್ಲಾ ಬಾಯಿ ಮುಚ್ಚಿಕೊಂಡಿದ್ದಾರೆ.

ಈ ಡಿಸೆಂಬರ್ 6 ರಂದು ಸಂಸತ್ತಿನಲ್ಲಿ ನಡೆದ ಘಟನೆಗಳನ್ನು ಈ ಹಿನ್ನೆಲೆಯಲ್ಲಿ ಕಾಣಬೇಕು. ಇದರಿಂದ ತಪ್ಪಿಸಿಕೊಳ್ಳಲು ಸರಕಾರ ಸರ್ವಪ್ರಯತ್ನ ನಡೆಸಿತು. ಗೃಹಮಂತ್ರಿ ಅಡ್ವಾಣಿಯವರೇ ಸ್ವತಃ ಬಾಬ್ರಿ ಮಸೀದಿ ಧ್ವಂಸ ಕಾರ್ಯದಲ್ಲಿ ಆಪಾದಿತರಾದ 47 ಮಂದಿಯಲ್ಲಿ ಒಬ್ಬರಾದ್ದರಿಂದ ಈ ಪ್ರಶ್ನೆಯ ಬಗ್ಗೆ ಹೇಳಿಕೆ ನೀಡಲು ಅವರಿಗೆ ಅಧಿಕಾರವಿಲ್ಲ ಎಂದು ಮುಸ್ಲಿಂಲೀಗ್ ಸದಸ್ಯ ಬನಾತ್‌ವಾಲಾ ಆಕ್ಷೇಪಿಸಿದರು.


ಮರುದಿನ ಸಂಸತ್ತಿನಲ್ಲಿ ಒಂದು ನಾಟಕ ಪ್ರದರ್ಶನವಾಯಿತು. ಅಡ್ವಾಣಿ, ಜೋಶಿ ಆತುರಾತುರವಾಗಿ ರಾಜೀನಾಮೆ ಗೀಚಿ ಪ್ರಧಾನಮಂತ್ರಿಗಳಿಗೆ ಕೊಟ್ಟರು. ಇದನ್ನು ಪ್ರಧಾನ ಮಂತ್ರಿಗಳು ಸ್ವೀಕರಿಸುವುದಿಲ್ಲ ಎಂದು ಎಂತಹ ಮೂರ್ಖನೂ ನಿರೀಕ್ಷಿಸಬಹುದಾಗಿತ್ತು. ಹಾಗೆಯೇ ಆಯಿತು. (ನಂತರ ರಾಜ್ಯಸಭೆಯಲ್ಲಿ ಈ ಮಂತ್ರಿಗಳು ರಾಜೀನಾಮೆ ಪತ್ರ ನೀಡಿರಲಿಲ್ಲ, ರಾಜಿನಾಮೆ ಸಲ್ಲಿಸುವ ಆಶಯವನ್ನು ತಿಳಿಸಿದರಷ್ಟೇ ಎಂದು ಪ್ರಧಾನಮಂತ್ರಿಗಳು ಹೇಳಿದರು)

ಜಾತ್ಯಾತೀತ ಮಿತ್ರರು ಏನು ಮಾಡುತ್ತಿದ್ದಾರೆ?

ಈ ಸನ್ನಿವೇಶದಲ್ಲಿ ಒಂದು ಪ್ರಮುಖ ಪ್ರಶ್ನೆ ಎಂದರೆ ಬೇರೆ ರೀತಿಯಲ್ಲಿ ಜಾತ್ಯಾತೀತರಾದ ಬಿಜೆಪಿ ಮಿತ್ರ ಪಕ್ಷಗಳವರು ಏನು ಮಾಡುತ್ತಿದ್ದಾರೆ ಅಥವಾ ಏನು ಮಾಡಬೇಕೆಂದಿದ್ದಾರೆ ಎಂಬುದು. ನಿಜ, ಈ ಮಿತ್ರರಲ್ಲಿ ಕೆಲವರು ತಮ್ಮ ಆಳ್ವಿಕೆಯ ರಾಜ್ಯಗಳಲ್ಲಿ ಕೋಮುವಾದಿ ಶಕ್ತಿಗಳು ಗಮನಾರ್ಹ ಪ್ರಮಾಣದಲ್ಲಿ ತಮ್ಮ ಶಕ್ತಿಯನ್ನು ಕ್ರೋಢೀಕರಿಸಲು ಬಿಟ್ಟಿಲ್ಲ. ಆದರೆ ದೇಶದ ಧರ್ಮನಿರಪೇಕ್ಷ ಮತ್ತು ಪ್ರಜಾಪ್ರಭುತ್ವವಾದೀ ನಿಲುವಿನ ಜನಗಳ ಇಷ್ಟರಿಂದಲೇ ಸಮಾಧಾನ ಪಡುವಂತಿಲ್ಲ.

ಮಹತ್ವದ ಸಂಗತಿಯೆಂದರೆ ಆರ್.ಎಸ್.ಎಸ್. ಪ್ರಭುತ್ವದ ಎಲ್ಲಾ ರಂಗಗಳಲ್ಲಿ ನುಸುಳಲು ದೊಡ್ಡ ಪ್ರಮಾಣದಲ್ಲಿ ಪ್ರಯತ್ನ ನಡೆಯುತ್ತಿರುವಾಗ, ಅಲ್ಪಸಂಖ್ಯಾತರ ಮೇಲೆ ಮುಖ್ಯವಾಗಿ ಈಗಿನ ಸಂದರ್ಭದಲ್ಲಿ ಕ್ರೈಸ್ತರ ಮೇಲೆ ಗುರಿಯಿಟ್ಟಿರುವಾಗ ಬಿಜೆಪಿಯ ಈ ಜಾತ್ಯಾತೀತ ಮಿತ್ರರು ಯಾವುದೇ ಆತಂಕ ತೋರಿಸುತ್ತಿಲ್ಲ. ತಾವೇ ಸಾರುತ್ತಿದ್ದ ಸಿದ್ಧಾಂತಗಳಿಗೆ ಮಾನ್ಯತೆ ನೀಡುತ್ತಿಲ್ಲ. ಕ್ರೈಸ್ತರ ಮೇಲೆ ಹಲ್ಲೆಗಳ ನಂತರ ಆರ್.ಎಸ್.ಎಸ್. ನೇತೃತ್ವದ ಪಡೆಗಳು ಪೋಪ್ ಭೇಟಿ ಕಾಲದಲ್ಲಿ ಬೊಬ್ಬೆ ಇಟ್ಟಾಗ ದಿಲ್ಲಿಯ ಜೆಜೆ ಕಾಲನಿಯಲ್ಲಿ ಚರ್ಚ್ ಮೇಲೆ ಧಾಳಿ ಹಾಗೂ ಈಗ ಕ್ರಿಸ್‌ಮಸ್ ಮುನ್ನ ಗುಜರಾತಿನ ದಂಗ್ ಜಿಲ್ಲೆಯಲ್ಲಿ ಗಲಭೆ ಸೃಷ್ಟಿಸಲು ಯೋಜಿಸುತ್ತಿರುವಾಗ ಬಿಜೆಪಿಯ ಜಾತ್ಯಾತೀತ ಮಿತ್ರರು ಒಂದೇ ಒಂದು ಪ್ರತಿಭಟನೆಯ ಸೊಲ್ಲೆತ್ತಿಲ್ಲ. ಬಿಜೆಪಿ ನೇತೃತ್ವದ ಸರಕಾರ ಈ ಬಗ್ಗೆ ಕಠಿಣ ಕ್ರಮ ಕೈಗೊಳ್ಳುವಂತೆ ಮಾಡುವುದು, ಆರ್.ಎಸ್.ಎಸ್. ಪಡೆಗಳು ಹಿಂದೆ ಸರಿಯುವಂತೆ ಮಾಡುವುದು ಅವರಿಗೆ ಖಂಡಿತಾ ಸಾಧ್ಯವಿದೆ. ಆದರೆ ಅವರು ಹಾಗೆ ಮಾಡುತ್ತಿಲ್ಲ. ಇದರಿಂದ ಭಾರತದ ಧರ್ಮನಿರಪೇಕ್ಷ, ಬಹುಮುಖೀ ಸ್ವರೂಪದ ಮುಂದೆ ಒಂದು ಗಂಭೀರ ಪ್ರಶ್ನೆ ಚಿಹ್ನೆ ಬಿದ್ದಿದೆ.

ಆರ್.ಎಸ್.ಎಸ್. ಬಿಜೆಪಿಯ ಕೋಮುವಾದಿ ಅಬ್ಬರದ ಹಿಂದೆ ಇನ್ನೊಂದು ಅಂಶವೂ ಇದೆ. ಐಎಂಎಫ್-ವಿಶ್ವಬ್ಯಾಂಕ್ ಹೇರಿದ ನೀತಿಗಳಿಂದಾಗಿ ನಮ್ಮ ಆರ್ಥಿಕ ರಂಗದಲ್ಲಿ ಈಗೊಂದು ಗಂಭೀರ ಸನ್ನಿವೇಶ ಏರ್ಪಟ್ಟಿದೆ. ಇವು ನಮ್ಮ ಆರ್ಥಿಕ ಮತ್ತು ಜನಜೀವನದ ಮೇಲೆ ಭಾರಿ ವಿಪತ್ತು ತಂದಿದೆ. ಅದೇ ವೇಳೆಗೆ ಈ ನೀತಿಗಳ ವಿರುದ್ಧ ಕ್ರಮೇಣ ಪ್ರತಿರೋಧವೂ ಬೆಳೆಯುತ್ತಿದೆ. ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಧಾಳಿಗಳೂ ಆರಂಭವಾಗಲಿವೆ. ಇಂತಹ ಸಂದರ್ಭದಲ್ಲಿ ಜನಗಳ ಗಮನವನ್ನು ಗಂಭೀರ ವಿಷಯಗಳಿಂದ ಬೇರೆಡೆಗೆ ತಿರುಗಿಸಿ ಅವರು ಸಣ್ಣ-ಪುಟ್ಟ ಪ್ರಶ್ನೆಗಳಲ್ಲೇ ಸಿಲುಕಿಕೊಳ್ಳುವಂತೆ ಮಾಡಲು ಬಿಜೆಪಿ ಸಹಜವಾಗಿಯೇ ಪ್ರಯತ್ನಿಸುತ್ತಿದೆ. ಆರ್.ಎಸ್.ಎಸ್. ಪಡೆಗಳ ಕೋಮುವಾದಿ ಅಬ್ಬರಗಳ ಮೂಲಕ ಈ ದುರುದ್ದೇಶ ಸಾಧನೆಗೆ ಪ್ರಯತ್ನಿಸಲಾಗುತ್ತಿದೆ. ಆದರೆ ಇವುಗಳಿಂದ ಬಿಜೆಪಿಯ ಮಿತ್ರಪಕ್ಷಗಳ ಜನ ಬೆಂಬಲದ ಮೇಲೆ, ಸಾಮೂಹಿಕ ನೆಲೆಯ ಮೇಲೆ ದುಷ್ಪರಿಣಾಮ ಬೀರುವುದು ಖಂಡಿತ. ಅಲ್ಲದೆ ದೇಶದ ಒಕ್ಕೂಟ ಸ್ವರೂಪ ಮುಂತಾದ ಪ್ರಶ್ನೆಗಳಲ್ಲಿ ಅವರು ಸುಮ್ಮನೇ ಕೂರಲೂ ಸಾಧ್ಯವಿಲ್ಲ. ಆದ್ದರಿಂದ ಇಂತಹ ಸನ್ನಿವೇಶದಲ್ಲಿ ಒಂದೆಡೆ ಎಡ, ಪ್ರಜಾಪ್ರಭುತ್ವ ಹಾಗೂ ಧರ್ಮನಿರಪೇಕ್ಷ ಶಕ್ತಿಗಳು ದೇಶದ ಐಕ್ಯತೆಯನ್ನು , ನಮ್ಮ ರಾಜಕೀಯ ವ್ಯವಸ್ಥೆಯ ಧರ್ಮನಿರಪೇಕ್ಷ ಹಾಗೂ ಒಕ್ಕೂಟ ಸ್ವರೂಪವನ್ನು ರಕ್ಷಿಸಲು, ಅದೇ ರೀತಿ ಜನಗಳ ಬದುಕನ್ನು ರಕ್ಷಿಸಲು ಸರ್ವ ಪ್ರಯತ್ನ ನಡೆಸುತ್ತಿರುವಾಗ ಬಿಜೆಪಿಯ ಈ ಮಿತ್ರ ಪಕ್ಷಗಳ ವಿಶ್ವಾಸಾರ್ಹತೆಗೆ ಒಂದು ಸವಾಲು ಬಂದಿದೆ. ○



ಒರಿಸ್ಸಾ ಪುನರ್ನಿರ್ಮಾಣದಲ್ಲಿ ಇಡೀ ರಾಷ್ಟ್ರವೇ

ಈ ಚಂಡಮಾರುತದ ಮಹಾದುರಂತದ ಹಾನಿಯ ವಿವರಗಳನ್ನು ನೀವು ಕಂಡಂತೆ ನೀಡುತ್ತೀರಾ?

ಆಗಿರುವ ಹಾನಿ ಎಣಿಕೆಗೆ ಸಿಗಲಾರದಷ್ಟು. ಇದು ಮಹಾದುರಂತ. ಒರಿಸ್ಸಾದ 30 ಜಿಲ್ಲೆಗಳಲ್ಲಿ 10 ಜಿಲ್ಲೆಗಳು ಸಂಪೂರ್ಣ ನಾಶವಾಗಿವೆ. ಕನಿಷ್ಟ 20,000 ಜನ ಸಾವನ್ನಪ್ಪಿದ್ದಾರೆ. ಏನಿಲ್ಲವೆಂದರೂ 5 ಲಕ್ಷದಷ್ಟು ದನಗಳು ಸತ್ತಿವೆ. ಮೀನು, ಸೀಗಡಿ, ಭತ್ತ-ತೆಂಗು... ಹೀಗೆ ಇಡೀ ಕೃಷಿ, ಮನೆಗಳು ನಾಶವಾಗಿ ನೆಲಸಮವಾಗಿವೆ. ಕನಿಷ್ಟ 1000ದಷ್ಟು ಹೈಸ್ಕೂಲ್-ಪ್ರಾಥಮಿಕ ಶಾಲೆಗಳು ಧ್ವಂಸಗೊಂಡಿವೆ. ಗುಡಿಸಲು ಹಾಗೂ ಸಾಧಾರಣ ಮನೆಗಳಲ್ಲಿದ್ದವರ ಪಾಡು ಹೇಳಲೇಬೇಕಿಲ್ಲ. ಮುಖ್ಯ ಕೈಗಾರಿಕೆಗಳೂ ಪೂರ್ಣ ನಾಶವಾಗಿವೆ. ಜಗತ್‌ಸಿಂಗ್ ಪುರದ ಕೇಂದ್ರವಾದ ಜಿಲ್ಲೆಗಳ 12 ಬ್ಲಾಕ್‌ಗಳು ಪೂರ್ತಿನಾಶವಾಗಿದೆ. ಭುವನೇಶ್ವರ, ಕಟಕ್ ನಂತಹ ಮಹಾನಗರಗಳು ಬಹಳಷ್ಟು ಹಾನಿಗೆ ಈಡಾಗಿವೆ. ಈ ನಗರಗಳು ಹಸಿರು-ಗಿಡಮರಗಳಿಂದ ತುಂಬಿ ಸುಂದರವಾಗಿ ಕಂಗೊಳಿಸುತ್ತಿದ್ದವು. ಆದರೀಗ ಅವೆಲ್ಲಾ ಚಂಡಮಾರುತದ ರುದ್ರನರ್ತನಕ್ಕೆ ನೆಲಕಚ್ಚಿ ಪೂರ್ತಿ ಬೋಳಾಗಿವೆ. ಉತ್ಕಲ ವಿಶ್ವವಿದ್ಯಾಲಯ, ಲೈಬ್ರರಿ ಒಳಗೊಂಡು ಸುಮಾರು 26 ಕೋಟಿಯಷ್ಟು ನಾಶವಾಗಿದೆ. ಕೃಷಿ ಕಾಲೇಜ್, ರೇವೆನಾ ಕಾಲೇಜ್‌ಗಳು ಹಾಳಾಗಿವೆ. ರಸ್ತೆ, ರೈಲ್ವೆ ಮಾರ್ಗ ಪೂರ್ತಿ ಹಾಳಾಗಿವೆ. ಒಂದು ರೀತಿಯಲ್ಲಿ ಪುನರ್‌ವ್ಯವಸ್ಥೆ ಎಂದರೆ 10 ಜಿಲ್ಲೆಗಳನ್ನು ಪೂರ್ಣವಾಗಿ ಪುನಃ ಕಟ್ಟುವುದು ಎಂದೇ ಅರ್ಥ. ಇನ್ನು ಸತ್ತ, ಜನ-ದನಗಳು ಅನೇಕ ಕಡೆ ಸುಡುವ ಮೊದಲೇ 'ಡಿಕಂ ಪೋಸ್' ಆಗಿ ನೀರು-ವಾತಾವರಣವಿಡಿ ಕಲುಷಿತಗೊಂಡು ಸಾಂಕ್ರಾಮಿಕ ರೋಗಗಳು ಹಬ್ಬುತ್ತಿವೆ. ನೀರು ರೋಗಾಣುಗಳಿಂದ ತುಂಬಿದ್ದು, ಬದುಕುಳಿದಿರುವ ಮೀನುಗಳು ವಿಷಮಯಗೊಂಡು ಯಾರೂ ತಿನ್ನಬಾರದೆಂಬ ಸೂಚನೆ ನೀಡಲಾಗಿದೆ. ಉಳಿದುಕೊಂಡಿರುವವರಲ್ಲಿ ಸಾವಿರಾರು ಜನ ಅಘಾತದಿಂದ ಚೇತರಿಸಿಕೊಂಡಿಲ್ಲ. ಏನನ್ನೂ ಹೇಳದವರು, ಏನನ್ನೂ ಕೇಳದವರು, ಹುಚ್ಚು ಹಿಡಿದು ಬಡಬಡಿಸುವವರು ನೂರಾರು ಜನ. ಕನಿಷ್ಟ 1000 ರಷ್ಟು ಮಕ್ಕಳು ಪೂರ್ತಿ ಅನಾಥರು.... ಆಗಿರುವ ಹಾನಿ ಎಷ್ಟಂತಾ ಹೇಳುವುದು....? ಏನೇನು ಹೇಳುವುದು....? ಎಣಿಸಿ ಹೇಳಲು ಉಳಿದಿರುವುದೇನು? ಎಲ್ಲೆಲ್ಲೂ ನೀರು, ಕೆಸರು.. ಭಗ್ನ ಪಳೆಯುಳಿಕೆಗಳು.

ಇಷ್ಟೊಂದು ಭೀಕರ ದುರಂತದ ಬಗ್ಗೆ ಸರ್ಕಾರಕ್ಕೆ ತಿಳಿದಿರಲಿಲ್ಲವೇ? ಜನ-ಜಾನುವಾರಗಳನ್ನಾದರೂ ಉಳಿಸಲು ಕೈಗೊಂಡು ಕ್ರಮಗಳಾದರೂ ಏನು?

ಚಂಡಮಾರುತ ಬೀಸಲಿದೆಯೆಂದು ತಿಳಿದಾಗ ಅದು ಸಣ್ಣ ಪ್ರಮಾಣದ್ದು ಎಂದು ಭಾವಿಸಲಾಗಿತ್ತು. ಅಕ್ಟೋಬರ್ 29 ರಂದು ಆಟೋ ಮೂಲಕ ಪ್ರಚಾರ ನಡೆಸಿದರು. ಚಂಡಮಾರುತದ ಸೂಚನೆಯನ್ನು ಬಹಳಷ್ಟು ಜಿಲ್ಲಾ ಕಲೆಕ್ಟರುಗಳು ಗಂಭೀರವಾಗಿ ಪರಿಗಣಿಸಲಿಲ್ಲ. ಹೀಗಾಗಿ ಜನತೆಯನ್ನು ತೆರವು ಮಾಡಿಸಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯುವುದನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಕಟಕ್-ಪರದೀಪ್ ಜಿಲ್ಲೆಗಳ ಅಧಿಕಾರಿಗಳು ಕೇಂದ್ರ ಸರ್ಕಾರದ ಏಜೆನ್ಸಿ ಮೂಲಕ ಒದಗಬಹುದಾದ ಸ್ಥಿತಿ ಅರಿತು ಕ್ರಮವಹಿಸುವುದರ ಒಳಗೆ ಪರಿಸ್ಥಿತಿ ಕೈಮೀರಿ ಹೋಗಿತ್ತು. ಚಂಡಮಾರುತ ಎದುರಿಸಲೆಂದು ಇಡಲಾಗಿದ್ದ ಅಕ್ಕಿ, ಧಿಃ ಮುಂತಾದವುಗಳು ನಾಶವಾಗಿ ಹೋದವು. ಒಂದು ರೀತಿಯಲ್ಲಿ ಇಷ್ಟೊಂದು ಮಹಾ ಚಂಡ ಮಾರುತವನ್ನು ಎದುರಿಸುವ ಅನುಭವವೂ ಸರ್ಕಾರಕ್ಕೆ ಇರಲಿಲ್ಲ. ಆದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುವಾಗ, ಎದುರಿಸಬಹುದಾಗಿದ್ದಷ್ಟನ್ನು ಅಧಿಕಾರಿಗಳು ಮಾಡಲಿಲ್ಲ. IAS, IPS ನ ಬಹುತೇಕ (ಕೆಲವರನ್ನುಬಿಟ್ಟರೆ) ಅಧಿಕಾರಿಗಳು ಬೇಕೆಂದೇ ಕ್ರಮವಹಿಸಲಿಲ್ಲ. ಮತ್ತು ಮುಂದೆಯೂ ಸಾಕಷ್ಟು ಅಸ್ತವ್ಯಸ್ತ ಹಾಗೂ ಹಾನಿಯಾಗುವಂತೆ ನೋಡಿಕೊಂಡರು.

ಅಧಿಕಾರಿಗಳು ಹೀಗೇಕೆ ಮಾಡಿದರು?

ಗೋಮಾಂಗೋ ನೇತೃತ್ವದ ರಾಜ್ಯ ಸರ್ಕಾರ, ಇನ್ನೇನು ಕೆಲವೇ ತಿಂಗಳಲ್ಲಿ ಚುನಾವಣೆ ಎದುರಿಸಲಿದೆ. ಇದು ಹೊರಹೋಗುವ ಸರ್ಕಾರ ಎಂಬುದು ಬಹಳ ಮುಖ್ಯವಾಗಿ ಇದು ಕಾಂಗ್ರೆಸ್ ಸರ್ಕಾರ, ದೆಹಲಿಯಲ್ಲಿರುವುದು ಬಿಜೆಪಿ ಸರ್ಕಾರ. ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಸರ್ಕಾರ ಚುನಾಯಿತಗೊಳ್ಳದಂತೆ, ಬಿಜೆಪಿ-ಬಿಜೆಡಿ ಪಕ್ಷಗಳು ಸರ್ಕಾರ ರಚಿಸುವಂತೆ ನೋಡಿಕೊಳ್ಳುವುದು ಅಧಿಕಾರಿಗಳ ಹುನ್ನಾರ. ಇದಕ್ಕೆ ರಾಜ್ಯದ ವಿರೋಧ ಪಕ್ಷಗಳಿಂದ ಬಿಜೆಪಿ-ಬಿಜೆಡಿ ಹಾಗೂ ಕೇಂದ್ರದ ಕುಮ್ಮಕ್ಕೂ ಇತ್ತು. ಇದರೊಂದಿಗೆ ರಾಜ್ಯದ ಕಾಂಗ್ರೆ ಒಳಜಗಳವೂ ಸೇರಿಕೊಂಡಿತು.

ಕೇಂದ್ರ ಸರ್ಕಾರ 500 ಕೋಟಿ ನೀಡುವುದಾಗಿ ಪ್ರಕಟಿಸಿದೆಯಲ್ಲಾ ಅದರ ಗತಿ ಏನಾಗಿದೆ? ವಾಜಪೇಯಿ ಸಹ ರಾಜ್ಯಕ್ಕೆ ಭೇಟಿ ನೀಡಿದ್ದಾರೆ. ಜಾರ್ಜ್ ನೇತೃತ್ವದ ಪರಿಹಾರ ಉಸ್ತುವಾರಿ ತಂಡ ಎಂದೆಲ್ಲಾ ಇದೆಯಲ್ಲಾ?

ಕೇಂದ್ರ ಸರ್ಕಾರದ ನೆರವು ಎಂಬ ಪ್ರಕಟಣೆ ಒಂದು ದೊಡ್ಡ ನಾಟಕ. ಈ 500 ಕೋಟಿಯನ್ನು ಸಹ 100+100+300 ಎಂದು ವಿಂಗಡಿಸಲಾಗಿದೆ. ಮತ್ತು ರಾಜ್ಯ ಸರ್ಕಾರವನ್ನು ನಿರ್ಲಕ್ಷಿಸಿ ಇದನ್ನು ಕೇಂದ್ರ ಸರ್ಕಾರವೇ ನೇರವಾಗಿ ನಿರ್ವಹಿಸುವ ಯೋಜನೆ ರೂಪಿಸಿದೆ. ಪ್ರಧಾನಿ ವಾಜಪೇಯಿಯವರ ಸಂದರ್ಶನ ಒಂದು ದೊಡ್ಡ ಪ್ರಹಸನ. ಅವರೇ ಪ್ರಕಟಿಸಿದಂತೆ ನವೆಂಬರ್ 5 ರಂದು ಹಾನಿಗೀಡಾದ ಪ್ರದೇಶಗಳನ್ನು ಖುದ್ದಾಗಿ ವಿಮಾನದ ಮೂಲಕ ಸರ್ವೆ (ಏರಿಯಲ್ ವ್ಯೂ) ನಡೆಸುವುದಾಗಿ ಹೇಳಿದ್ದರು. ಅದರಂತೆ 1 ಗಂಟೆಗೆ ಭುವನೇಶ್ವರ ತಲುಪಿ 4 ಗಂಟೆಗೆ ಈ ವೀಕ್ಷಣೆಗೆ ನಡೆಯಬೇಕಿತ್ತು. ಆದರೆ ಪ್ರಧಾನಿ ತಲುಪಿದ್ದೇ ಸಂಜೆಗೆ. ನೇರವಾಗಿ 6 ಗಂಟೆಗೆ ಸೆಕ್ರೆಟಾರಿಯೆಟ್ ಪತ್ರಿಕಾಗೋಷ್ಠಿ ಕರೆದು ಹಾನಿಯ ಬಗ್ಗೆ, ಮುಖ್ಯವಾಗಿ ರಾಜ್ಯ ಸರ್ಕಾರದ ವಿಫಲತೆಗಳ ಬಗ್ಗೆ ದೂಷಣೆ ನಡೆಸಿದರು. ಪರಿಹಾರದತ್ತ ತಮ್ಮ ಕ್ರಮ ಏನು? ಎಂದು ಪ್ರಶ್ನಿಸಿದ ಪತ್ರಕರ್ತರಿಗೆ 'ತಮ್ಮಲ್ಲಿ ಒಂದು ದೊಡ್ಡ ಯೋಜನೆ ಇದೆ' ಎಂದರು. ಕೇಳಿದಾಗ "ಇಲ್ಲ.... ಅದು ಬಹಳ ದೊಡ್ಡದು, ನಂತರ ಪ್ರಕಟಿಸುತ್ತೇವೆ" ಎಂದು ಗೋಷ್ಠಿ ಮುಗಿಸಿ, ದೆಹಲಿಯತ್ತ ಪ್ರಯಾಣಕ್ಕೆ ಅಣಿಯಾದರು. ಆ ಯೋಜನೆ ಇದುವರೆಗೂ ಪ್ರಕಟವಾಗಲೇ ಇಲ್ಲ. ಈ ಮಹಾ ದುರಂತವನ್ನು 'ರಾಷ್ಟ್ರೀಯ ದುರಂತ' ಎಂದೂ ಪ್ರಕಟಿಸಿಲ್ಲ.

ಮುಂದೆ ಉಸ್ತುವಾರಿಯಾಗಿ ಬಂದ ಜಾರ್ಜ್ ಫರ್ನಾಂಡೀಸ್ ರವರನ್ನು ಈ ಬಗ್ಗೆ ಕೇಳಿದಾಗ 'ರಾಷ್ಟ್ರೀಯ ದುರಂತ' ಎಂಬುದು ಸಂವಿಧಾನದಲ್ಲೇ ಇಲ್ಲವೆಂದೂ, ಈ ಘಟನೆಯನ್ನು 'ಅಂತರ್‌ರಾಷ್ಟ್ರೀಯ ದುರಂತ' ಎನ್ನುವುದು ಸೂಕ್ತ ಎಂದು ಉಢಾಫೆ ಹೊಡೆದರು.

ಜಾರ್ಜ್ ಫರ್ನಾಂಡೀಸ್ ಸಹ ಕೇಂದ್ರ ಸರ್ಕಾರದ ಪ್ರತಿನಿಧಿಯಾಗಿ ರಾಜ್ಯಕ್ಕೆ ಭೇಟಿ ನೀಡಿದಾಗಲೂ ದುರಂತ ನಡೆದ ಸ್ಥಳಗಳಿಗೆ ಹೋಗಲೇ ಇಲ್ಲ. ಇಡೀ ಅಧಿಕಾರಿಗಳ ಸಭೆ ಕರೆಯುವುದು, ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಸರ್ಕಾರವನ್ನು ಟೀಕಿಸುವುದು ನಡೆಸಿದರು. ಮೊದಲ ಭೇಟಿಯಲ್ಲಿ ಜನರಿಗೆ ಟಾರ್ಪಲಿನ್, ಕಂಬಳಿಗಳು, ಮುಂತಾಗಿ ನೀಡುವುದಾಗಿ ಹೇಳಿದರು. ಆದರೆ ಮರುದಿನವೇ ಇದೆಲ್ಲಾ ಅಸಾಧ್ಯವಾದದ್ದು ಎಂದರು. ವಾಜಪೇಯಿ ಫರ್ನಾಂಡೀಸ್ ಮತ್ತು ಬಿಜೆಪಿ ಪೂರ್ತಿಯಾಗಿ ಈ ಘಟನೆಯನ್ನು ಸಂಕುಚಿತ ರಾಜಕೀಯಕ್ಕೆ ಬಳಸಿದರು. ಇದು ಅಮಾನವೀಯವಾದದು.

ಎರಡನೇ ಬಾರಿ ಫರ್ನಾಂಡೀಸ್ ಭೇಟಿ ನೀಡಿದಾಗ 'ರಾಜ್ಯ ಸರ್ಕಾರಕ್ಕೆ ಒಳ್ಳೆ ಶಿಫಾರಸು ಪತ್ರ ನೀಡಿದರು. ಎಲ್ಲವೂ ಸಮರ್ಪಕ ವಿದೆಯೆಂದರು. ಆದರೆ ಏನೂ ಸರಿಯಾಗಿ ಜನತೆಗೆ ಸಿಗುತ್ತಿರಲಿಲ್ಲ. ಪರಿಹಾರ ವಸ್ತುಗಳು ಬಂದಿದ್ದರೂ ಸಮರ್ಪಕ ವಿತರಣೆ ಆಗಲಿಲ್ಲ. ಫರ್ನಾಂಡೀಸ್ ಹೇಳಲು ಒಂದೇ ಕಾರಣವೆಂದರೆ ಅವರೇ Task Force ನ ನಾಯಕರು, ಉಸ್ತುವಾರಿಗಳೂ ಆಗಿದ್ದು ತಮ್ಮ ನಾಯಕತ್ವಕ್ಕೆ ತಾವೇ ಶಹಬಾಸ್‌ಗಿರಿ ಕೊಟ್ಟುಕೊಳ್ಳುವ ಪ್ರಯತ್ನವಾಗಿತ್ತದು.

ಈ ನಡುವೆ ಬಿಜೆಪಿ ಮತ್ತು ಬಿಜೆಡಿಯವರು ನಡೆಸಿದ ಅನೇಕ ತಂತ್ರ-ಕುತಂತ್ರಗಳ ಪ್ರಯತ್ನಗಳಿವೆ. ಗೋಮಾಂಗೋ ನೇತೃತ್ವದ ರಾಜ್ಯ ಸರ್ಕಾರ ನಿಷ್ಪ್ರಯೋಜಕಾರಿ ಎಂದೆಲ್ಲಾ ಬಿಂಬಿಸುವಲ್ಲಿ.. ಗೋಮಾಂಗೋ ಸರ್ಕಾರ ಅಸಮರ್ಥವಾಗಿದ್ದು ವಜಾಗೊಳಿಸಲಾಗಿದೆ. ರಾಷ್ಟ್ರಪತಿ ಆಡಳಿತ ಹೇರಲಾಗಿದ್ದು, ಸುಷ್ಮಾಸ್ವರಾಜ್ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಅವರು ಅಧಿಕಾರಿಗಳಿಗೆ ಖುದ್ದಾಗಿ ನಿರ್ದೇಶನ ನೀಡುತ್ತಿರುವುದನ್ನು ಕಣ್ಣಾರೆ ಕಂಡಿದ್ದೇನೆ" ಎಂದೆಲ್ಲಾ ಬಣ್ಣಿಸುವ ಹಲವರನ್ನು ನೋಡಬಹುದಿತ್ತು. ಎಲ್ಲಾ ಸಂಪರ್ಕಗಳು ಕಡಿದುಹೋಗಿ ಅಯೋಮಯ



ಸಂದರ್ಶಕರು :

ಚಂಡಮಾರುತ ಎದುರಿಸಿದ್ದ ಬಂಗಾಳ

ಹಿಂದೆ ಬಂಗಾಳದ ಮೇಲೆ ಚಂಡಮಾರುತ ಅಪ್ಪಳಿಸಿದಾಗ ಎಲ್ಲವೂ ನಾಶವಾಗಿ ಹೋಯಿತು ಎಂಬಂತಹ ಸ್ಥಿತಿ. ಎಲ್ಲವನ್ನು ಪುನರ್ ನಿರ್ಮಿಸಬೇಕಾದ ಸವಾಲು. ಅಲ್ಲಿಯ ಜನತೆ ಅದನ್ನು ಮಹಾ ಸವಾಲಿನಂತೆ ಸ್ವೀಕರಿಸಿದರು. ಎದೆ ಗುಂದದೆ ಒಂದಾಗಿ ವಿವಿಧ ಕಾರ್ಯಯೋಜನೆ ರೂಪಿಸಿ, ಅಹೋರಾತ್ರ ಶ್ರಮಿಸಿದರು, ಪುನಃ ಕಟ್ಟಿದರು. ಇದಕ್ಕೆ ಸಿಪಿಐ(ಎಂ), ವಿವಿಧ ಸಾಮೂಹಿಕ ಸಂಘಟನೆಗಳು ನೇತೃತ್ವ ನೀಡಿದ್ದವು. ಇಂದು ಒರಿಸ್ಸಾಕ್ಕೂ ಇಂತಹ ತೀರ್ಮಾನ ಬೇಕಿದೆ. ಎಲ್ಲರೂ ಕೈಜೋಡಿಸಬೇಕಿದೆ.


ಸುದ್ದಿಯಾಗದ ಸುದ್ದಿಗಳು

"ಆಂಧ್ರದ ಮುಖ್ಯಮಂತ್ರಿ ಚಂದ್ರ ಬಾಬು ನಾಯ್ಡು ಒರಿಸ್ಸಾದಲ್ಲಿ ಚಂಡ ಮಾರುತ ಬೀಸಿದ ಬೆನ್ನಲ್ಲೇ ಅಮೋಘವಾದ ಸಹಾಯ ಹಸ್ತ ಚಾಚಿದ. ವಸ್ತುಗಳನ್ನು ಪಂಪ್ ಮಾಡಿದ. ಆತನೇ ಅಲ್ಲಿ 'ಜನಪ್ರಿಯ' ಎಂದು ಪತ್ರಿಕೆಗಳಲ್ಲಿ ಪ್ರಚಾರಿಸಲಾಗಿದೆ. ರಾಜ್ಯದಿಂದ ವರದಿ ಮಾಡಲು ಹೋದ ಸಂಪಾದಕರೊಬ್ಬರು ಇದನ್ನೇ ಗುಣಗಾನ ಮಾಡಿ, ಥ್ಯಾಂಕ್ಸ್ ಟು ಚಂದ್ರಬಾಬು ನಾಯ್ಡು ಎಂಬ ಬ್ಯಾನರ್ ಗಳು ಪೋಟೋಗಳನ್ನು ಛಾಪಿಸಿದ್ದಾರೆ. ಎಲ್ಲವು ಹಾಳಾಗಿರುವ ಈ ಪ್ರದೇಶದಲ್ಲಿ ಇಂತಹ ಬ್ಯಾನರ್‌ಗಳನ್ನು ಬರೆಸಿಹಾಕಲು ಯಾರಿಗೆ ಸಮಯವಿತ್ತು ಎಂದು ನಂತರ ಯೋಚಿಸೋಣ. ಆದರೆ, ಅವರ ಸಹಾಯಕ್ಕೆ ಧನ್ಯವಾದ ಹೇಳುತ್ತಾ ಯೋಚಿಸಬೇಕಾದು, ಕಳುಹಿಸಿದ ಸರಕು-ಸರಂಜಾಮುಗಳ ಜೊತೆಗೆ ವ್ಯವಹಾರದ ಬಾಕಿ ಬಿಲ್ ಪಾವತಿಸಬೇಕೆಂದು ಕಳುಹಿಸಿದ ಪತ್ರದ ಬಗ್ಗೆ. ಅಂದರೆ ಇದು ಪುಕ್ಕಟ್ಟೆ ಅಲ್ಲ.


ಸೋಜಿಗದ ವಿಷಯವೆಂದರೆ ಬಿಡಿಕಾಸಿನ ನಿರೀಕ್ಷೆಯಿಲ್ಲದೇ ಕೋಟ್ಯಾಂತರ ರೂಪಾಯಿಗಳ ಮೊತ್ತದ ಸಾಮಾನುಗಳನ್ನು, ಸ್ವಯಂ ಸೇವಕರನ್ನು ಕ್ಷಿಪ್ರವಾಗಿ ಒರಿಸ್ಸಾಕ್ಕೆ ಕಳುಹಿಸಿದ ಪ.ಬಂಗಾಳದ ಎಡರಂಗ ಸರ್ಕಾರದ ಕ್ರಮಗಳನ್ನು ಕುರಿತು ಈ ಮಾಧ್ಯಮಗಳ ಸಂವೇದನಾಶೀಲರು ಮಾತನಾಡದೇ ಹೋಗಿರುವುದು ಎಂತಹ ಕುರುಡು?

ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ವಿವರಣೆ ನೀಡಿದ ಒರಿಸ್ಸಾ ಪೀಪಲ್ಸ್ ರಿಲೀಫ್ ಕಮಿಟಿ'ಯ ಮುಖಂಡರು ಬಿಲ್‌ಗಳ ಪ್ರತಿಗಳನ್ನು ಪ್ರದರ್ಶಿಸಿದರು. ಪ.ಬಂಗಾಳದ ನೆರವು ಬಗ್ಗೆ ವಿವರಿಸಿದರು.

ಆದರೂ ಇವಾವೂ ಸುದ್ದಿಯಾಗಲೇ ಇಲ್ಲ. ಭಲೇ! ಸದಾ ಸತ್ಯವನ್ನೇ ಶೋಧಿಸಿ ಬರೆಯುವ ಮಾಧ್ಯಮದ ಮಾಲೀಕರೇ?



ುಮುಕಬೇಕು



ಒರಿಸ್ಸಾ ಚಂಡಮಾರುತದ ಸಂತ್ರಸ್ತರಿಗೆ ಪರಿಹಾರ ಕಾರ್ಯದಲ್ಲಿ ತೊಡಗಿರುವ 'ಒರಿಸ್ಸಾ ಜನತಾ ಪರಿಹಾರ ಸಮಿತಿ' ಯ ಭಾಗವಾಗಿ ನೇರವಾಗಿ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಡಿ.ವೈ.ಎಫ್.ಐ. ನ ಒರಿಸ್ಸಾ ರಾಜ್ಯ ಸಮಿತಿಯ ಅಧ್ಯಕ್ಷರಾದ ಕಾಂ.ಶಿಶಿರ್ ಹುಯ್‌ರವರೊಂದಿಗೆ ನಡೆದ ಸಂದರ್ಶನ.

ವೈ.ಗುರುಶಾಂತ್ ರಾಜ್ಯ ಡಿವೈಎಫ್ಐ ನಾಯಕರು

ವಾಗಿರುವಾಗ ಮನಬಂದಂತೆ ಪ್ರಚಾರಿಸುವುದರಲ್ಲಿ ಸಂಘ ಪರಿವಾರ ತೊಡಗಿಕೊಂಡಿತ್ತು.

ಸೋನಿಯಾ ಸಹ ಭೇಟಿ ನೀಡಿದ್ದರಲ್ಲಾ....

ಹೌದು, ಎರಡು ಬಾರಿ ಸೋನಿಯಾಗಾಂಧಿ ನೇರವಾಗಿ ದುರಂತಕ್ಕೀಡಾದ ಪ್ರದೇಶಗಳಿಗೆ ಭೇಟಿ ನೀಡಿದರು. ಜನರೊಂದಿಗೆ ನಡೆದಾಡಿ ಮಾತನಾಡಿದರು. ನಂತರ ಕಾಂಗ್ರೆಸ್ ಆಡಳಿತ ನಡೆಸುತ್ತಿರುವ ರಾಜ್ಯಗಳ ಸರ್ಕಾರಗಳು, ಒಂದೊಂದೆ ಜಿಲ್ಲೆಯನ್ನು 'ದತ್ತು'ವಾಗಿ ಅಳವಡಿಸಿಕೊಳ್ಳಲು ನಿರ್ದೇಶಿಸಲಾಯಿತು. ಈಗಾಗಲೇ ಮಧ್ಯ ಪ್ರದೇಶ, ಮಹಾರಾಷ್ಟ್ರ ಸರ್ಕಾರಗಳು ಕೆಲಸ ಆರಂಭಿಸಿವೆ. ಜಾಜ್‌ಪುರ ಜಿಲ್ಲೆಯನ್ನು ಕರ್ನಾಟಕ ಸರ್ಕಾರ ಅಳವಡಿಸಿಕೊಂಡಿದೆ. ಅಲ್ಲಿ ಶಾಲೆಗಳನ್ನು ಕಟ್ಟಲು ನಿರ್ಧರಿಸಿದ್ದಾರೆ. ಇವುಗಳು ಪ್ರತಿ ಪಂಚಾಯತ್‌ಗಳಲ್ಲಿ ಚಂಡಮಾರುತದಿಂದ ರಕ್ಷಣೆ ಪಡೆಯುವ ತಾಣಗಳನ್ನಾಗಿಯೂ ಸಹ ನಿರ್ಮಿಸಲಾಗುವುದು. ಇಂತಹ ಕನಿಷ್ಟ 59 ಪಂಚಾಯತ್‌ಗಳನ್ನು ಒಂದೊಂದು ಜಿಲ್ಲೆ ಒಳಗೊಂಡಿದೆ. ಐಎಎಸ್ ಹಿರಿಯ ಅಧಿಕಾರ ಕುಂಟಿಯಾ ನೇತೃತ್ವದಲ್ಲಿ ತಂಡವೊಂದು ಬಂದಿದೆ.

ಸಂತ್ರಸ್ತ ಜನತೆಗೆ ಸಹಾಯ ನೀಡಲು ದೇಶ, ವಿದೇಶಗಳ ಜನರು ಮುಂದೆ ಬಂದಿದ್ದಾರೆ. ಅದು ಒರಿಸ್ಸಾ ತಲುಪಿದೆಯಾ? ರಾಜ್ಯ ತಲುಪಿದರೂ ಜನರನ್ನು ತಲುಪುತ್ತಿದೆಯಾ?

ನಮ್ಮ ದೇಶ ಹಾಗೂ ವಿದೇಶಗಳಿಂದ ಜನತೆ, ಸಂಘ ಸಂಸ್ಥೆಗಳು ನೆರವು ನೀಡುತಿದ್ದಾರೆ. ಸರ್ಕಾರೇತರ ಸಂಸ್ಥೆಗಳು ಸಕ್ರಿಯವಾಗಿವೆ. ಅಮೆರಿಕಾ, ಆಸ್ಟ್ರೇಲಿಯಾ, ಫ್ರಾನ್ಸ್, ಜಪಾನ್-ಯುರೋಪ್, ಯುನಿಸೆಫ್ ಹಾಗೂ ವಿದೇಶಿ ನೆರವಿನ ಸ್ವಯಂ ಸೇವಾ ಸಂಸ್ಥೆಗಳು, ಅನಿವಾಸಿ ಭಾರತೀಯರು.... ಹೀಗೆ ಸಹಾಯಹಸ್ತ ಚಾಚಿದ್ದಾರೆ, ಮಿಡಿದಿದ್ದಾರೆ, ಮಾನವೀಯತೆ ಮೆರೆದಿದ್ದಾರೆ. ದೇಶದ ಜನತೆಯೂ ಸಹ ಬಟ್ಟೆ, ಹಣ, ಔಷಧಿಗಳನ್ನು ಮಹಾಪೂರದಂತೆ ಕಳಿಸುತ್ತಿದ್ದಾರೆ. ಆದರೆ ಪ್ರಶ್ನೆಯೆಂದರೆ ಇವೆಲ್ಲಾ ಸಕಾಲಕ್ಕೆ ಮತ್ತು ತಲುಪಬೇಕಾದಲ್ಲಿಗೆ ತಲುಪುತ್ತಿಲ್ಲ. ಹಂಚಿಕೆ ಮಾಡುವಲ್ಲಿ ವಿಪರೀತ ಅಸ್ತವ್ಯಸ್ತವಾಗಿದೆ. ರೈಲು ನಿಲ್ದಾಣದಲ್ಲಿ ಬಂದಿಳಿದ ಬಹಳಷ್ಟು ಸಾಮಾನುಗಳು ಅಲ್ಲೇ ಅನಾಥವಾಗಿ ಬಿದ್ದುಕೊಂಡಿವೆ. ಅಧಿಕಾರಿಗಳು ಮುಖ್ಯವಾಗಿ ಐಎಎಸ್, ಅಧಿಕಾರಿಗಳು ಇವುಗಳನ್ನು ಪರಿಣಾಮಕಾರಿಯಾಗ ಬಳಸುತ್ತಿಲ್ಲ. 'ರಿಲೀಫ್ ಕಮಿಷನರ್' ಎಸ್.ಆರ್.ಪಾಟಿ ಎಂಬುವವರು ಪಾಲಿಥಿನ್ ಶೀಟ್‌ಗಳ ಖರೀದಿಯಲ್ಲಿ ಅವ್ಯವಹಾರ ನಡೆಸಿ, ಸಸ್ಪೆಂಡ್ ಆಗಿದ್ದಾರೆ. ಕೇಂದ್ರಪಾರ, ಜಗತ್‌ಸಿಂಗ್ ಪುರ, ಭದ್ರಕ್ ಜಿಲ್ಲೆಗಳಲ್ಲಿನ ಜಿಲ್ಲಾಧಿಕಾರಿಗಳು ಸರಿಯಾಗಿ ಕಾರ್ಯನಿರ್ವಹಿಸದೆ ಇರುವುದನ್ನು ವಿತರಿಸದೆ ಇದ್ದುದರಿಂದ ಅವರುಗಳನ್ನು ವರ್ಗಾವಣೆ ಮಾಡಲಾಗಿದೆ. ಪುರಿ, ಕಟಕ್ ಜಿಲ್ಲೆಗಳಲ್ಲಿ ಸಮರ್ಥವಾಗಿ ವ್ಯವಸ್ಥೆಯಾಗುತ್ತಿದೆ. ಇಲ್ಲಿನ ಅಧಿಕಾರಿಗಳು ಜನತೆಗೆ ನೆರವು ನೀಡಲು ಪ್ರಾಮಾಣಿಕವಾಗಿ ಶ್ರಮಿಸುತ್ತಿದ್ದಾರೆ. ಗಮನಿಸಬೇಕಾದ್ದೆಂದರೆ ಈ ಸರ್ಕಾರ ನಿಷ್ಪ್ರಯೋಜಕಕವೆಂದು ಬಿಂಬಿಸಲು ಬಿಜೆಪಿ-ಬಿಜೆಡಿ ಮತ್ತು ಕಾಂಗ್ರೆಸ್‌ನ ಒಂದು ಬಣ ಸತತವಾಗಿ ಪ್ರಯತ್ನಿಸುತ್ತಿವೆ. ಒಂದೇ ಕ್ಷೇತ್ರದ ಬಿಜೆಡಿ ಶಾಸಕ ಪ್ರಭಾತ್ ತ್ರಿಪಾಠಿ ಪರಿಹಾರಕ್ಕೆಂದು ಬಂದಿದ್ದ ಒಂದು ಲಾರಿ ಲೋಡ್ ಅಕ್ಕಿಯನ್ನು ಒಬ್ಬ ವ್ಯಾಪಾರಿಗೆ ಮಾರಿದ್ದ. ಮಾಲುಸಮೇತ ಸಿಕ್ಕಿರುವುದರಿಂದ ಅವರ ಮೇಲೆ ಮೊಕದ್ದಮೆ ಹೂಡಿ, ವಾರಂಟ್ ಹೊರಡಿಸಲಾಗಿದೆ. ಅಕ್ಟೋಬರ್ 30 ರಂದು ಬಿಜೆಪಿ, ಬಿಜೆಡಿ ಯವರು ಪರಿಹಾರವಾಗಿ ಬರುತ್ತಿದ್ದ ವಸ್ತುಗಳನ್ನು ದಾರಿಗಗಳಲ್ಲೇ ಲೂಟಿ ಮಾಡಲು ಆರಂಭಿಸಿದರು. ಇವರ ಲೂಟಿ ಎಲ್ಲಿಗೆ ಮುಟ್ಟಿತೆಂದರೆ ಆಂಧ್ರದಿಂದ ಬರುತ್ತಿದ್ದ ಲಾರಿಗಳಿಂದ ಲೂಟಿ ಮಾಡಿರುವುದರಲ್ಲಿ ಕೋಳಿಮರಿಗಳು, ಸೌಂದರ್ಯ ಸಾಧನಗಳು, ನಿಂಬೆಹಣ್ಣು, ನಿರೋದಗಳನ್ನೂ ಬಿಡಲಿಲ್ಲ. ಒಂದು ರೀತಿಯಲ್ಲಿ ಆತಂಕದ, ಆಸ್ಫೋಟಕಾರಿ ಸ್ಥಿತಿ ನಿರ್ಮಾಣ ಮಾಡುವುದು ಅವರ ಉದ್ದೇಶ. ಇದರಿಂದ ಪರಿಹಾರ ತಲುಪುವುದೂ ತಡವಾಯಿತು. ಬದುಕುಳಿದ ಜನತೆ ಕಂಗಾಲಾಗಿ ಜೀವ ಏದುಸಿರು ಬಿಡುತ್ತಿದ್ದಾರೆ. ಇವರ ದುಷ್ಟ ರಾಜಕೀಯದ ಲಾಭ ಹೊಡೆಯಲು ತೊಡಗಿದ್ದರು. ಮಿಲಿಟರಿ ರಸ್ತೆಯುದ್ದಕ್ಕೂ ಪೆಟ್ರೋಲಿಂಗ್ ಮಾಡಿದ ನಂತರವೇ ಒಂದು ಹಂತಕ್ಕೆ ಬಂತು. ರಾಂಚಿ ಮೂಲದ ಸ್ವಯಂಸೇವಾ ಸಂಸ್ಥೆಯೊಂದು ಈರುಳ್ಳಿ ಲಾರಿ ಕಳುಹಿಸಿತು. ಆದರೆ ಅಧಿಕಾರಿಯೊಬ್ಬ ಖಾಸಗಿಯವರಿಗೆ ಮಾರುತ್ತಿರುವಾಗಲೇ ಪೋಲೀಸರು ಹಿಡಿದರು. ಅಮೆರಿಕಾದ ಸಂಸ್ಥೆಯೊಂದು ಒಂದು ಲಾರಿ ಲೋಡ್ ಟೆಕ್ಸ್‌ಮತಿ ಅಕ್ಕಿಯನ್ನು ಕಳುಸಿತು. ಪುರಿಯ ಅಧಿಕಾರಿಯೊಬ್ಬ ಅಕ್ಕಿಯನ್ನು ಇಳಿಸಿಕೊಂಡು, ಅತ್ಯಂತ ಕಳಪೆಯಾದ (ಕ್ವಿಂಟಾಲ್‌ಗೆ ರೂ 250 ಇರಬಹುದು) ಅಕ್ಕಿ ತುಂಬಿಸಿದ. ಆಸ್ಟ್ರೇಲಿಯಾದವರು ಕಳಿಸಿದ ಕನಿಷ್ಟ ಒಂದು ಸಾವಿರ ರೂಪಾಯಿಗಳ ಬೆಲೆಯ ಕಂಬಳಿಗಳನ್ನು ಅಧಿಕಾರಿಗಳೇ ಹಂಚಿಕೊಂಡರು. ಇಂತಹ ಅನೇಕ ಪ್ರಕರಣಗಳೇ ಇವೆ...

ಇಷ್ಟಾಗುವಾಗ ಆಡಳಿತಾರೂಢ ಕಾಂಗ್ರೆಸ್ ಏನು ಮಾಡಲಿಲ್ಲವೇ?

ಏನೂ ಮಾಡಲಿಲ್ಲವೆಂದೇನಲ್ಲ. ಆದರೆ ಮಾಡಬೇಕಾದ್ದನ್ನು ಮಾಡಲಿಲ್ಲ ಅಷ್ಟೆ. ಪರಿಸ್ಥಿತಿ ಹೀಗಿರುವಾಗ ಗೋಮಾಂಗೋ ವಿರುದ್ಧ ಮಾಜಿ ಮುಖ್ಯಮಂತ್ರಿ ಜೆ.ಬಿ.ಪಟ್ನಾಯಕ್ ಹಾಗೂ ಉಪಮುಖ್ಯಮಂತ್ರಿ ಬಸಂತ್ ಬಿಸ್ವಾಲ್ ರವರ ಬಣ ಹಲವು ಸಮಸ್ಯೆಗಳನ್ನು ಸೃಷ್ಟಿಸಿದರು. ಅಧಿಕಾರಿಗಳು ಮುಖ್ಯಮಂತ್ರಿಗಳ ಆಜ್ಞೆ ಜಾರಿಗೊಳಿಸದಂತೆ ನೋಡಿಕೊಂಡರು. ಈ ಎರಡೂ ಗುಂಪುಗಳ ನಡುವೆ ಬಾರಿ ಹೊಡೆದಾಟವೇ ನಡೆಯಿತು. ಈ ಸನ್ನಿವೇಶದಲ್ಲಿ ಬಿಜೆಡಿ ಅಸೆಂಬ್ಲಿ ನಾಯಕ ಬಿಜಯನ್ ಮಹೋಪಾತ್ರ, ಈ ನವೆಂಬರ್ 17 ರಂದು ವಸ್ತುಗಳನ್ನು ಲೂಟಿ ಮಾಡಲು ಜನರಿಗೆ ಕರೆ ನೀಡಿದ್ದಾರೆ. ಅವರಿಗೆ ಮಾರ್ಚ್‌ನಲ್ಲಿ ನಡೆಯುವ



ಒರಿಸ್ಸಾದ ಕಡಲ ತೀರದುದ್ದಕ್ಕೂ ಚಂಡ ಮಾರುತದ ಮಹಾ ದುರಂತ ಘಟಿಸಿ ಒಂದೂವರೆ ತಿಂಗಳಾಗುತ್ತಿದೆ. ಆದರೆ ಅಲ್ಲಿನ ಜನತೆ ಇನ್ನೂ ಸಂಕಷ್ಟಗಳಿಂದ ಪಾರಾಗಿಲ್ಲ. ಈಗಲೂ ಅಪಾರ ಸಾವು-ನೋವುಗಳ ವರದಿಗಳು ಬರುತ್ತಲೇ ಇವೆ. ಈಗಲೂ ಈ ಹೃದಯ ವಿದ್ರಾವಕ ಸ್ಥಿತಿ ಘಟಿಸುತ್ತಿರುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ತೀರಾ ನಿರ್ಲಕ್ಷ್ಯತನದ, ಸ್ವಾರ್ಥ, ಹಾಗೂ ಕೀಳು ರಾಜಕೀಯದ ಆಟದಿಂದ.

ಈ ಚಂಡಮಾರುತ ಪೀಡಿತ 11 ಜಿಲ್ಲೆಗಳಲ್ಲಿ ಜಗತ್ ಸಿಂಗ್ ಪುರ, ಕೇಂದ್ರ ಪಾದೆ ಮತ್ತು ಪುರಿ ಜಿಲ್ಲೆಗಳು ಅತೀ ಹೆಚ್ಚು ಹಾನಿಗೊಳಗಾಗಿವೆ. ಅದರಲ್ಲೂ ವಿಶೇಷವಾಗಿ 'ಮಧ್ಯಮ' ಬ್ಲಾಕ್ ಪೂರ್ಣವಾಗಿ ನಾಶವಾಗಿದೆ. ಇತ್ತೀಚೆಗೆ ಪೀಪಲ್ಸ್ ರಿಲೀಫ್ ಕಮಿಟಿಯ ಸದಸ್ಯರು ಈ ಬ್ಲಾಕ್‌ನ ದಹಿಬಾರ್ ಎಂಬ ಹಳ್ಳಿಯಲ್ಲಿ ಸುಭಾಶ್ ಪಾಲ್(28), ಮತ್ಯ ಪೂರ್ಣ ಪಾಲ್(15) ಎಂಬುವವರನ್ನು ರಕ್ಷಿಸಿದರು. ಇವರು 11 ಜನರ ಕುಟುಂಬವನ್ನು ಕಳೆದುಕೊಂಡಿರುವ ಹತ ಭಾಗ್ಯರು. ಹಾಗೇ 15 ರ ಬಾಲಕಿ ರೀತಾ ಭಯಾನ್ ಮತ್ತು 7 ವರ್ಷದ ಸಂಜಯ್ ಮತ್ತವರ ತಾಯಿಯನ್ನು ಬದುಕಿಸಿದರು. ಅವರ ಇತರೆ ಕುಟುಂಬ ಸಾವನ್ನಪ್ಪಿದೆ. ಒದಾದುಂಡಾರು ಹಳ್ಳಿಯ ಸಿಪಿಐ(ಎಂ) ಕಾರ್ಯಕರ್ತ, ಶಿಕ್ಷಕ ಚಂದನ್ ಮನ್ನಾ, ಇನ್ನೊಬ್ಬ ನಾಯಕ ಮಯಮೈತಿ ನಲಭೇದಿ ಹಳ್ಳಿಯಲ್ಲಿ ಬಲಿಯಾಗಿರುವುದು ಇತ್ತೀಚೆಗೆ ತಿಳಿಯಿತು.


ಈ ಶತಮಾನದ ಮಹಾದುರಂತವಾದ ಈ ಚಂಡಮಾರುತದಲ್ಲಿ ಸುಮಾರ 1.5 ಕೋಟಿ ಜನ ಬಾಧಿತರಾಗಿದ್ದಾರೆ. ಸುಮಾರು 12.7 ಲಕ್ಷ ಮನೆಗಳು ನೆಲಸಮವಾಗಿವೆ. 37.75 ಲಕ್ಷ ಎಕರೆ ಭತ್ತದ ಬೆಳೆ, 80,000 ಎಕರೆ ಇತರ ಬೆಳೆಗಳು ಹಾಳಾಗಿವೆ. ಬಹುತೇಕ ಈ ಭೂಮಿ ಕೃಷಿಗೆ ಅಯೋಗ್ಯವಾಗಿದೆ. ಎಲ್ಲೆಲ್ಲೂ ಸಮುದ್ರದ ಉಪ್ಪು ತುಂಬಿದೇ ಅಥವಾ ಎಲ್ಲವೂ ಬಳಿದು ಹೋಗಿ ಬರಡಾಗೇ ಇದೆ. ಪಾರದೀಪದ ಕೈಗಾರಿಕಾ ವಸಾಹತು ಒಳಗೊಂಡು ಬಹಳಷ್ಟು ಬೃಹತ್ ಹಾಗೂ 80 ಸಾವಿರ ಉದ್ಯೋಗ ನೀಡುತ್ತಿದ್ದ 700 ಸಣ್ಣ ಕೈಗಾರಿಕೆಗಳು ಧ್ವಂಸಗೊಂಡಿವೆ. ಇನ್ನು ಬಹುತೇಕ ಹೈನೋದ್ದಿಮೆ, ವಿದ್ಯುತ್ ಜನಕಗಳು-ವಿತರಣಾ ಕೇಂದ್ರಗಳು-ಒಟ್ಟು ಅದರ ಜಾಲ ಹೇಳಹೆಸರಿಲ್ಲದಂತಾಗಿವೆ. ಹೇಗೋ ಉಳಿದುಕೊಂಡಿದ್ದ ಸುಮಾರು 400 ಸಣ್ಣ ಹಾಗೂ 24 ಮಧ್ಯಮ ಗಾತ್ರದ ಕೈಗಾರಿಕಾ ಘಟಕಗಳನ್ನು ಸಮಾಜ ವಿರೋಧಿ ಶಕ್ತಿಗಳು ಲೂಟಿ ಹೊಡೆದಿದ್ದಾರೆಂದು ವರದಿ ಪ್ರಕಟವಾಗಿದೆ.

ಇಂತಹ ಘನ ಘೋರ ಸ್ಥಿತಿಯಲ್ಲಿ ಕೇಂದ್ರ-ರಾಜ್ಯ ಸರಕಾರಗಳು ನೆರವಿಗಾಗಿ ದುಮುಕಬೇಕಿತ್ತು. ಇತರ ಜನತೆಯನ್ನು ತೊಡಗಿಸಬೇಕಿತ್ತು. ಹರಿದುಬಂದ ನೆರವನ್ನು ವ್ಯವಸ್ಥಿತವಾಗಿ ಬಳಸಿ, ಜನರನ್ನು-ಜಾನುವಾರಗಳನ್ನು ಉಳಿಸಬೇಕಿತ್ತು. ಆದರೆ ಇವುಗಳ ಬಗ್ಗೆ ಗಮನ ನೀಡದ ವಾಜಪೇಯಿಯ ಎನ್.ಡಿ.ಎ. ಸರ್ಕಾರ ಗೋಮಾಂಗೋನ ಕಾಂಗ್ರೆಸ್ ಪಕ್ಷದ ರಾಜ್ಯ ಸರ್ಕಾರಗಳು ಅತ್ಯಂತ ನೀಚ, ಅಮಾನವೀಯ ಆಟಗಳನ್ನು ಆಡಿದ್ದಾರೆ. ಜನತೆ ತಂದೆ, ತಾಯಿ ಮಕ್ಕಳು, ಆಸ್ತಿ ಕಳೆದುಕೊಂಡು ಬದುಕಿದೆವೋ, ಸತ್ತೇವೋ ಎಂದು ಎದೆಬಡಿದುಕೊಂಡು ಆಕ್ರಂದನ ಮಾಡುತ್ತಿರುವಾಗ ಗದ್ದುಗೆ ಏರುವ, ಕಾಲು ಹಿಡಿದೆಳೆಯುವ ಬೆಂದ ಮನೆಯಿಂದ ಗಳ ಹಿರಿಯುವ ಕೆಲಸದಲ್ಲಿ ತೊಡಗಿದ ಇವರ ನೀಚ ರಾಜಕಾರಣ ದೇಶದ್ರೋಹವಲ್ಲದೆ ಮತ್ತೇನು? ಈ ರಣಹದ್ದುಗಳನ್ನು ಕ್ಷಮಿಸಲಾದೀತೆ? ಈಗಲೂ ಹಸಿವು ಮತ್ತು ಔಷಧಿಗಳು ಸಕಾಲಕ್ಕೆ ಸಿಗದೇ ಸಾಯುತ್ತಿರುವುದು ಮುಂದುವರಿದೇ ಇದೆ. ಬಿಜೆಪಿಗೆ ಪರ್ಯಾಯವೆಂದು ಸಾರಿಕೊಳ್ಳುವ ಕಾಂಗ್ರೆಸ್‌ನದ್ದು ಎಂತಹ ಪರ್ಯಾಯ? ಗೋಮಾಂಗೋನ್ನು ಕೆಳಗಿಳಿಸಿ, ಬಿಸ್ವಾಲ್ ಮೇಲಿಂದ ಕೂಡಿಸಿದ ಕಾಂಗ್ರೆಸ್ ಬದಲಾದೀತೆ? ಮುತ್ಸದ್ದಿತನ, ಮಾನವೀಯತೆಗಳ ಮುಖವಾಡದಲ್ಲೇ ಬದುಕ ಬಯಸುವ ವಾಜಪೇಯಿಯವರ ಕ್ರೌರ್ಯ ಮುಖದ ದರ್ಶನಕ್ಕೆ ಇದೋ ಇನ್ನೊಂದು ಉದಾಹರಣೆ.

ಇದೇ ಸಂದರ್ಭದಲ್ಲಿ ಇನ್ನೊಂದು ಸಂಗತಿಯನ್ನು ಗಮನಿಸಬೇಕಿದೆ. ಚಂಡಮಾರುತದಲ್ಲಿ ಹಾನಿಗೀಡಾದ ಬಹುರಾಷ್ಟ್ರೀಯ ಕಂಪನಿಯಾದ AES ಕಾರ್ಪೊರೇಷನ್ ಎಂಬ ವಿದ್ಯುತ್ ವರ್ಗಾವಣೆ ಮತ್ತು ಪೂರೈಕೆಯ ಒಂದು ಸಂಸ್ಥೆಯು ತನ್ನ ಹಾನಿಯನ್ನು ತುಂಬಿಕೊಳ್ಳಲು ವಿದ್ಯುತ್ ದರಗಳನ್ನು ಕನಿಷ್ಟ ಮೂರು ಪಟ್ಟು ಹೆಚ್ಚಿಸಬೇಕಾಗುತ್ತದೆಯೆಂದು ಪ್ರಕಟಿಸಿದೆ. ಸತ್ತಿರುವ ಹೆಣಗಳು ತೇಲುತ್ತಿರುವಾಗ, ಚೀತ್ಕಾರವೇ ಕೇಳಿಬರುತ್ತಿರುವಾಗ, ಈ ಬಹುರಾಷ್ಟ್ರೀಯ ಕಂಪನಿಯ ಕಾಳಜಿ ಮೆಚ್ಚತಕ್ಕಂಥದ್ದೇ? ಅವರಿಗೆ ಲಾಭದ್ದೇ ಚಿಂತೆ. ಲೂಟಿ ಹೊಡೆಯಲೆಂದೇ ಬಂದವರಲ್ಲವೇ? ಇವರಿಗ್ಯಾಕೆ ಸಾಮಾಜಿಕ ಕಳಕಳಿ, ಜವಾಬ್ದಾರಿ? ನಮ್ಮ ಬಹಳಷ್ಟು ಸಾರ್ವಜನಿಕ ಕೈಗಾರಿಕೆಗಳು, ದೇಶೀಯ ಕಂಪನಿಗಳು ಬಹಳ ಮುಖ್ಯವಾಗಿ ಕಾರ್ಮಿಕರು ತಮ್ಮ ಪಾಲಿನ ಕೊಡುಗೆಯೆಂದು ಕಾಣಿಕೆ ನೀಡಿ ಒರಿಸ್ಸಾದ ಸಂಕಷ್ಟದಲ್ಲಿರುವ ಬಂಧುಗಳಿಗೆ ಮಿಡಿದಿರುವುದು ಅಭಿನಂದನಾರ್ಹ ಕೆಲಸ.

ಒರಿಸ್ಸಾದ ಜನರಿಗೆ ನೆರವು ನೀಡಿದವರು, ಅಲ್ಲಿಗೆ ಬಂದು ಶ್ರಮಿಸಿದವರು ಅನೇಕರು, ಹಲವಾರು ಸಂಸ್ಥೆಗಳು, ನಮ್ಮ ಸೈನಿಕರು, ಜನ ಕೇವಲ ಕಾರ್ಗಿಲ್ ಯುದ್ಧದಲ್ಲಿ ಮಾತ್ರ ನೀಡಿದ್ದಲ್ಲ. ಒರಿಸ್ಸಾ ಸಂತ್ರಸ್ತರಿಗೂ ದುಃಖಿಸಿ ಕೊಡುಗೆ ಕೊಟ್ಟಿದ್ದಾರೆ. ಸಿಪಿಐ(ಎಂ) ಪಕ್ಷ ಮತ್ತು ವಿವಿಧ ಸಾಮೂಹಿಕ ಸಂಘಟನೆಗಳು, 'ಒರಿಸ್ಸಾ ಪೀಪಲ್ಸ್ ರಿಲೀಫ್ ಕಮಿಟಿ' ರಚಿಸಿ ನಡೆಸಿರುವ ಕೆಲಸ ಗಮನಾರ್ಹ. ಇನ್ನೂ ಹೆಚ್ಚು ಪ್ರಚಾರಕ್ಕೆ ಬಾರದ ಸಂಗತಿಗಳು.

ಒರಿಸ್ಸಾದ ದುರಂತವನ್ನು ರಾಷ್ಟ್ರೀಯದುರಂತವೆಂದು ಘೋಷಿಸಲು ನಿರಾಕರಿಸುವ ಮೂಲಕ ಜನದ್ರೋಹವನ್ನು ಎಸಗಿದ್ದರೂ ಇದನ್ನು ಭಾರತದ ಜನತೆ 'ರಾಷ್ಟ್ರೀಯ ದುರಂತ'ವೆದಯ ಗಣಿಸಿದೆ. ದೇಶಾದ್ಯಂತ ದುಡಿಯುವ ಜನತೆ ಸಹಾಯ ನೀಡಲು ಮುಂದಾಗಿದ್ದಾರೆ.



ಚುನಾವಣೆಯದ್ದೇ ಚಿಂತೆ...

ಆಂಧ್ರದ ಚಂದ್ರಬಾಬು ನಾಯ್ಡು ಸರ್ಕಾರ ತುಂಬಾ ನೆರವು ನೀಡಿದೆಯೆಂದಿದೆಯಲ್ಲಾ. ಆ ಬಗ್ಗೆ.....

ಆಂಧ್ರ ಸರ್ಕಾರಕ್ಕೆ ಚಂಡಮಾರುತದ ಸ್ಥಿತಿಯಲ್ಲಿ ಕೆಲಸ ನಿರ್ವಹಿಸುವ ಕನಿಷ್ಟ ಸಿದ್ಧತೆ ಮತ್ತು ಅನುಭವ ಇದೆಯೆಂಬುದು ನಿಜ. ಚಂಡಮಾರುತದಲ್ಲಿ ನೆರವಾಗಲು ಅಲ್ಲಿಯ ಸರ್ಕಾರ ವಸ್ತು ಮತ್ತು ಜನರನ್ನು ಕಳಿಸಿತು. ಆದರೆ ಉದಾರ ನೆರವಾಗಿ ಅಲ್ಲ. ಅದು ಹಣಕಾಸಿನ ವ್ಯಾಪಾರಕ್ಕೆ. ಪ.ಬಂಗಾಳದ ಹಾಗಲ್ಲ.

ಪ.ಬಂಗಾಳದ ಜ್ಯೋತಿಬಸು ನೇತೃತ್ವದ ಎಡರಂಗ ಸರ್ಕಾರದ ನೆರವು...

ನಿಜಕ್ಕೂ ನಮ್ಮ ನೆರೆಯ ಪ.ಬಂಗಾಳದ ಜನತೆ ಹಾಗೂ ಸರ್ಕಾರ, ಸಿಪಿಐ(ಎಂ) ಮತ್ತು ವಿವಿಧ ಸಾಮೂಹಿಕ ಸಂಘಟನೆಗಳ ಕೊಡುಗೆ ಅಪಾರವಾದುದು. ಈ ಗಂಭೀರ ಸ್ಥಿತಿ ಉದ್ಭವಿಸುತ್ತಿದ್ದಂತೆಯೇ ಕೋಟ್ಯಾಂತರ ರೂಪಾಯಿಯ ಒಂದು ನೂರು ಲಾರಿಯಷ್ಟು ಸಾಮಾನುಗಳು, ಔಷಧಿಗಳು, ಮಕ್ಕಳ ಹಾಗೂ ಜನರ ಆಹಾರ ವಸ್ತುಗಳು, ಬಟ್ಟೆಗಳನ್ನು ಕಳಿಸಿದರು. ದೆಹಲಿಯಿಂದ ಸಿಪಿಐ(ಎಂ) ಕೇದ್ರ ಸಮಿತಿಯ ಮುತುವರ್ಜಿಯಿಂದ ಮೊದಲಹಂತದಲ್ಲೇ 50000 ಕಂಬಳಿಗಳು, 3000 ಟಾರ್ಪಲಿನ್‌ಗಳು, 2 ಟನ್ ಮಕ್ಕಳ

ಪುಟ 10ಕ್ಕೆ

ಉದ್ಯೋಗವನ್ನು ಕಸಿಯುವ ಹೊಸ ಆರ್ಥಿಕ ನೀತಿ ವಿರುದ್ಧ ಹೋರಾಡದೆ ಮೀಸಲಾತಿ ದಕ್ಕುವುದಿಲ್ಲ

ಜಿ.ಎನ್.ನಾಗರಾಜ್ ಕರೆ

ಜಾತ್ಯಾತೀತತೆ ಹಾಗೂ ಧರ್ಮ ನಿರಪೇಕ್ಷತೆಯ ಸಂವಿಧಾನದ ಮೂಲಆಶಯಗಳನ್ನು ಬುಡಮೇಲು ಮಾಡುತ್ತಾ ಸಾವಿರಾರು ಹಿಂದೂ-ಮುಸ್ಲಿಂ ಜನರ ಗೋರಿಯನ್ನೇ ಮೆಟ್ಟಿಲು ಮಾಡಿಕೊಂಡು ಕೇಂದ್ರದಲ್ಲಿ ಅಧಿಕಾರ ಗಳಿಸಿರುವ ಕೋಮುವಾದಿ ಬಿಜೆಪಿ ಪಕ್ಷದ ಜನವಿರೋಧಿ ಧೋರಣೆಗಳನ್ನು ಶೋಷಿತ ಜನತೆ ನಿರಂತರ ಹೋರಾಟಗಳ ಮೂಲಕ ಹಿಮ್ಮೆಟ್ಟಿಸಬೇಕಾದ ಅಗತ್ಯವಿದೆ ಎಂದು ಕರ್ನಾಟಕ ಪ್ರಾಂತ ಕೃಷಿ ಕಾರ್ಮಿಕ ಸಂಘದ ಕಾರ್ಯಾಧ್ಯಕ್ಷರಾದ ಜಿ.ಎನ್.ನಾಗರಾಜ್ ಅಭಿಪ್ರಾಯಪಟ್ಟರು.

ಮಹಾಚೇತನ ಡಾ. ಬಿ.ಆರ್.ಅಂಬೇಡ್ಕರ್‌ರವರ ಪುಣ್ಯತಿಥಿಯ ಅಂಗವಾಗಿ ಶ್ರೀರಾಮಪುರ ಅಂಬೇಡ್ಕರ್ ಪ್ರತಿಮೆಯ ಬಳಿ 'ನಿರಂತರ' ಸಂಘಟನೆಯು ಏರ್ಪಡಿಸಿದ್ದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು 'ಬಾಬಾಸಾಹೇಬ್ ಅಂಬೇಡ್ಕರ್‌ರವರ ಚಿಂತನೆಗಳು ಮತ್ತು ಆಶಯಗಳು ಸಮಾಜದ ಎಲ್ಲಾ ಜನರ ಒಳಿತಿಗೆ ಕಾರಣವಾಗಬೇಕು, ಏಪ್ರಿಲ್ 14 ಮತ್ತು ಡಿಸೆಂಬರ್ 6 ರಂದು ಅಂಬೇಡ್ಕರ್‌ರವರ ವಿಚಾರಧಾರೆಗಳು ಹಳ್ಳಿ-ಹಳ್ಳಿಗಳಲ್ಲಿ ವ್ಯಾಪಕವಾಗಿ ತಲುಪಬೇಕು ಆಗ ಮಾತ್ರವೇ ಇಂತಹ ಕಾರ್ಯಕ್ರಮಗಳು ಸಾರ್ಥಕವಾಗುತ್ತದೆ" ಎಂದರು.

ಕೋಮುವಾದಿ ಬಿಜೆಪಿ ಹಾಗೂ ಮಿತ್ರ ಸಂಘಟನೆಗಳ ಕಾರ್ಯಾಚರಣೆಗಳನ್ನು ತರಾಟೆಗೆ ತೆಗೆದುಕೊಂಡ ಜಿ.ಎನ್. ದಲಿತ ಹಿಂದುಳಿದ ವರ್ಗಗಳಿಗೆ ಶಿಕ್ಷಣಕೊಡಲು, ಉದ್ಯೋಗ ಕೊಡಲು ಅವಕಾಶ ನೀಡುವ ಮೀಸಲಾತಿ ಸವಲತ್ತನ್ನು ನಿರಾಕರಿಸುವ ಸಲುವಾಗಿಯೇ ಇಂದು ಖಾಸಗೀಕರಣಕ್ಕೆ ಹೆಚ್ಚು ಒತ್ತು ಕೊಡಲಾಗುತ್ತಿದೆ. ಅಲ್ಲದೆ ದಲಿತ ವರ್ಗಕ್ಕೆ ಸರ್ಕಾರಿ ಉದ್ಯೋಗವಕಾಶಗಳು ಲಭ್ಯವಾಗಬಾರದೆನ್ನುವ ವ್ಯವಸ್ಥಿತ ಪಿತೂರಿಯ ಮೂಲಕ ನೇಮಕಾತಿ ಪ್ರಕ್ರಿಯೆಯನ್ನು ನಿಲ್ಲಿಸಿದ್ದಾರೆ. ಆದ್ದರಿಂದ ಉದ್ಯೋಗವನ್ನು ಕಸಿಯುವ ಹೊಸ ಆರ್ಥಿಕ ನೀತಿಯ ವಿರುದ್ದವೂ ನಿರಂತರ ಹೋರಾಟ ನಡೆಸಬೇಕು. ಎಲ್ಲ ಜನರೂ ಈ ದಿಶೆಯಲ್ಲಿ ಮಾಡುತ್ತಿರುವ ಹೋರಾಟದಲ್ಲಿ ದಲಿತ ಜನತೆ ಸೇರಿಕೊಳ್ಳಬೇಕು. ಅಲ್ಲದೇ ಶೋಷಿತ ವರ್ಗದ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗೆ ಅವಕಾಶ ಮಾಡಿಕೊಟ್ಟಿರುವ ಸಂವಿಧಾನವನ್ನೇ ಪುನರ್‌ವಿಮರ್ಶಿಸುವ ಮೂಲಕ ಮೇಲ್ಜಾತಿಯ ಹಿತ ಕಾಯಲು ಹೊರಟಿರುವ ಬಿಜೆಪಿ ಮತ್ತು ಅದರ ಅಂಗಸಂಸ್ಥೆಗಳು ಡಿಸೆಂಬರ್ 6, 1992 ರಂದು ಬಾಬ್ರಿಮಸೀದಿಯನ್ನು ಉರುಳಿಸುವ ಮೂಲಕ ಕೋಮು ಸೌಹಾರ್ದತೆಗೆ ಧಕ್ಕೆಯುಂಟು ಮಾಡಿದವು ಎಂದು ಟೀಕಿಸಿ, ನಿರುದ್ಯೋಗ-ಬಡತನ-ಅನಕ್ಷರತೆಯಿಂದ ಕಂಗಾಲಾಗಿರುವ ಬಡ ಜನತೆಗೆ ನಿರಂತರ ಹೋರಾಟವೇ ದಾರಿ ಎಂದು ಕರೆ ನೀಡಿದರು.

ಸಭೆಯನ್ನುದ್ದೇಶಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕರಾದ ಶ್ರೀ ಮಾವಳ್ಳಿ ಶಂಕರ್‌ರವರು ಮಾತನಾಡುತ್ತಾ, 'ಸ್ವಾಭಿಮಾನದ ಬದುಕಿಗೆ ಹೆಸರಾದ ಗ್ರಾಮೀಣ ಪ್ರದೇಶದ ಶ್ರಮಜೀವಿ ದಲಿತರಿಗೆ ಜಾತಿಯ ಕಾರಣದಿಂದ ಮಲ ತಿನ್ನಿಸುವ ಹೇಯ ಕೃತ್ಯ ನಡೆಸಿದ ಈ ರಾಷ್ಟ್ರದಲ್ಲಿ ಪುರೋಹಿತಶಾಹಿಗಳು, ನೂರಾರು ಮಠಾಧಿಪತಿಗಳು, ದೇವಾನುದೇವತೆಗಳು ಅಸ್ತಿತ್ವದಲ್ಲಿರುವುದು ನಾಚಿಕೆಗೇಡಿನ ಸಂಗತಿ" ಎಂದರು.

ಅಂಬೇಡ್ಕರ್‌ರವರ ವಿಚಾರಧಾರೆಗಳನ್ನು ನಮ್ಮ ನಡೆ-ನುಡಿಗಳಲ್ಲಿ ಅಳವಡಿಸಿಕೊಳ್ಳದೇ ಕೇವಲ ಆರಾಧನೆ ಪ್ರವೃತ್ತಿಯಿಂದಾಗಲೀ, ಇಲ್ಲವೇ ದೇವರ ಮಟ್ಟಕ್ಕೆ ಏರಿಸುವುದರಿಂದಾಗಿ ದಲಿತರ ವಿಮೋಚನೆ ಸಾಧ್ಯವಿಲ್ಲ ಎಂದು ಅಭಿಪ್ರಾಯ ಪಟ್ಟ ಅವರು, ಯಜ್ಞ-ಕುಂಡಗಳು ಇಂದು ಈ ರಾಷ್ಟ್ರವನ್ನಾಳುತ್ತಿವೆ ಆದ್ದರಿಂದ ಬಹುಸಂಖ್ಯಾತರ ದಲಿತ, ಹಿಂದುಳಿದ ವರ್ಗಕ್ಕೆ ಸಮಪಾಲು-ಸಮಬಾಳಿಗೆ ನಾವೆಲ್ಲಾ ಹೋರಾಟ ಮಾಡಬೇಕಾದ ಅಗತ್ಯವಿದೆ ಎಂದರು.

ಸಭೆಯನ್ನುದ್ದೇಶಿಸಿ ಮಾಜಿ ನಗರಸಭಾ ಸದಸ್ಯರಾದ ಡಾ. ಸಿ.ಬಾಲಸುಂದರಂ, ಡಾ.ಅಂಬೇಡ್ಕರ್ ಪ್ರತಿಮೆ ಸಮಿತಿಯ ಅಧ್ಯಕ್ಷರಾದ ಎ.ಎಸ್.ಮೂರ್ತಿ ಮಾತನಾಡಿದರು.

ಜಾತಿ ವಿನಾಶ ಹಾಗೂ ಕೋಮುಸಾಮರಸ್ಯದ ಸಂದೇಶಗಳನ್ನು ಸಾರುತ್ತಾ ಜನತೆಯಲ್ಲಿ ಅರಿವನ್ನುಂಟುಮಾಡಿ ಜನಪರ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಪ್ರಗತಿಪರ ಹೋರಾಟಗಳನ್ನು ಮುನ್ನಡೆಸುವ ಹಂಬಲದಿಂದ ಸಮಾನ ಮನಸ್ಕ ಯುವಜನರು ಒಗ್ಗೂಡಿ ನಿರಂತರ - ಎಂಬ ಸಂಘಟನೆಯನ್ನು ರೂಪಿಸಿದ್ದು ಇದರ ಮೂಲಕ ಹೊಸ ಹೊಸ ಚಿಂತನೆಗಳನ್ನು ಕಾರ್ಯರೂಪಕ್ಕಿಳಿಸಲು ತೊಡಗಿಸಿಕೊಂಡಿದ್ದೇವೆಂದು ನಿರಂತರ ಸಂಘಟನೆಯ ಸಂಚಾಲಕರಲ್ಲೊಬ್ಬರಾದ ಶ್ರೀ ಗೋಪಾಲಕೃಷ್ಣ ಪ್ರಾಸ್ತವಿಕವಾಗಿ ಮಾತನಾಡಿದರು.

ವೇದಿಕೆಯ ಮತ್ತೊಬ್ಬ ಸಂಚಾಲಕರಾದ ಶ್ರೀ ಚಂದ್ರಶೇಖರ ಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ದಲಿತಕಲಾ ಮಂಡಲಿಯ ವಿರೇಶ್ ಬಳ್ಳಾರಿ ಹಾಗೂ ಭಗತ್ ಸಿಂಗ್ ಸಾಂಸ್ಕೃತಿಕ ತಂಡದ ಶ್ರೀ ವಿಜಯ್‌ಕುಮಾರ್ ಮತ್ತು ತಂಡದವರಿಂದ ಕ್ರಾಂತಿಗೀತೆ ಹಾಗೂ ಸಾಮರಸ್ಯ ಗೀತೆಗಳ ಕಾರ್ಯಕ್ರಮ ನಡೆಯಿತು.

ಕೈಗಾದಲ್ಲಿ ಪುನರ್ವಸತಿಗಾಗಿ ರೈತರ ಹೋರಾಟ

ಪುಟ 12 ರಿಂದ


ವರೆಗೆ ಈ ಭಾಗದ ರೈತರು ಧರಣಿ ಕುಳಿತಾದ ಶಾಸಕ ಅಸ್ನೋಟಿಕರ್ ಈ ಸಮಸ್ಯೆ ಬಗೆಹರಿಯದಿದ್ದರೆ ನಾನು ನಿಮ್ಮೊಂದಿಗೆ ಕುಳಿತುಕೊಳ್ಳುತ್ತೇನೆ ಎಂದು ಆಶ್ವಾಸನೆ ಕೊಟ್ಟಿರುವುದರಿಂದ ಇವರು ಧರಣಿ ಹಿಂತೆಗೆದುಕೊಂಡಿದ್ದರು. ಮತ್ತು 8-10 ದಿನಗಳಲ್ಲಿ ನ್ಯಾಯ ಒದಗಿಸಿ ಕೊಡುತ್ತೇನೆ ಎಂದು ಆಗಿನ ಡಿ.ಸಿ. ಧರಣಿ ನಿರತರಿಗೆ ಆಶ್ವಾಸನೆ ಕೊಟ್ಟಿದ್ದರು. ಆದರೆ ಅಸ್ನೋಟಿಕರ್ ಇನ್ನೊಮ್ಮೆ ಅವರಿಂದ ಮತ ಪಡೆದು ಆಯ್ಕೆಯಾದರೂ ಧರಣಿ ಕೂಡುವ ಬಗ್ಗೆ ಯೋಚಿಸುವುದಿರಲಿ ಅದೊಂದು ಗಂಭೀರ ಸಮಸ್ಯೆ ಎನ್ನುವುದನ್ನೇ ಮರೆತಂತಿದೆ.

ದಿನಕ್ಕೊಂದು ಹೇಳಿಕೆ ಕೊಡುವ ಎನ್.ಪಿ.ಸಿ.

ಕೈಗಾ ಸ್ಥಾವರದ ಸುತ್ತಲಿನ 5 ಕಿ.ಮಿ ವ್ಯಾಪ್ತಿಯ ಭೂಮಿ ತಮಗೆ ಅವಶ್ಯಕತೆ ಇಲ್ಲವೆಂದೂ, ಇದು ಅಪಾಯದ ಸ್ಥಳವಲ್ಲದ್ದರಿಂದ ತಮಗೆ ಅದು ಬೇಕಾಗಿಲ್ಲ ಎಂದು ಇಂದು ಹೇಳಿಕೆ ಕೊಡುತ್ತಿದ್ದಾರೆ. ಆದರೆ 28.4.94 ರಂದು ಆಗಿನ ನಿರ್ದೇಶಕರಾಗಿದ್ದ ಪರಮಹಂಸ ತಿವಾರಿ 'ಅಣು ಸ್ಥಾವರದ ಸುತ್ತಲಿನ 1.6 ಕಿ.ಮಿ ವ್ಯಾಪ್ತಿಯ ಪ್ರದೇಶವನ್ನು ಪ್ರತ್ಯೇಕತಮಯ ಎಂದು ಘೋಷಿಸಲಾಗಿದೆ. ಈ ಸ್ಥಾವರ ಕಾರ್ಯಾಚರಣೆ ಆರಂಭವಾದ ನಂತರ ಐದು ಕಿ.ಮಿ. ಸುತ್ತಲಿನ ಪ್ರದೇಶದಲ್ಲಿ ಯಾವ ಜೀವಿಗೂ ಪ್ರವೇಶವಿಲ್ಲ' ಎನ್ನುವ ಹೇಳಿಕೆಯನ್ನು ಪತ್ರಿಕೆಗಾಗಿ ಬಿಡುಗಡೆ ಮಾಡಿದರು. ದಿನಾಂಕ 1.7.86 ರಂದು ನ್ಯೂಕ್ಲಿಯರ್ ಪವರ್ ಬೋರ್ಡ್ (ಡಿಪಾರ್ಟ್‌ಮೆಂಟ್ ಆಫ್ ಅಟೋಮಿಕ್ ಎನರ್ಜಿ) ಇವರು ಒಂದು ನಕ್ಷೆ ತಯಾರಿಸಿ ಸ್ಥಾವರದಿಂದ 20 ಕಿ.ಮಿ. ಪ್ರದೇಶವನ್ನು Exclusive Zone ಎಂದು 5 ಕಿಮಿ ವ್ಯಾಪ್ತಿಯನ್ನು steralised zone ಎಂದೂ ಗುರುತಿಸಿ ಅನುಮೋದನೆಗೆ ಕಳುಹಿಸಿದ್ದಾರೆ. (ಚಿತ್ರ ನಂ.)

22.2.93 ರಂದು ಗೋಟೆಹಳ್ಳಿ ಮಂಡಲ ಪಂಚಾಯತ್ ಗೆ ಒಂದು ಪತ್ರ ಬರೆದು (ಪತ್ರನಂ. KID CA(30) 9395 91 ದಿನಾಂಕ 22.2.93) 5 ಕಿ.ಮಿ. ವ್ಯಾಪ್ತಿಯಲ್ಲಿ ಕೈಗಾ ದವರ ಅಧೀನಕ್ಕೆ ಬರುತ್ತಿದ್ದು ಅಲ್ಲಿ ಅಭಿವೃದ್ಧಿಗೆ ಅವಕಾಶ ಮಾಡಲು ಅನುಮತಿ ಕೊಡುವ 'ನಿರಪೇಕ್ಷಣಾ ಪತ್ರ'(No objection) ಕೊಡಬಾರದೆಂದು ಆದೇಶಿಸಿದೆ. ಇದರ ಆಧಾರದಲ್ಲಿ 19.4.93 ರಂದು ಒಪ್ಪಂದ ಗ್ರಾಮಸ್ಥರ ಅರ್ಜಿಯನ್ನು ಪಂಚಾಯತ್ ಕಾರ್ಯದರ್ಶಿ ಹಿಂದಿರುಗಿಸಿದ್ದಾರೆ.

12.6.96 ರಂದು ಕಾರವಾರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಆರ್.ವಿ.ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ನಡೆದ 54ನೇ ಪುನರ್ವಸತಿ ಸಭೆಯಲ್ಲಿ ಎನ್.ಪಿ.ಸಿ. ಅಧಿಕಾರಿಗಳ ಮುಂದೆ ಇವೆಲ್ಲವೂ ಚರ್ಚೆಯಾಗಿ ಮುಂದಿನ ಕ್ರಮದ ಬಗ್ಗೆ ಆದೇಶಿಸಲಾಗಿತ್ತು. ಕಾರ್ಯಸೂಚಿ 2.1 ರಲ್ಲಿ "ಕೈಗಾ ಅಣು ಸ್ಥಾವರದ 5 ಕಿ.ಮಿ. ಸುತ್ತಲಿನ ಪ್ರದೇಶಗಳಾದ ಹರಟುಗಾ, ಬಾಳೇಮನೆ, ದೇವಕಾರ ಗ್ರಾಮಗಳ ರಹವಾಸಿಗಳ ಮೇಲೆ ಕೈಗಾ ಅಣುವಿದ್ಯುತ್ ನಿಗಮದವರು ಕೆಲವು ನಿರ್ಬಂಧಗಳನ್ನು ವಿಧಿಸಿದ್ದು ಇದು ಅಲ್ಲಿಯ ರಹನಿವಾಸಿಗಳ ಮಾನವ ಹಕ್ಕಿನ ಉಲ್ಲಂಘನೆಯಾಗುತ್ತಿರುವುದರಿಂದ ಈ ಪ್ರದೇಶಗಳನ್ನು ಕೈಗಾ ಅಣು ವಿದ್ಯುತ್ ನಿಗಮದವರು ಸ್ವಾಧೀನ ಪಡಿಸಿಕೊಂಡು ಅಲ್ಲಿಯ ರಹವಾಸಿಗಳಿಗೆ ಎಲ್ಲಾ ಪುನರ್ವಸತಿ ಸೌಲಭ್ಯಗಳನ್ನು ಒದಗಿಸಬೇಕಾಗಿ ಅಧ್ಯಕ್ಷರು ಕೈಗಾ ಅಣು ವಿದ್ಯುತ್ ನಿಗಮದ ಅಧಿಕಾರಿಗಳಿಗೆ ಹಾಗೂ ಜಿಲ್ಲಾಧಿಕಾರಿಗಳು (ಉ.ಕ.) ಕಾರವಾರ ಇವರಿಗೆ ಸೂಚಿಸಿದರು" ಎಂದು ಸ್ಪಷ್ಟವಾಗಿ ದಾಖಲಾಗಿದೆ.



Tele 6092 NUCLEAR POWER CORPORATION
(A Government of India Enterprise)

Kaiga Project
KARWAR - 581 303

Ref: No.KP/CAO/(30)/93/9391

Date: 22-2-1993

The Secretary,
Mandal Panchayat,
GOTEHALLI (N.K.)

Sir,

Sub: Survey No.4/1(0-5-0 acres) of Hartuga village – conversion into non-agricultural land – reg.

Please refer to your letter No. dtd.1st April '92 on the above subject.

In this connection, this is to inform that Hartuga comes within 5 Kms. area of the plant site and in accordance with the regulations it is sterilised zone where human activities can be regulated so as to check undue population. Hence, if the permission is granted by the Mandal Panchayat of converting this area into non-agricultural area, there will be possibility of increasing the population as this area may be used for residential purposes. Hence, it would not be advisable to grant permission for the same.

Thanking you.

Yours faithfully,

(B.A.S.Prasad)
Chief Administrative Officer.

ಅಭಿವೃದ್ಧಿ ಕಾರ್ಯಗಳಿಗೆ ಅವಕಾಶ ಕೊಡದಂತೆ ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ ಗೋಟೆಹಳ್ಳಿ ಪಂಚಾಯತ್‌ಗೆ ಕೊಟ್ಟ ಆದೇಶ

ಆಗಿನ ಮುಖ್ಯಮಂತ್ರಿ ಜೆ.ಎಚ್.ಪಟೇಲರ ಸಮ್ಮುಖದಲ್ಲಿ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ಎನ್.ಪಿ.ಸಿ.ಯವರು 2 ಕೋಟಿ ರೂಪಾಯಿ ಕೊಡಲು ಒಪ್ಪಿಕೊಂಡರು.

ಆದರೆ ಇಂದು ಈ ಸ್ಥಳ ಅಪಾಯರಹಿತ ಎನ್ನುತ್ತಿದ್ದಾರೆ. ಹಾಗಾಗಿ ಇಲ್ಲಿ ಕೆಲವು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

1. 1986 ರಿಂದ 1998 ರವರೆಗೂ ವಿಕಿರಣದ ಪ್ರದೇಶವಾಗಿದ್ದು ಏಕಾಏಕಿ 1999 ರಲ್ಲಿ ಬದಲಾಗಿದ್ದೇಕೆ. ವಿಜ್ಞಾನವೇನಾದರೂ ಹೊಸ ಸಂಶೋಧನೆಯನ್ನು ನಡೆಸಿ, ಹೊಸ ಸತ್ಯವನ್ನು ಕಂಡುಕೊಂಡಿತೆ?

2. ಅಪಾಯದ ಪ್ರದೇಶ ಅಲ್ಲ ಎಂಬುದು ನಿರ್ವಿವಾದವಾದ ಸತ್ಯ ಎಂದಾದರೆ ಕೈಗಾದ ಅಧಿಕಾರಿಗಳು ಯಾಕೆ 15. ಕಿಮಿ ಆಚೆ ವಸತಿ ಸಂಕಿರಣ ನಿರ್ಮಿಸಿಕೊಂಡಿದ್ದಾರೆ.? ಹರಟುಗಾ ಬಾಳೇಮನೆಯಲ್ಲೇಕೆ ಮನೆ ನಿರ್ಮಿಸಿಲ್ಲ.

3. ಪರಮಹಂಸ ತಿವಾರಿಯವರು ಆಗ 20. ಕಿ.ಮಿ. ದೂರದಲ್ಲೇಕೆ ಸ್ವಂತ ಮನೆ ಕಟ್ಟಿಸಿದರು.

4. ಜನಸಂಪರ್ಕ ಅಧಿಕಾರಿಗಳಾಗಿದ್ದ ಜುಗಲ್ ಕಿಶೋರ್ ಸಿಂಗ್ ಅವರೇಕೆ 15 ಕಿ.ಮಿ. ದೂರದಲ್ಲಿ ಸ್ವಂತ ಜಮೀನು ಖರೀದಿಸಿದರು. ಕಡಿಮೆ ದರಕ್ಕೆ ಸಿಗುತ್ತಿದ್ದರೂ ಹರಟುಗಾ, ಬಾಳೇಮನೆಯಲ್ಲೇಕೆ ಮನೆ ಮಾಡಲಿಲ್ಲ.

6. ಅಪಾಯದ ಸ್ಥಳ ಅಲ್ಲದಿದ್ದರೆ ಏಕೆ ಔಷಧ, ಟೋನಿಕ್ ಇನ್ನಿತರ ಗುಳಿಗೆಗಳನ್ನು ಏಕಾಏಕಿ ವೈದ್ಯರ ತಂಡ ಕಳುಹಿಸಿ ಕೊಡಿಸುವ ಯೋಜನೆ ಹಾಕಿದರು? (ಇಲ್ಲಿಯ ರೈತರು ಅದನ್ನು ತಿರಸ್ಕರಿಸಿದರು)

7. ರಾಜ್ಯದ ಮುಖ್ಯಮಂತ್ರಿಗಳು ತಕ್ಕ ಕ್ರಮಕ್ಕೆ ಆದೇಶಿಸಿದ್ದರೂ ಜಿಲ್ಲಾಡಳಿತ ಯಾಕೆ ಕ್ರಮ ಕೈಗೊಳ್ಳದೆ ಎನ್.ಪಿ.ಸಿ.ಯವರ ಮರ್ಜಿ ಕಾಯುತ್ತಿದೆ? ಹಿಂಸೆ, ದೊಂಬಿಗಳ ಮೂಲಕ ಪ್ರತಿಭಟಿಸದೆ ಶಾಂತತೆಯನ್ನು ಕಾಯ್ದುಕೊಂಡು ಸಾಮ್ಯ ಹೋರಾಟವನ್ನು ಮಾತ್ರ ನಡೆಸಿದ್ದು ತಪ್ಪೇ?

ಈ ಪ್ರಶ್ನೆಗಳಿಗೆ ಸಂಬಂಧಪಟ್ಟವರು ಉತ್ತರಿಸಬೇಕಾಗಿದೆ.

ಬೇಡಿಕೆಗಳೇನು?

ಇವರು ಕೈಗಾ ಅಣುಸ್ಥಾವರದ ವಿರೋಧಿಗಳಲ್ಲ. ದೇಶದ ಅಭಿವೃದ್ಧಿಯಲ್ಲಿ ನಾವು ತ್ಯಾಗ ಮಾಡಬೇಕೆಂಬ ಧನಾತ್ಮಕ ತಿಳುವಳಿಕೆಗೆ ಇವರು ಬದ್ಧರು. ಕೈಗಾ ಸ್ಥಾವರಕ್ಕಾಗಿ ನಿಂತ ಕ್ಷಣದಲ್ಲಿಯೇ ಭೂಮಿ, ಉಳಿದ ಮನೆ ಕೊಡಲು ಇವರು ಸಿದ್ಧ. ಆದರೆ ಪಕ್ಕದಲ್ಲಿ (ಸೀಬರ್ಡ್ ಯೋಜನೆ) ಭೂಮಿ ಕೊಡುವುದಿಲ್ಲ ಎಂದು ರೈತರು ಹಠ ಹಿಡಿದಾಗ ಬುಲ್‌ಡೋಜರ್ ಬಿಟ್ಟು ಭೂಸ್ವಾಧೀನ ಮಾಡಿಕೊಳ್ಳುತ್ತಿರುವ ಅಧಿಕಾರಿಗಳು ಇಲ್ಲಿಯ ಜನ ಭೂಮಿಯನ್ನು ಕೊಡುತ್ತೇವೆ ಎಂದರೂ ಭೂಸ್ವಾದೀನದ 4(1) ನೋಟಿಫಿಕೇಷನ್ ಮಾಡದಿರುವುದು ಖಂಡನೀಯ. ಈ ಮಾನವೀಯ ಬೃಹತ್ ಯೋಜನೆಗಾಗಿ ಮನೆ, ಭೂಮಿ, ಜಾನುವಾರುಗಳನ್ನು ಬಿಟ್ಟು ಬರಲು ಒಪ್ಪಿದ ಜನಕ್ಕೆ ಮೂಲಭೂತ ಸೌಕರ್ಯಗಳಿಲ್ಲದ ವಿಕಿರಣದಿಂದೊಳಗೂಡಿದ ಭಯದ ವಾತಾವರಣವೇ ಉಡುಗೊರೆಯೇ?

ಇಲ್ಲಿಯ ರೈತರ ಬೇಡಿಕೆ ಇಷ್ಟೆ. 1. ಕೈಗಾದ ಅಣುಸ್ಥಾವರದ 5ಕಿ.ಮಿ. ಸುತ್ತಳತೆಯಲ್ಲಿ ಬರುವ ಹಂಟಗು, ಬಾಳೇಮನೆ, ಮತ್ತು ದೇವಕಾರ ಗ್ರಾಮದ ರೈತರಾದ ನಮ್ಮ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು ಪರಿಹಾರ ಮತ್ತು ಪುನರ್‌ವಸತಿ ಕಲ್ಪಿಸಿಕೊಡಿ 2. ಪುನರ್ವಸತಿ ಕಲ್ಪಿಸಿ, ರೈತರನ್ನು ಆ ಸ್ಥಳದಿಂದ ಸ್ಥಳಾಂತರಿಸುವವರೆಗೆ ವಿದ್ಯುತ್ ಉತ್ಪಾದಿಸಲು ಅನುಮತಿ ಕೊಡುವುದಿಲ್ಲವೆಂದು ಸರ್ಕಾರ ಘೋಷಿಸಬೇಕು.

1994 ರಿಂದ ಇಟ್ಟ ಈ ಬೇಡಿಕೆ ಹಾಗೆ ಇದೆ. ಆದರೆ ವಿದ್ಯುತ್ ಉತ್ಪಾದನೆ ಪ್ರಾರಂಭವಾಗಿ ತಿಂಗಳುಗಳೇ ಕಳೆದಿವೆ.

ದೇವಕಾರ ಮಾತ್ರ ಸೇರ್ಪಡೆ

ಇತ್ತೀಚಿನ ವರದಿಯ ಪ್ರಕಾರ ಎನ್.ಪಿ.ಸಿ. ದೇವಕಾರವನ್ನು ಮಾತ್ರ ಭೂಸ್ವಾಧೀನ ಮಾಡಿಕೊಳ್ಳಲು ಮುಂದಾಗಿದ್ದಾರಂತೆ. ಹೋರಾಟವನ್ನು ತಣ್ಣಗಾಗಿಸುವ ಪ್ರಯತ್ನ ಇದು. 3 ಕಿ.ಮಿ.ಗಿಂತ ಒಳಗೇ ಇರುವ ಹಂಟುಗಾ, ಬಾಳೇಮನೆ ಹೆಚ್ಚು ಅಪಾಯಕಾರಿಯಾದ ಪ್ರದೇಶ. ಈ ಪ್ರದೇಶದಲ್ಲಿ ನಿಂತು ನೋಡಿದರೆ ಕೈಗಾದ ಗೋಪುರ ಕಾಣುತ್ತದೆ. ಅಲ್ಲಿಂದ ರಾತ್ರಿ ಹೊರಟ ಬೆಳಕು ಈ ಹಳ್ಳಿಯ ಮೇಲೂ ಬೀಳುತ್ತದೆ. ಇಷ್ಟು ಹತ್ತಿರವಾದ ಪ್ರದೇಶವನ್ನು ಕೂಡ ಸ್ವಾಧೀನ ಪಡಿಸಿಕೊಳ್ಳಲು ಮುಂದಾಗದ ಕ್ರಮ ಖಂಡನೀಯ. ಈ ಮೂರು ಹಳ್ಳಿಗಳಲ್ಲಿ ಹೇಗೂ ನಮ್ಮ ಬೇಡಿಕೆ ಈಡೇರಿತು ಎಂದು ದೇವಕಾರದ ಜನ ಹೋರಾಟದಿಂದ ಹಿಂದೆ ಸರಿಯಬಾರದು. ಹಾಗಿದಲ್ಲಿ ಮಾತ್ರ ದೇವಕಾರದ ಗ್ರಾಮಸ್ಥರನ್ನು ಸೇರಿ ಹೋರಾಟದಲ್ಲಿ ಗೆಲ್ಲಬಹುದು.

ಕರ್ನಾಟಕ ಪ್ರಾಂತ ರೈತ ಸಂಘ ಮುಂದಿನ ಹೋರಾಟವನ್ನು ರೂಢಿಸುತ್ತಿರುವುದು ಸ್ವಾಗತಾರ್ಹ. ಪತ್ರ ಕೊಟ್ಟ ಅಧಿಕಾರಿಗಳು ಮತ್ತು ಜನಸಾಮಾನ್ಯರೂ ಕೂಡಾ ಇವರ ಹೋರಾಟವನ್ನು ಆತ್ಮೀಯವಾಗಿ ಬೆಂಬಲಿಸುತ್ತಿದ್ದಾರೆ. ಜನಪ್ರತಿನಿಧಿಗಳೂ ಇದನ್ನು ಅರ್ಥ ಮಾಡಿಕೊಳ್ಳಬೇಕು. ಆದಷ್ಟು ಬೇಗ ಈ ಮೂರು ಹಳ್ಳಿಗಳಿಗೆ ಭಯದಿಂದ ವಿಮೋಚನೆ ಮಾಡಬೇಕಾಗಿದೆ. ○

ಬಿ.ಜೆ.ಪಿ.ಯ ಬಲಪಂಥೀಯ ಆರ್ಥಿಕ ಕಾರ್ಯಕ್ರಮ ಮತ್ತು ಭಾರತದ ಬಡ ಜನತೆ

ಬಿ.ಜೆ.ಪಿಯು ಪೂರ್ವಾಶ್ರಮದಲ್ಲಿ ಜನ ಸಂಘವಾಗಿತ್ತು. ಜನ ಸಂಘವನ್ನು ಬಲಪಂಥೀಯ ಪಕ್ಷವೆಂದು 60ರ ದಶಕದಲ್ಲಿ ಗುರುತಿಸಲಾಗುತ್ತಿತ್ತು. ಇದರ ಆರ್ಥಿಕ ಸಾಮಾಜಿಕ ರಾಜಕೀಯ ಸಿದ್ಧಾಂತಗಳು, ಧೋರಣೆಗಳು ಮತ್ತು ಕಾರ್ಯಕ್ರಮಗಳು ಮುಚ್ಚುಮರೆ ಇಲ್ಲದೆ ಶ್ರೀಮಂತ, ಬಂಡವಾಳಶಾಹಿ ವರ್ಗಗಳ, ಭೂಮಾಲಿಕರ ವಾಣಿಜ್ಯೋದ್ಯಮಿಗಳ, ಕೈಗಾರಿಕೋದ್ಯಮಿಗಳ ಹಿತಾಸಕ್ತಿಯನ್ನು ಕಾಪಾಡುವಂಥಹುದು ಆಗಿತ್ತು. ಆದ್ದರಿಂದಲೇ ಅದು ಕಾಂಗ್ರೆಸ್ಸು ಜಾರಿಗೊಳಿಸಿದ ರಾಷ್ಟ್ರೀಕರಣವೆಂಬ ಧೋರಣೆಗೆ ವಿರುದ್ಧವಾಗಿತ್ತು. ಅದು ಜನರ ಹಣವನ್ನು ಸ್ವೀಕರಿಸಿ ಕೊನೆಗೆ ಕ್ಲೈಮ್ ಪಾವತಿಸದೆ ಪಂಗನಾಮ ಹಾಕುತ್ತಿದ್ದ 250ಕ್ಕೂ ಮಿಕ್ಕಿದ ಖಾಸಗೀ ವಿಮಾ ಕಂಪನಿಗಳನ್ನು ರಾಷ್ಟ್ರೀಕರಿಸಿದುದನ್ನು ವಿರೋಧಿಸಿತು. ಇಂದಿರಾಗಾಂಧಿಯವರು ಅನುಸರಿಸಿದ ಬ್ಯಾಂಕ್ ರಾಷ್ಟ್ರೀಕರಣವನ್ನು ವಿರೋಧಿಸಿತು. ಇಷ್ಟು ಮಾತ್ರವಲ್ಲದೆ ಸಾರಿಗೆ ರಾಷ್ಟ್ರೀಕರಣವಾಗಲೀ, ಅಥವಾ ಭೂಸುಧಾರಣೆಯ ಜಾರಿ ಇವೆಲ್ಲವನ್ನು ವಿರೋಧಿಸಿತು. ಸಾರ್ವಜನಿಕ ರಂಗದಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ ಸಿದ್ಧಾಂತಕ್ಕೆ ತಾತ್ವಿಕವಾಗಿ ವಿರುದ್ಧವಾಗಿತ್ತು. ಆಯಕಟ್ಟಿನ ವಿಭಾಗ ಹೊರತುಪಡಿಸಿ ಉಳಿದೆಲ್ಲ ಕಡೆಗಳಲ್ಲಿ ಸರಕಾರದ ಅಸ್ತಿತ್ವ ಸಹಭಾಗಿತ್ವವನ್ನು ಖಂಡ ತುಂಡವಾಗಿ ವಿರೋಧಿಸಿದ ಪಕ್ಷ ಜನ ಸಂಘವಾಗಿದೆ.

'ಸಮಾಜವಾದ' ಪದಕ್ಕೇ ವಿರೋಧ

ಸಮಾಜವಾದಿ ಸಮಾಜ ಎಂಬ ಪದಗುಚ್ಛವನ್ನು ಅತ್ಯಂತವಾಗಿ ವಿರೋಧಿಸುತ್ತಿದ್ದ ಜನಸಂಘ ಅಂತಹ ಯಾವುದೇ ಕಾರ್ಯಕ್ರಮ ಧೋರಣೆಯ ಅನುಷ್ಠಾನವನ್ನು ಪ್ರತಿಭಟಿಸುತ್ತಿತ್ತು. ಕಾರ್ಮಿಕ ವರ್ಗದ ಅಂತರಾಷ್ಟ್ರೀಯ ಮೇ ದಿನವನ್ನು ಎಂದೂ ಒಪ್ಪದ ಜನ ಸಂಘ ಮತ್ತು ಅದರ ಕಾರ್ಮಿಕ ಸಂಘಟನೆ 'ವಿಶ್ವಕರ್ಮ' ದಿನವನ್ನು ಮಾತ್ರ ಕಾರ್ಮಿಕ ದಿನ ಎಂದು ಪರಿಗಣಿಸಿ ಕಾರ್ಯಕ್ರಮ

ಪ್ರತಿಭಟಿಸುವುದಕ್ಕೆ ವ್ಯಯ ಮಾಡಲಿಲ್ಲ. ವಾಸ್ತವವಾಗಿ ಕಾಂಗ್ರೆಸ್ಸಿನ ಹೈಟೆಕ್ ಪ್ರಧಾನಿ ದಿವಂಗತ ರಾಜೀವಗಾಂಧಿಯವರು 21ನೇ ಶತಮಾನದ ಭಾರತ ಎಂಬ ಹಣೆ ಪಟ್ಟಿಯ ಅಡಿಯಲ್ಲಿ ಅನುಸರಿಸಿದ ಹೊಸ ಆಧಿಕಾರ ನೀತಿಯೇ ಆಗಲಿ, ಹೊಸ ಕೈಗಾರಿಕಾ ನೀತಿಯೇ ಆಗಲಿ ಅಥವಾ ಹೊಸ ಶಿಕ್ಷಣ ನೀತಿಯೇ ಆಗಲಿ ಬಿ.ಜೆ.ಪಿ.ಯ ಸಿದ್ಧಾಂತದ ಧೋರಣಾ ಹೇಳಿಕೆಗೆ ಸಾಮ್ಯವನ್ನು ಹೊಂದಿದ್ದಿತು. ಮುಂದೆ ಪಿ.ವಿ. ನರಸಿಂಹರಾಯರ ಕಾಲಾವಧಿಯಲ್ಲಿ ಅರ್ಥ ಮಂತ್ರಿ ಮನಮೋಹನ್ ಸಿಂಗ್‌ರವರು ಪ್ರಾರಂಭಿಸಿದ ವ್ಯಾಪಕ ಆರ್ಥಿಕ ಉದಾರೀಕರಣ ಮತ್ತು ಜಾಗತೀಕರಣವು ಜನ ಸಾಮಾನ್ಯರ ಬದುಕನ್ನು ಅಲ್ಲೋಲ ಕಲ್ಲೋಲ ಮಾಡುತ್ತಿರಬೇಕಾದರೆ ಅಡ್ಡಗೋಡೆಯ ಮಧ್ಯೆ ದೀಪ ಇಡುವ ಉಪಾಯದ ರಾಜಕೀಯ ನಡೆಸಿತು. ಅದು ಐ.ಎಂ.ಎಫ್. ಮತ್ತು ಜಾಗತಿಕ ಬ್ಯಾಂಕಿನ ಆಜ್ಞೆಗಳನ್ನು ಟೀಕಿಸಲಿಲ್ಲ. ಡಂಕೆಲ್ ಪ್ರಸ್ತಾಪದ ವಿರುದ್ಧವೂ ಗ್ಯಾಟ್‌ಗೆ ಭಾರತ ಸಹಿಹಾಕುವುದನ್ನು ವಿರೋಧಿಸಿ ಯಾವುದೇ ಆಂದೋಲನವನ್ನು ಈ ಬಿ.ಜೆ.ಪಿ ಪರಿವಾರ ಮಾಡಲಿಲ್ಲ. ಬದಲಾಗಿ ಅಂದು ವಿಪಕ್ಷ ನಾಯಕರಾಗಿದ್ದ ಸ್ವತಃ ಅಡ್ವಾಣಿಯವರೇ ತನ್ನ ವಿದೇಶಿ ಕಾರ್ಯಕ್ರಮವೊಂದ ರಲ್ಲಿ ಭಾರತದಲ್ಲಿ ನಡೆಯುತ್ತಿದ್ದ ಉದಾರೀಕರಣವನ್ನು ಬೆಂಬಲಿಸಿ ಪತ್ರಿಕಾಗೋಷ್ಠಿಯಲ್ಲಿ ಮಾತಾಡಿರುತ್ತಾರೆ. ಸಾರ್ವಜನಿಕ ರಂಗ ದೇಶದ ದೇವಾಲಯಗಳೆಂಬ ಪಂಡಿತ್ ನೆಹರೂರವರ ಸಿದ್ಧಾಂತಕ್ಕೆ ಎಳ್ಳು ನೀರು ಬಿಟ್ಟು ಸ್ವಾವಲಂಬನೆ ಪ್ರಗತಿಯ ಆರ್ಥಿಕತೆಯನ್ನು ನುಚ್ಚುನೂರು ಮಾಡಿದ ಪಿ.ವಿ. ನರಸಿಂಹರಾಯರ ಅವಧಿಯಲ್ಲಿ ಬಡವರು ದಿನದಿಂದ ದಿನಕ್ಕೆ ಬಡವರಾಗುತ್ತಾ ಶ್ರೀಮಂತರು ದಿನದಿಂದ ದಿನಕ್ಕೆ ಶ್ರೀಮಂತರಾಗುತ್ತಾ ಹೋದರು. ಇಂತಹ ಸಂದರ್ಭದಲ್ಲಿ ಪ್ರಬಲ ವಿರೋಧ ಪಕ್ಷವಾಗಿ ಸರಕಾರದ ತಪ್ಪು ನೀತಿಗಳನ್ನು ಇಂಚು ಇಂಚಿಗೂ ವಿರೋಧಿಸಬೇಕಾದ ಬಿ.ಜೆ.ಪಿ. ಸಹಜವಾಗಿಯೇ ಕಾಂಗ್ರೆಸು ಅನುಸರಿಸುತ್ತಿದ್ದ



ವರ್ಗಗುಣ

ಈ ಅವಧಿಯಲ್ಲಿ ವಿತ್ತ ಮಂತ್ರಿ ಯಶವಂತ ಸಿನ್ಹಾರವರೇ ಆಗಲಿ, ಅಥವಾ ಸದಾ ವಿದೇಶಿ ಪ್ರವಾಸದಲ್ಲೇ ತಲ್ಲೀನರಾಗಿ ಅಮೇರಿಕಾ ಭಾರತದ ಮೇಲೆ ಹೊರಿಸಿದ್ದ ಆರ್ಥಿಕ ದಿಗ್ಬಂಧನವನ್ನು ತೆಗೆದುಹಾಕಲು ಒತ್ತಾಯಿಸುತ್ತಿದ್ದ ವಿದೇಶಾಂಗ ಮಂತ್ರಿ ಜಸ್ವಂತ್‌ಸಿಂಗ್‌ರವರುಗಳು ಪ್ರತಿನಿತ್ಯ ಐ.ಎಂ.ಎಫ್ ಮತ್ತು ಜಾಗತಿಕ ಬ್ಯಾಂಕ್ ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳನ್ನು ಓಲೈಸುವುದರಲ್ಲೇ ಕಾರ್ಯ ಪ್ರವೃತ್ತರಾಗಿದ್ದರು. ಇದು ಈಗಲೂ ಮುಂದುವರಿಯುತ್ತಿದೆ. ಇಲ್ಲಿ ಇರುವಂಥಹುದು ಬಿಜೆಪಿಯ ವರ್ಗ ಗುಣ ಬಲಪಂಥೀಯ ಆಲಿಂಗನವೇ ಇದರ ಹಿಂದೆ ಇರುವ ನಿಜವಾದ ಕಾರಣ.

ವಿತ್ತ ಮಂತ್ರಿ ಯಶವಂತ ಸಿನ್ಹಾರವರು ಎರಡು ಬಜೆಟ್‌ಗಳನ್ನು ಮಂಡಿಸಿರುತ್ತಾರೆ. ಈ ಬಜೆಟ್‌ನ ಸಾರವಾದರೂ ಏನು? ಕೊಳ್ಳುವ ಶಕ್ತಿಯಿಂದ ಕಳೆಗುಂದಿರುವ ಭಾರತದ ಬಡಜನರಿಗೆ ವರದಾನವಾಗಿತ್ತೇ ಅಥವಾ ಶ್ರೀಮಂತ ವರ್ಗಕ್ಕೆ ಕಾರ್ಪೋರೇಟ್ ವಲಯಕ್ಕೆ ಶಾಪವಾಗಿತ್ತೇ ಎಂಬುದನ್ನು ನಿರ್ಧರಿಸುವುದು ಜಟಿಲವಾದ ಸಮಸ್ಯೆಯೇನೂ ಅಲ್ಲ. ಮೊದಲನೇ ಬಹು ಸಂಖ್ಯಾತ ವರ್ಗಕ್ಕೆ ಬೆಲೆಏರಿಕೆ, ಮತ್ತು ತೆರಿಗೆ ಹೆಚ್ಚಳವಾದರೆ ಎರಡನೆಯ ವರ್ಗಕ್ಕೆ ಆರಾಮವಾಗಿ

ಸರಕಾರ ದುಡಿಯುವ ವರ್ಗವನ್ನು ಶೋಷಣೆ ಮಾಡುವುದಕ್ಕೆ ಮಾತ್ರ ಬದ್ಧವಾಗಿದ್ದು ಯಾವ ಕಾರಣಕ್ಕೂ ಈ ವರ್ಗದ ಬೇಡಿಕೆ ಕೇಳಿಕೆಗಳನ್ನು ಮಾನ್ಯ ಮಾಡಲಾರದು ಎಂಬುದಕ್ಕೆ ಇದೇ ಸೂಕ್ತ ಉದಾಹರಣೆಯಾಗಿದೆ.

ಸರಕಾರಿ ಸ್ವಾಮ್ಯದ ದೂರ ಸಂಪರ್ಕ ಇಲಾಖೆಯನ್ನು ಬಿ.ಜೆ.ಪಿ. ಸರಕಾರ ನಿರ್ವಹಿಸಿದ ರೀತಿ ಮಾತ್ರ ಕ್ರೂರವಾದುದು. 50,000 ಕೋಟಿ ರೂಪಾಯಿಗಳ ಹಗರಣಕ್ಕೆ ಅವಕಾಶ ಮಾಡಲಿದೆ ಎನ್ನಲಾದ ಈ ಇಲಾಖೆಯ ಖಾಸಗೀಕರಣದಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳ ಕಪಿಮುಷ್ಟಿಯಲ್ಲಿ ಸರಕಾರ ನರಳುತ್ತಿದೆ. ದೇಶಿಯ ಮತ್ತು ವಿದೇಶಿ ಖಾಸಗಿ ಸಂಸ್ಥೆಗಳು ಈ ಇಲಾಖೆಗೆ ಬಾಕಿಯಿರುವ ಅಗಾಧ ಮೊತ್ತವನ್ನು ವಸೂಲು ಮಾಡಲು ಪ್ರವೃತ್ತರಾದ ಮಂತ್ರಿ ಜಗನ್ಮೋಹನ್‌ರವರನ್ನೇ ಎತ್ತಂಗಡಿ ಮಾಡಿದ ಸರಕಾರವಾಗಿದೆ.

ಬಡವನ ಕನುಸಗಳನ್ನು ಹೊಸ ಹಾಕಲು

13ನೆಯ ಲೋಕಸಭಾ ಚುನಾವಣೆಯಲ್ಲಿ ಮತ್ತೆ ಎನ್.ಡಿ.ಎ. ಸರಕಾರ ಅಸ್ಥಿತ್ವಕ್ಕೆ ಬಂದಿದೆ. ಬಿ.ಜೆ.ಪಿ. ನಾಯಕ ಸ್ಥಾನದಲ್ಲಿ ಇದ್ದು "ದ್ವಿತೀಯ ಹಂತದ ಸುಧಾರಣೆಗಳು ಭರದಿಂದ ನಡೆಯಲಿದೆ ಎಂದು ಹೇಳಿದೆ. ಚುನಾವಣೆ ಮುಗಿದು ಫಲಿತಾಂಶ ಹೊರಬೀಳುವ ಮೊದಲೇ ಅದು ತುದಿಗಾಲಲ್ಲಿ ನಿಂತು ವಿಮಾರಂಗ ಖಾಸಗೀಕರಣದ ಬಗ್ಗೆ ಪ್ರತಿಕ್ರಿಯಿಸಲಾರಂಭಿಸಿ ಕೊನೆಗೂ ವಿಮಾರಂಗದ ಸುಧಾರಣೆ ಮತ್ತು ಅಭಿವೃದ್ಧಿಗೆಂದು ಒಂದು ಮಸೂದೆಯನ್ನು ಮಂಡಿಸಿ ಪಾಸು ಮಾಡಿಸಿಕೊಂಡಿದೆ. ಸಾರ್ವಜನಿಕ ರಂಗದಲ್ಲಿರುವ ಸಾಮಾನ್ಯ ವಿಮೆ ಮತ್ತು ಜೀವವಿಮೆಯನ್ನು ಉಸಿರುಗಟ್ಟಿ ಸಾಯಿಸಲು ಬಿ.ಜೆ.ಪಿ. ಪಣ ತೊಟ್ಟಿದೆ. ಅಮೇರಿಕಾದಲ್ಲಿ ಈ ಬಗ್ಗೆ ಅಲ್ಲಿನ ಉದ್ಯಮಿಗಳೊಂದಿಗೆ ಚರ್ಚೆ ನಡೆಸಿದ ವಿತ್ತ ಮಂದಿ ಎಲ್ಲಾ ಭರವಸೆಗಳನ್ನು ನೀಡಿಯಾಗಿದೆ. ರಾಜ್ಯದರ್ಜೆಯ ವಿತ್ತ ಮಂತ್ರಿ ಧನಂಜಯ ಕುಮಾರ್‌ರವರು ಕುಂದಾಪುರದಲ್ಲಿ ಸಭೆಯೊಂದರಲ್ಲಿ ಮಾತಾಡುವಾಗ "ಬ್ಯಾಂಕ್ ರಾಷ್ಟ್ರೀಕರಣ ಮತ್ತು ರಾಜ್ಯ ಧನ ರದ್ದತಿ ಇತಿಹಾಸದ ಕಪ್ಪು ಚುಕ್ಕೆ" ಎಂದು ಹೇಳಿ ಬರಲಿರುವ ಗಂಡಾಂತರಕಾರಿ ದಿನಗಳ ಸೂಚನೆ ನೀಡಿದ್ದರು. ಇದೇ ದಾಟಿಯಲ್ಲಿ ಸ್ಟೇಟ್ ಬ್ಯಾಂಕ್ ಸೇರಿದಂತೆ ಎಲ್ಲಾ ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡುವುದಾಗಿ ಹೇಳುತ್ತಿದೆ. ವಿದೇಶಿ ಹಣಕಾಸು ನಿಯಂತ್ರಣ ಕಾಯಿದೆಯನ್ನು ತಿದ್ದುಪಡಿ ಮಾಡಿದೆ. ಕಂಪನಿ ಕಾನೂನು 1956, ಇದನ್ನು ತಿದ್ದುಪಡಿ ಮಾಡುವುದಾಗಿ ಹೇಳಿಕೊಂಡಿದೆ. ಷೇರು ವಹಿವಾಟು ನಿಯಂತ್ರಣ ಕಾನೂನು ಮತ್ತೆ ತಿದ್ದುಪಡಿಗೊಳಗಾಗಿದೆ ಇವೆಲ್ಲವುಗಳು ಭಾರತದ ಬಡವನ ಅಂಗಳವನ್ನು ತಟ್ಟುವ ಇರಾದೆಯಿಂದ ಆಗಿರುವುದಿಲ್ಲ ಬದಲಾಗಿ ಆತನ ಕನಸುಗಳನ್ನೇ ಹೊಸಕಿ ಹಾಕುವ ಮೂಲ ಉದ್ದೇಶ ಹೊಂದಿವೆ. ಕಲ್ಕತ್ತಾದಲ್ಲಿ ವಾಣಿಜ್ಯೋದ್ಯಮ ಸಂಘದ ಸಭೆಯಲ್ಲಿ ಮಾತನಾಡುತ್ತ ಮಾನ್ಯ ವಿತ್ತ ಮುಂತ್ರಿಯವರು ಸಬ್ಸಿಡಿ ಎಂಬುದು ಮುಗಿದ ಅಧ್ಯಾಯ ಎಂದು ಹೇಳಿ ಬಡವರ ಬದುಕಿಗೆ ಕಲ್ಲು ಚಪ್ಪಡಿ ಎಳೆಯುವ ತರಾತುರಿಯಲ್ಲಿದ್ದಾರೆ.

ಕಾರ್ಮಿಕ ವರ್ಗದ ಕನಿಷ್ಟ ಹಕ್ಕುಗಳನ್ನು ನೀಡಿರುವ ಹಲವಾರು ಕಾರ್ಮಿಕ ಕಾಯಿದೆಗಳನ್ನು ಆಮೂಲಾಗ್ರವಾಗಿ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ. ಎರಡನೇ ಕಾರ್ಮಿಕ ಆಯೋಗವನ್ನು ರಚಿಸಲಾಗಿದೆ. ಅದು ರಚಿಸಿದ ಬೆಲೆ ಸೂಚ್ಯಾಂಕದ ವಿಧಾನವನ್ನು ಬದಲಾವಣೆ ಮಾಡಬೇಕೆಂದು ಒಂದು ಸಮಿತಿ ವರದಿ ಒಪ್ಪಿಸಿದೆ. ಒಟ್ಟಿನಲ್ಲಿ ಎಲ್ಲೆಲ್ಲೂ ಕಾರ್ಮಿಕರ, ರೈತರ, ಬಡಜನರ ಪರವಾಗಿ ಅಂಧಕಾರ ಕವಿಯುತ್ತಿದೆ. ಒಟ್ಟಿನಲ್ಲಿ ಈ ಸರಕಾರ ಗಂಭೀರ ಪ್ರಮಾಣದಲ್ಲಿ ಬಲಪಂಥೀಯ ಆರ್ಥಿಕ ಧೋರಣೆಗಳನ್ನು ಅನುಸರಿಸಿ ಹೊಸ ಸಹಸ್ರಮಾನಕ್ಕೆ ಪ್ರವಹಿಸಲಿದೆ. ತುತ್ತು ಅನ್ನಕ್ಕಾಗಿ ಪರಿತಪಿಸಬೇಕಾದ ಜನವರ್ಗದ ಸಂಖ್ಯೆ ಬೃಹತ್ ಪ್ರಮಾಣದಲ್ಲಿ ಹೆಚ್ಚಳವಾಗಲಿದೆ. ○

ಜನಸಂಘ/ಬಿಜೆಪಿ ದೇಶದ ಅತ್ಯಂತ ಶ್ರೀಮಂತರ, ಕಾಳಸಂತೆಕೋರರ ಪರಿವಾರ ಪಕ್ಷವೆಂದು ಕರೆಯಲ್ಪಡುತ್ತಿತ್ತು. 'ಹಿಂದುತ್ವಾ' ದ ಪರದೆಯ ಹಿಂದೆ ಮರೆಯಾದಂತಿದ್ದ ಅವರ ಈ ಮುಖ ಈಗ ಎದ್ದು ಕಾಣುತ್ತಿದೆ. ವಾಜಪೇಯಿ ಸರ್ಕಾರ ಗಂಭೀರ ಪ್ರಮಾಣದಲ್ಲಿ ಬಲಪಂಥೀಯ ಆರ್ಥಿಕ ನೀತಿಗಳನ್ನು ಅನುಸರಿಸಿ ಹೊಸ ಸಹಸ್ರಮಾನಕ್ಕೆ ಪ್ರವಹಿಸುತ್ತಿದೆ. ತುತ್ತು ಅನ್ನಕ್ಕಾಗಿ ಪರಿತಪಿಸಬೇಕಾದ ಜನವರ್ಗದ ಸಂಖ್ಯೆ ಬೃಹತ್ ಪ್ರಮಾಣದಲ್ಲಿ ಹೆಚ್ಚಲಿದೆ.

ಕೇಂದ್ರದಲ್ಲಿ ಬಿ.ಜೆ.ಪಿ. ನೇತೃತ್ವದ ಎನ್.ಡಿ.ಎ. ಸರಕಾರ ಕಳೆದ ಮಹಾ ಚುನಾವಣೆಯಲ್ಲಿ ಬಹುಮತ ಪಡೆದು ಅಧಿಕಾರದ ಗದ್ದುಗೆ ಏರಿದೆ. ಚುನಾವಣಾ ಫಲಿತಾಂಶಕ್ಕೆ ಮೊದಲೇ ಎನ್.ಡಿ.ಎ. ರಂಗವು ದೇಶದ ಮತ್ತು ವಿದೇಶದ ಬಂಡವಾಳಶಾಹಿ ವರ್ಗಕ್ಕೆ ನೀಡಿದ ಭರವಸೆ ಬಡಜನರ ಬದುಕಿನ ದೃಷ್ಟಿಯಿಂದ ಚರ್ಚಿಸಬೇಕಾದ ಸಂಗತಿಯಾಗಿದೆ. ಅದರಂತೆ ಪ್ರಥಮ ಲೋಕಸಭಾ ಅಧಿವೇಶನದಲ್ಲಿ ಅದು ಘೋಷಿಸಿದ ಮತ್ತು ಮಂಡಿಸಿದ ಹಲವಾರು ಮಸೂದೆಗಳು ಈ ಸರಕಾರದ ನಾಯಕಸ್ಥಾನದಲ್ಲಿರುವ ಬಿ.ಜೆ.ಪಿಯು ತೀರಾ ಬಲಪಂಥೀಯ ಪಕ್ಷ ಎಂಬುದನ್ನ ತೋರಿಸುತ್ತದೆ. ಭಾರತದಂತಹ ಬಡದೇಶವೊಂದರಲ್ಲಿ ಬಲಪಂಥೀಯ ಪಕ್ಷ ಅಧಿಕಾರದ ಗದ್ದುಗೆಯಲ್ಲಿದ್ದು ಕೊಂಡು ಜಾರಿ ಮಾಡುವ ಕಾರ್ಯಕ್ರಮ ಮತ್ತು ಯೋಜನೆಗಳು ಬಡಜನರ ಕಣ್ಣೀರನ್ನು ಒರೆಸ ಬಹುದೆಂದು ಭಾವಿಸುವುದು ಮರೀಚಿಕೆಯಾಗ ಬಹುದು. ಈ ಪಕ್ಷದ ಆರ್ಥಿಕ ಧೋರಣೆಗಳಾದರೂ ಏನಾಗಿತ್ತು ಎಂಬುದನ್ನು ವಿಶ್ಲೇಷಿಸುವುದು ಈ ಲೇಖನದ ಉದ್ದೇಶ.

ಕೃಷ್ಣಪ್ಪ ಕೊಂಬಾಡಿ

ಸುತ್ತಿ

ಈ ರೀತಿ ಕಾರ್ಮಿಕ ವರ್ಗದ ವಿರುದ್ಧವಾದ ಬಲಪಂಥೀಯ ಧೋರಣೆಗಳು ಜನ ಸಂಘದ ಧಮನಿ ಧಮನಿಗಳಲ್ಲಿ ಹರಿಯುತ್ತಿತ್ತು.

ಜನಸಂಘದ ಮುಂದಿನ ಅವಸ್ಥೆಯಾದ ಬಿ.ಜೆ.ಪಿಯು ಕಳೆದೆರಡು ದಶಕಗಳಲ್ಲಿ ತನ್ನ ಮೂಲಭೂತ ಧೋರಣೆಯಿಂದ ಎಂದೂ ವಿಚಲಿತವಾಗಲಿಲ್ಲ. ಇದರ ಸಭೆ ಸಮಾರಂಭ ಕಾರ್ಯಕ್ರಮಗಳಲ್ಲಿ ಬಡಜನರ ಪರವಾಗಿ ಪುಂಖಾನುಪುಂಖವಾಗಿ ಮಾತುಗಳ ಸರಮಾಲೆ ಬರುತ್ತಿತ್ತೇ ವಿನಹ ಅದ್ಯಾವುದೂ ತನ್ನ ಧೋರಣೆಯ ಭಾಗವಾಗಿರಲಿಲ್ಲ. ಕಾಂಗ್ರೆಸ್ಸಿನ ಬಡಜನರ ಪರವಾದ ಮುಖವಾಡಕ್ಕೆ ಪ್ರತಿಯಾಗಿ ಬಿ.ಜೆ.ಪಿ.ಯೂ ಒಂದು ಮುಖವಾಡ ಧರಿಸಿತು. 80ರ ದಶಕದಲ್ಲಿ ಬಿ.ಜೆ.ಪಿ. ಎಂದೂ ಕಾಂಗ್ರೆಸ್ಸಿನ ಶ್ರೀಮಂತ ಕೈಗಾರಿಕೋದ್ಯಮಿಗಳ ಪರವಾದ ಆರ್ಥಿಕ ಕೈಗಾರಿಕಾ ನೀತಿಯನ್ನು ವಿರೋಧಿಸುವಲ್ಲಿ ಹೆಚ್ಚಿನ ಮುತುವರ್ಜಿಯನ್ನೇನೂ ತೋರಿಸಲಿಲ್ಲ. ಅಮೇರಿಕಾ ಆರ್ಥಿಕತೆಗೆ ಶರಣಾಗಿ -ಐ.ಎಂ.ಎಫ್.ನ ಬಾಗಿಲಲ್ಲಿ ಸಾಲಕ್ಕಾಗಿ ಅಂಗಲಾಚುತ್ತಿದ್ದ ಭಾರತದ ಪರಿಸ್ಥಿತಿಯ ಬಗ್ಗೆ ಅಸಹನೆಯನ್ನೇನೂ ತೋರಿಸಿರಲಿಲ್ಲ. ಈ ದಶಕದಲ್ಲಿ ಸ್ಪಷ್ಟವಾಗಿ ಬಿ.ಜೆ.ಪಿ. ದೇಶದ ಅತ್ಯಂತ ಶ್ರೀಮಂತರ, ಕಾಳಸಂತೆಕೋರರ ಪಕ್ಷವೆಂದು ಕರೆಯಲ್ಪಡುತ್ತಿದ್ದುದ್ದು ಸಹಜವೇ ಆಗಿತ್ತು.

ಕಾಂಗ್ರೆಸ್ ನೀತಿಗಳಿಗೆ ಮೌನಸಮ್ಮತಿ

ಬಿ.ಜೆ.ಪಿ. ಯಾವಾಗ ಮತೀಯ ಭಾವನೆ ಕೆರಳಿಸುವ ಕೋಮುವಾದಿ ರಾಜಕೀಯವನ್ನು ಪ್ರಾರಂಭಿಸಿತೋ ಅಂದಿನಿಂದ ಅದು ತನ್ನ ಗಮನವನ್ನು ಕಾಂಗ್ರೆಸ್ಸಿನ ಆರ್ಥಿಕ ನೀತಿಯನ್ನು ತೋರಿಕೆಗಾದರರೂ

ಬಲಪಂಥೀಯ ಧೋರಣೆಗಳಿಗೆ ಮೌನಸಮ್ಮತಿ ನೀಡುತ್ತಿತ್ತು.

ಈ ತನಕ ವಿರೋಧ ಪಕ್ಷದಲ್ಲಿ ಇದ್ದು ಕಾಂಗ್ರೆಸ್ಸು ಬಲಪಂಥೀಯ ಧೋರಣೆ ಅನುಸರಿಸುತ್ತಿದ್ದಾಗ ಬೆಂಬಲಿಸುತ್ತಿದ್ದ ಬಿ.ಜೆ.ಪಿ.ಯು ತಾನೇ ಸ್ವತಃ ಅಧಿಕಾರಕ್ಕೆ ಬಂದಾಗ ಸಿಕ್ಕಿರುವ ಅವಕಾಶವನ್ನು ಹೇಗೆ ಉಪಯೋಗಿಸಬಲ್ಲದು ಎಂಬುದಕ್ಕೆ 13 ದಿನಗಳ ಆಡಳಿತವೇ ಒಂದು ಉಜ್ವಲ ಉದಾಹರಣೆ. ಮಹಾರಾಷ್ಟ್ರದಲ್ಲಿ ಅಮೇರಿಕನ್ ಮೂಲದ ಬಹುರಾಷ್ಟ್ರೀಯ ವಿದ್ಯುತ್ ಉತ್ಪಾದನಾ ಯೋಜನೆಯಾದ ಎನ್ರಾನ್ ಯೋಜನೆಯನ್ನು ಅರಬ್ಬೀ ಸಮುದ್ರಕ್ಕೆ ಎಸೆಯೋಣ ಎಂಬ ಚಳುವಳಿ ಸಂಘಟಿಸಿದ ಬಿ.ಜೆ.ಪಿ 13 ದಿನದ ರಾಜ್ಯಭಾರದ ಪ್ರಥಮ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಅದೇ ಎನ್ರಾನ್‌ಗೆ ಕೌಂಟರ್ ಗ್ಯಾರಂಟಿ ನೀಡಿ ತಾನೆಂಥಹ ಪಕ್ಷವೆಂಬುದನ್ನು ತೋರ್ಪಡಿಸಿತು. ವಿಶ್ವಾಸ ಮತದಲ್ಲಿ ತಾನು ಸೋತೇ ಸೋಲುತ್ತೇನೆಂಬುದನ್ನು ತಿಳಿದುಕೊಂಡು ಮುಂಬರುವ ಸಂಯುಕ್ತ ರಂಗವು ಆ ಯೋಜನೆಗೆ ಕೌಂಟರ್ ಗ್ಯಾರಂಟಿ ನೀಡುವುದು ಸಂದೇಹಾಸ್ಪದ ಎಂದು ತಿಳಿದೇ ಈ ರೀತಿ ವರ್ತಿಸಿದ ಸರಕಾರ ನಿಜವಾಗಿಯೂ ಎಂತಹ ಜನರ ಹಿತಾಸಕ್ತಿಯನ್ನು ಕಾಪಾಡಬಲ್ಲದು ಎಂಬುದನ್ನು ಶ್ರುತಪಡಿಸಿದೆ. ಸಂಯುಕ್ತ ರಂಗದ ಸರಕಾರ ಬಹುಮತ ಕಳೆದುಕೊಂಡು ಹೊಸ ಚುನಾವಣೆಗೆ ನಡೆದು ಬಿ.ಜೆ.ಪಿರಂಗ ಅಧಿಕಾರಕ್ಕೆ ಬಂದು 13 ತಿಂಗಳುಗಳ ಕಾಲ ಮುಂದುವರಿಯಿತು ಈ 13 ತಿಂಗಳು ಅಧಿಕಾರದಲ್ಲಿ ಇದ್ದಾಗ ಮತ್ತು ಅನಂತರದ ಉಸ್ತುವಾರಿ ಸರಕಾರದ ಅವಧಿಯಲ್ಲಿ ಬಿ.ಜೆ.ಪಿ. ಅನುಸರಿಸಿದ ಆರ್ಥಿಕ ಕೈಗಾರಿಕಾ ಧೋರಣೆಗಳೂ ಕೂಡಾ ತೀರಾ ಬಲಪಂಥೀಯ ಧೋರಣೆಗಳೇ ಆಗಿವೆ.

ಮೇವು ಸ್ವೀಕರಿಸಲು ಎಲ್ಲವೂ ಇತ್ತು. ಅಪಾರ ಪ್ರಮಾಣದ ರಿಯಾಯಿತಿಗಳು ಇದ್ದವು. ಕಪ್ಪು ಹಣದ ಗುರಿಕಾರಿಕೆಗೆ ಏನೂ ತೊಂದರೆ ಇರಲಿಲ್ಲ. ತೆರಿಗೆ ವಂಚಕರ, ಕಾಳಸಂತೆಕೋರರ ವ್ಯಾಪಾರ, ವಹಿವಾಟುಗಳಿಗೆ ಕಡಿವಾಣವೇ ಕಾಣಲಿಲ್ಲ. ಬದಲಾಗಿ ಬಡ ಮಧ್ಯಮ ವರ್ಗದ ಜನರ ಅಲ್ಪ ಸ್ವಲ್ಪ ಆದಾಯವನ್ನು ಕಸಿಯಲು ಆದಾಯಕರದ ಮೇಲೆ ಎಕ್ಸೈಜ್ ಸುಂಕ ವಿಧಿಸಲಾಯಿತು. ರಸಗೊಬ್ಬರದ ಮೇಲಿನ ಸಬ್ಸಿಡಿ ಕಡಿತವಾಯಿತು. ಸಾರ್ವಜನಿಕ ರಂಗದ ಶೇರು ಖಾಸಗಿಯವರಿಗೆ ಮಾರುವ ಪ್ರಕ್ರಿಯೆಗೆ ವ್ಯಾಪಕ ಚಾಲನೆ ನೀಡಲಾಯಿತು. ರೈತರಿಗೆ ಉಚಿತ ವಿದ್ಯುತ್ ನೀಡುವುದು ತಪ್ಪು ಎಂಬ 'ಫತ್ವ' ಹೊರಡಿಸಲಾಯಿತು. ಅಂಚೆ, ತಂತಿ, ಪೆಟ್ರೋಲ್ ಹಾಗೂ ಇವುಗಳ ಉತ್ಪನ್ನಗಳ ಬೆಲೆ ಹೆಚ್ಚಿಸಲಾಯಿತು. ಈ ರೀತಿ ಉಳ್ಳವರಿಗೆ ಎಲ್ಲವೂ ನೀಡಿ ಸತ್ಕರಿಸಲಾಯಿತು. ಏನೂ ಇಲ್ಲದ ಬಡ ವರ್ಗವನ್ನು ತುಳಿಯಲಾಯಿತು. ಸ್ವದೇಶಿ ಮಂತ್ರ ಜಪಿಸುತ್ತಿದ್ದ ಸರಕಾರ ವಿದೇಶಿ ಬಹು ರಾಷ್ಟ್ರೀಯ ಸಂಸ್ಥೆಗಳಿಗೆ ಗೌರವದಿಂದ ಆತಿಥ್ಯ ನೀಡಿ ಭಾರತದ ಸಂಪತ್ತನ್ನು ಮತ್ತು ಇಲ್ಲಿಯ ಬಡಪಾಯಿ ಮಾದಪ್ಪಗಳನ್ನು ಸುಲಿಯಲು ಅವಕಾಶವಿದೆ ಎಂದು ಘೋಷಿಸಲಾಯಿತು. ಸಾರ್ವಜನಿಕ ರಂಗದ ನವರತ್ನಗಳೆಂಬ ಕೈಗಾರಿಕೆಗಳನ್ನೂ ಇವುಗಳ ಶೇರುಗಳನ್ನು ಮಾರಲಾಯಿತು.

ಈ ಅವಧಿಯಲ್ಲಿ ಬಿ.ಜೆ.ಪಿ. ಸರಕಾರವು ಸಹಜವಾಗಿಯೇ ದುಡಿಯುವ ವರ್ಗದ ಬೇಡಿಕೆಗಳನ್ನು ಹೋರಾಟಗಳನ್ನು ಹತ್ತಿಕ್ಕಿದೆ. ಮುಖ್ಯವಾಗಿ ದೇಶದ ಕಾಲೇಜು ಅಧ್ಯಾಪಕರ ಚಳುವಳಿ, ಅಂಚೆ ತಂತಿ ನೌಕರರ ಚಳವಳಿಗಳನ್ನು ಮುರಿಯಲು ಎಸ್ಮಾಗಳಂತಹ ಕ್ರೂರ ಕಾಯಿದೆಗಳನ್ನು ಉಪಯೋಗಿಸಿದೆ. ಬಲಪಂಥೀಯ

ಹೋರಾಟದ ಸಾಗರಕ್ಕೆ.... ಐಕ್ಯ ಹೋರಾಟಗಳಿಗೆ ಸಿಐಟಿಯು ಕರೆ

ನೇರ ಕಾರ್ಯಾಚರಣೆಗೆ - ದೇಶವ್ಯಾಪಿ ಹೋರಾಟಕ್ಕೆ ಎ.ಐ.ಕೆ.ಎಸ್. ನಿರ್ಧಾರ

ವಾಜಪೇಯಿ ಸರ್ಕಾರ ತನ್ನ ಮುಖವಾಡಗಳನ್ನೆಲ್ಲಾ ಕಳಚಿ ಕಾಂಗ್ರೆಸ್ಸಿನ ಶಾಮೀಲಿನೊಂದಿಗೆ "ಎರಡನೇ ತಲೆಮಾರಿನ ಸುಧಾರಣೆಗಳ ಹೆಸರಿನಲ್ಲಿ ಭಾರತದ ಆರ್ಥಿಕವನ್ನು ಸಾಮ್ರಾಜ್ಯಶಾಹಿಗಳ ಲೂಟಿಗೆ ತೆರೆದಿಡುತ್ತಾ ಅವರಿಂದ 'ಭಲೆ' ಎನ್ನಿಸಿಕೊಳ್ಳುತ್ತಿರುವಂತೆ ದೇಶದ ಜನಸಮೂಹಗಳು ತಮ್ಮ ಮೇಲೆ ಆರಂಭವಾಗುತ್ತಿರುವ ಧಾಳಿಗಳ ವಿರುದ್ಧ ಬೀದಿಗಿಳಿಯಲು ಸಿದ್ಧವಾಗುತ್ತಿದ್ದಾರೆ. ನವೆಂಬರ್ 13 ರಿಂದ 16 ರವರೆಗೆ ಜಯಪುರದಲ್ಲಿ ನಡೆದ ಸಿಐಟಿಯು ಕಾರ್ಯಕಾರಿ ಸಮಿತಿಯ ಸಭೆ, ನವದೆಹಲಿಯಲ್ಲಿ 23 ರಂದು ನಡೆದ ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ (CPSTU) ಪ್ರಧಾನ ಗುಂಪಿನ ಸಭೆ ಹಾಗೂ ನವೆಂಬರ್ 23-24 ರಂದು ನಡೆದ ಅಖಿಲ ಭಾರತ ಕಿಸಾನ್ ಮಂಡಳಿಯ ಸಭೆಯ ಕಲಾಪಗಳು ಹಾಗೂ ನಿರ್ಧಾರಗಳು ಈ ದಿಕ್ಕಿನಲ್ಲಿ ಸ್ಪಷ್ಟ ಸಂಕೇತ ನೀಡಿವೆ. ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯ ಕರೆಯ ಮೇರೆಗೆ ನವೆಂಬರ್ 29 ರಂದು ಲೋಕಸಭೆಯ ಚಳಿಗಾಲದ ಅಧಿವೇಶನದ ಆರಂಭದಂದು ಸಂಸತ್ತಿನ ಎದುರು ಹಾಗ ದೇಶಾದ್ಯಂತ ಐ.ಆರ್.ಡಿ.ಎ. ಮಸೂದೆ ಮತ್ತು ಇತರ ಖಾಸಗೀಕರಣದ ಕ್ರಮಗಳಿಗೆ ಪ್ರತಿಭಟನೆಗಳೊಂದಿಗೆ ಈ ಹೋರಾಟ ಆರಂಭವೂ ಆಗಿದೆ.

ಕಠಿಣ ಹೋರಾಟ ಮುಂದಿದೆ

ಮೂರು ದಿನಗಳ ಕಾಲ ಪ್ರಧಾನ ಕಾರ್ಯದರ್ಶಿಗಳ ವರದಿಯ ಮೇಲೆ ಚರ್ಚೆ ನಡೆಸಿದ ಸಿಐಟಿಯು ಕಾರ್ಯಕಾರಿ ಸಮಿತಿ ಕೇಂದ್ರದಲ್ಲಿ ಬಿಜೆಪಿ ನೇತೃತ್ವ ಸರ್ಕಾರದ ವಿನಾಶಕಾರಿ ರಾಷ್ಟ್ರ-ವಿರೋಧಿ ನೀತಿಗಳ ವಿರುದ್ಧ ಜನಗಳ ಐಕ್ಯತೆಯನ್ನೂ ಮುರಿಯುವ ಅವರ ಕೋಮುವಾದಿ ತಂತ್ರಗಳ ವಿರುದ್ಧ ದೇಶವ್ಯಾಪಿ ಐಕ್ಯ ಹೋರಾಟವನ್ನು ಬೆಸೆಯುವ ತುರ್ತು ಅಗತ್ಯವಿದೆ ಎಂಬ ನಿರ್ಧಾರಕ್ಕೆ ಬಂದಿದೆ. ಬಿಜೆಪಿ ಕೂಟ ಮತ್ತು ಕಾಂಗ್ರೆಸ್ 'ಸುಧಾರಣೆಗಳಿಂದ ಹಿಂದೆ ಹೋಗಲು ಸಾಧ್ಯವಿಲ್ಲ'ವೆನ್ನುತ್ತಾ ಅವನ್ನು ಮತ್ತಷ್ಟು ತೀವ್ರಗೊಳಿಸುವಲ್ಲಿ ಪರಸ್ಪರ ಸ್ಪರ್ಧೆಗಿಳಿದಿರುವಾಗ ಕಾರ್ಮಿಕ ವರ್ಗ ಹಾಗೂ ಕಾರ್ಮಿಕ ಆಂದೋಲನ ಜನಸಮೂಹಗಳ ಮುಂದೆ ಈ ವಿನಾಶಕಾರಿ ಉದಾರೀಕರಣ ನೀತಿಗಳಿಗೆ ಪರ್ಯಾಯವನ್ನು ಇಟ್ಟು ಈ ಜನ-ವಿರೋಧಿ ನೀತಿಗಳಿಗೆ ಜನಗಳ ಪ್ರತಿರೋಧವನ್ನು ಕಟ್ಟಿ ಬೆಳೆಸುವುದರ ಅಗತ್ಯ ಈಗ ಬಹಳ ಇದೆ ಎಂಬ ಒಟ್ಟಾಭಿಪ್ರಾಯಕ್ಕೆ ಬರಲಾಯಿತು.

ಆದ್ದರಿಂದ ಎಲ್ಲಾ ಸಿಐಟಿಯು ಘಟಕಗಳು ಖಾಸಗೀಕರಣದ ಹುಚ್ಚು ಆವೇಶ ಮತ್ತಿತರ ಉದಾರೀಕರಣ ನೀತಿಗಳು ಕೋಮುವಾದಿ ಮತ್ತು ವಿಭಜನಕಾರೀ ಕ್ರಮಗಳು ಹಾಗೂ ಕಾರ್ಮಿಕರ ಹಕ್ಕುಗಳ ಮೇಲೆ ನೀತಿಬಾಹಿರ ಧಾಳಿಗಳ ಬಗ್ಗೆ ಕಾರ್ಮಿಕರು ಮತ್ತು ಜನಗಳ ನಡುವೆ ವ್ಯಾಪಕ ಪ್ರಚಾರ ನಡೆಸಿ ಒಂದು ಕಠಿಣವಾದ ಹೋರಾಟಕ್ಕೆ ಸುಜ್ಜುಗೊಳಿಸಬೇಕಾದ್ದು ಈಗಿನ ಪ್ರಥಮ ಕರ್ತವ್ಯ ಎಂದು ಸಿಐಟಿಯು ನ ಈ ಸಭೆ ಕರೆ ನೀಡಿದೆ.

ಜನಗಳ ಐಕ್ಯತೆಯ ರಕ್ಷಣೆ

ತಮ್ಮ ಸೈದ್ಧಾಂತಿಕ ಪಕ್ಷ-ಸಂಬಂಧೀ ಭೇದಭಾವಗಳನ್ನೆಲ್ಲಾ ಬದಿಗಿಟ್ಟು ಎಲ್ಲಾ ಕಾರ್ಮಿಕ ಸಂಘಗಳು ಸರಕಾರದ ತರಾತುರಿಯ ಕ್ರಮಗಳಿಗೆ ಬಲವಾದ ವಿರೋಧವನ್ನು ವ್ಯಕ್ತಪಡಿಸಿರುವುದು ಸಮಾಧಾನಕರ ಸಂಗತಿ. ಬಿ.ಎಂ.ಎಸ್. ಮತ್ತು ಇಂಟಕ್‌ಗೆ ಸೇರಿದ ಸಂಘಟನೆಗಳೂ ವಿರೋಧ ವ್ಯಕ್ತಪಡಿಸಿವೆ. ಕಾರ್ಮಿಕ ವರ್ಗ ತನ್ನ ಈ ವಿರೋಧವನ್ನು ಒಂದು ವ್ಯಾಪಕ ಪ್ರತಿರೋಧ ಹೋರಾಟವಾಗಿ ವಿಸ್ತರಿಸಬೇಕು ಎಂದು ಸಿಐಟಿಯು ಕಾರ್ಯಕಾರೀ ಸಮಿತಿ ಕರೆ ನೀಡಿದೆ. ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳೊಂದಿಗೆ ಹಾಗೂ ಕಲ್ಲಿದ್ದಲು, ಬಂದರು, ಸಾರಿಗೆ, ಸಿಮೆಂಟ್, ಜವಳಿ ಹಾಗೂ ವಿದ್ಯುಚ್ಛಕ್ತಿ ವಲಯಗಳಲ್ಲಿ ಆಗಲೇ ವ್ಯಾಪಕ ಪ್ರಚಾರ-ಪ್ರಕ್ಷೋಭೆಗೆ ಸಿದ್ಧತೆಗಳು ನಡೆಯುತ್ತಿವೆ. ಇವೆಲ್ಲಾ ಒಂದು ಬೃಹತ್ ದೇಶವ್ಯಾಪಿ ಚಳುವಳಿ ಹಾಗೂ ಮುಷ್ಕರ ಕಾರ್ಯಾಚರಣೆಯ ಸ್ವರೂಪ ಪಡೆದುಕೊಳ್ಳಬೇಕು ಎಂದು ಸಿಐಟಿಯು ಕರೆ ನೀಡಿದೆ. ಈ ಚಳುವಳಿಯ ಯಶಸ್ಸಿಗೆ ಕೋಮು ಸೌಹಾರ್ದವನ್ನು ಏನೇ ಬೆಲೆ ತೆತ್ತಾದರೂ ರಕ್ಷಿಸಿಕೊಳ್ಳಬೇಕು, ಏಕೆಂದರೆ ಪ್ರಜಾಪ್ರಭುತ್ವ ಆಂದೋಲನದ ಮುನ್ನಡೆಗೆ ದೇಶದ, ಶ್ರಮಜೀವಿಗಳ ಹಿತಾಸಕ್ತಿಗಳ ರಕ್ಷಣೆಗೆ ಇದು ಅಗತ್ಯ ಎಂದು ಸಿಐಟಿಯು ಕಾರ್ಯಕಾರಿ ಸಮಿತಿ ಒತ್ತಿ ಹೇಳಿದೆ.

ಇಡೀ ಸಾರ್ವಜನಿಕ ವಲಯವನ್ನು ಮಾರಿತಿನ್ನುವ ಹೀನ ಹುನ್ನಾರ

ವಾಜಪೇಯಿ ಸರಕಾರ ದೇಶದ ಇಡೀ ಸಾರ್ವಜನಿಕ ವಲಯವನ್ನು ಮಾರಾಟಕ್ಕೆ ತೆರೆದಿಡಲು ಆತುರದ ಕ್ರಮಗಳನ್ನು ಕೈಗೊಳ್ಳುತ್ತಿದೆ. ಶೇರು ಮಾರಾಟದ ಹೆಸರಲ್ಲಿ ಅದು ಲಾಭ ಮಾಡುತ್ತಿರುವ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳನ್ನು ಕಮ್ಮಿ ಬೆಲೆಯಲ್ಲಿ ಮಾರಾಟ ಮಾಡುತ್ತಾರೆ. ಈ ಮೂಲಕ ಅಪಾರ ರಾಷ್ಟ್ರೀಯ ಸಂಪತ್ತನ್ನು ಖಾಸಗೀ ಮತ್ತು ವಿದೇಶಿ ಕೈಗಳಿಗೆ ಹಸ್ತಾಂತರಿಸುತ್ತಿದೆ. ಇದು ನವೆಂಬರ್ 23 ರಂದು ನಡೆದ ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಸಮಿತಿ CPSTU ಸಭೆಯಲ್ಲಿ ವ್ಯಕ್ತಗೊಂಡ ಅಭಿಪ್ರಾಯ. ವಿಮಾ ಮಸೂದೆಯನ್ನು ಮಂಡಿಸಿ ಕಾಂಗ್ರೆಸ್‌ನ ಶಾಮೀಲಿನೊಂದಿಗೆ ಪಾಸು ಮಾಡಿಸಿಕೊಳ್ಳಲಾಗುತ್ತಿದೆ. ಬ್ಯಾಂಕುಗಳ ಮೇಲೂ ಗುರಿಯಿಡಲಾಗಿದೆ. ಒಟ್ಟಾರೆಯಾಗಿ ಸಾರ್ವಜನಿಕ ವಲಯದ ವಿಸ್ತರಣೆ, ತಾಂತ್ರಿಕ ಸುಧಾರಣೆಯ ಯೋಜನೆಗಳನ್ನೆಲ್ಲಾ ಬುಡಮೇಲು ಮಾಡಿ ಅವುಗಳನ್ನು ದುರ್ಬಲಗೊಳಿಸಿ ಮಾರಿಬಿಡುವ ಸನ್ನಾಹದಲ್ಲಿ ಈ ಸರಕಾರ ಇದೆ.

ರೋಗಗ್ರಸ್ತ ಘಟಕಗಳನ್ನು ಪುನರಜ್ಜೀವನಗೊಳಿಸಲಂತೂ ಈ ಸರಕಾರ ನಿರಾಕರಿಸುತ್ತಿದೆ. 12 ಘಟಕಗಳನ್ನು ಮುಚ್ಚಿಯೇ ಬಿಡುವ ನಿರ್ಧಾರ ಮಾಡಿದೆ. ಬಿ.ಐ.ಎಫ್.ಆರ್.ಗೆ ಕೊಟ್ಟಿರುವ ಮಾತನ್ನು ಉಲ್ಲಂಘಿಸಿದೆ. ಹತ್ತು ವರ್ಷಗಳಿಂದ ವೇತನ ಪರಿಷ್ಕರಣವಾಗಿಲ್ಲ. ಕೆಲವು ಘಟಕಗಳಲ್ಲಿ ಒಂದು ವರ್ಷದಿಂದ ಸಂಬಳವನ್ನೂ ಕೊಟ್ಟಿಲ್ಲ. ಇದರೊಂದಿಗೆ ಈಗ ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗದ ಕಲಾಪಗಳ ಬಗ್ಗೆ ಹೆಚ್ಚಿನ ಕೇಂದ್ರೀಯ ಕಾರ್ಮಿಕ ಸಂಘಗಳ ಆಕ್ಷೇಪಣೆಗಳನ್ನು ನಿರ್ಲಕ್ಷಿಸಿರುವ ಬಗ್ಗೆ ಸಭೆ ತೀವ್ರ ಆತಂಕ ವ್ಯಕ್ತಪಡಿಸಿತು. ಸರಕಾರದ ಉದ್ದೇಶ ಐ.ಎಂ.ಎಫ್.-ವಿಶ್ವಬ್ಯಾಂಕ್ ಬಯಸುವಂತೆ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಿ ಕಾರ್ಮಿಕಕರನ್ನು ಗುಲಾಮರನ್ನಾಗಿಸುವುದು.

ಒಟ್ಟಿನಲ್ಲಿ ಎರಡನೇ ತಲೆಮಾರಿನ ಸುಧಾರಣೆಗಳ ಉದ್ದೇಶ ಸಂಪೂರ್ಣ ಖಾಸಗೀಕರಣ, ವಿದೇಶಿ ಬಂಡವಾಳಕ್ಕೆ ಅನುಕೂಲವಾಗುವಂತೆ ಹಣಕಾಸು ವಲಯದ ಮೇಲಿನ ನಿಯಂತ್ರಣಗಳನ್ನೆಲ್ಲಾ ತೆಗೆಯುವುದು ಹಾಗೂ ಕಾರ್ಮಿಕ ಹಕ್ಕುಗಳ ಧ್ವಂಸ. ಈ ದುಷ್ಟ ಯೋಜನೆಗಳ ವಿರುದ್ಧ ಹೋರಾಡಿ, ಅವನ್ನು ವಿಫಲಗೊಳಿಸಲು ಸಿ.ಪಿ.ಎಸ್.ಟಿ.ಯು. ನಿರ್ಧರಿಸಿದೆ. ನವೆಂಬರ್ 29 ರಂದು ಪ್ರತಿಭಟನಾ ದಿನದಲ್ಲಿ ಪಾಲ್ಗೊಂಡು ನಂತರ ಡಿಸೆಂಬರ್ 17 ರಂದು ಸಂಸತ್ತಿನ ಎದುರು ಸಾರ್ವಜನಿಕ ವಲಯ ಕಾರ್ಮಿಕರ ಬೃಹತ್ ಧರಣಿ ನಡೆಸಲು ಸಮಿತಿ ನಿರ್ಧರಿಸಿತು.

ಜನವರಿ 11, 2000 ರಂದು ನೇರ ಕಾರ್ಯಾಚರಣೆಯ ಒಂದು ದೀರ್ಘ ಸರಣಿಯ ಬಗ್ಗೆ ಸಾರ್ವಜನಿಕ ವಲಯದ ಕಾರ್ಮಿಕರ ಬೆಂಬಲ ಕೇಳಲು ಒಂದು ರಾಷ್ಟ್ರೀಯ ಅಭಿಪ್ರಾಯ ಸಂಗ್ರಹ ನಡೆಸಲೂ ನಿರ್ಧರಿಸಲಾಯಿತು. ಒಂದು ರಾಷ್ಟ್ರೀಯ ಮಟ್ಟದ ಮುಷ್ಕರ ನಡೆಸಲೂ ಕರೆ ನೀಡಲಾಯಿತು.

ಬಹುರಾಷ್ಟ್ರೀಯ ಕಂಪನಿಗಳೆದುರು ಶರಣಾಗುವ ಕೃಷಿ ನೀತಿಗಳಿಗೆ ತೀವ್ರವಿರೋಧ - ಸಂಸತ್ ಚಲೋ

ನವೆಂಬರ್ 23-24 ರಂದು ಸಭೆ ಸೇರಿದ ಅಖಿಲ ಭಾರತ ಕಿಸಾನ್ ಮಂಡಳಿ ಕೇಂದ್ರ ಸರ್ಕಾರದ ಹೊಸ ಕೃಷಿ ನೀತಿಗಳು ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ ಶರಣಾಗುವ ಕ್ರಮಗಳ ವಿರುದ್ಧ ವ್ಯಾಪಕ ಪ್ರಚಾರ-ಪ್ರಕ್ಷೋಭೆ ನಡೆಸಿ ಮಾರ್ಚ್ 2000 ರ ಮೊದಲ ವಾರದಲ್ಲಿ ಒಂದು ಬೃಹತ್ ಸಂಸತ್ ಚಲೋ ನಡೆಸಲು ನಿರ್ಧರಿಸಿದೆ.

ನವ-ಉದಾರವಾದಿ ಜಾಗತೀಕರಣ ಭಾರತೀಯ ಕೃಷಿಗೆ ಒಂದು ಗಂಭೀರ ಬೆದರಿಕೆಯೊಡ್ಡಿದೆ. ಈ ಸವಾಲನ್ನು ಎದುರಿಸಲು ಭಾರತೀಯ ರೈತಾಪಿ ವರ್ಗ-ಎಷ್ಟು ಸಾಧ್ಯವೋ ಅಷ್ಟು ವ್ಯಾಪಕವಾದ ಪ್ರತಿರೋಧವನ್ನು ಕಟ್ಟಿ ಬೆಳೆಸಬೇಕು - ಇದಕ್ಕೆ ಎಲ್ಲಾ ದೇಶಪ್ರೇಮಿ ಶಕ್ತಿಗಳ, ಭಾರತದಲ್ಲೂ ಹಾಗೂ ಹೊರಗೂ ಎಲ್ಲಾ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳ ಜೊತೆಗೆ ಕೈಜೋಡಿಸಬೇಕು ಎಂದು ಎಐಕೆಸಿ ಸಭೆ ಕರೆ ನೀಡಿದೆ. ಅಲ್ಲದೆ ಬುಡಕಟ್ಟು ಜನಗಳು ಹಾಗೂ ಪರಿಶಿಷ್ಟ ಜಾತಿಗಳ ಜನಗಳ ಬೇಡಿಕೆಗಳಿಗಾಗಿ ಮತ್ತು ಸಾಮಾಜಿಕ ಅತ್ಯಾಚಾರಗಳ ವಿರುದ್ಧ ಹೋರಾಟಗಳನ್ನು ನಡೆಸಲು ಸಭೆ ನಿರ್ಧರಿಸಿದೆ.

ಕೃಷಿಯ ಉತ್ಪಾದಕತೆಯನ್ನು ಹೆಚ್ಚಿಸಲು ಸಣ್ಣ ಹಿಡುವಳಿಗಳ ಉತ್ಪಾದಕತೆಯ ಮೇಲೆ ಹೆಚ್ಚಿನ ಒತ್ತು ನೀಡಿ ಅದಕ್ಕೆ ಸೂಕ್ತವಾದ ತಂತ್ರಜ್ಞಾನವನ್ನು ಬೆಳೆಸಬೇಕು ಎಂದೂ ಸಭೆ ಕರೆ ನೀಡಿದೆ. ○

ಒರಿಸ್ಸಾ ಪುನರ್ನಿರ್ಮಾಣ...................

ಪುಟ 7 ರಿಂದ

ಆಹಾರ, 24 ದೊಡ್ಡ ಬಂಡಲ್‌ಗಳಲ್ಲಿ ಬಟ್ಟೆಗಳು, ಔಷಧಿಗಳು ತಲುಪಿದವು.... ಈಗಲೂ ಈ ನೆರವು ಪ.ಬಂಗಾಳ, ಕೇರಳ ಒಳಗೊಂಡು ದೇಶಾದ್ಯಂತದಿಂದ ಹರಿದು ಬರುತ್ತಲೇ ಇದೆ. ಆಂಧ್ರಪ್ರದೇಶ ಮತ್ತು ಪ.ಬಂಗಾಳದ ಸಿಪಿಐ(ಎಂ) ಪಕ್ಷವು - 70 ವೈದ್ಯರುಳ್ಳ 50 ವೈದ್ಯಕೀಯ ತಂಡಗಳನ್ನು ಕಳಿಸಿದ್ದು ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿದಾರೆ. ಈಗಾಗಲೇ 10 ಜಿಲ್ಲೆಗಳ 82 ಸ್ಥಳಗಳಲ್ಲಿ 2 ಲಕ್ಷ ಜನರನ್ನು ನಾವು ಈ ಮೂಲಕ ತಲುಪಿದ್ದೇವೆ.

ನೀವು ಹೇಗೆ ಕೆಲಸ ನಡೆಸುತ್ತಿದ್ದೀರಿ?

ಈ ಚಂಡಮಾರುತ ಬೀಸಿ, ಮಳೆಸುರಿಯಲು ಆರಂಭಿಸುತಿದ್ದಂತೆ ನಾವುಗಳು ಮೂರು ಗುಂಪುಗಳಾಗಿ ಅಕ್ಟೋಬರ್ 30 ರಂದು ಪುರಿ, ಭದ್ರಕ್, ಪರಾದೀಪ್‌ಗಳಲ್ಲಿ ಹೊರಟೆವು. ಎಲ್ಲೆಲ್ಲೂ ನೀರು ತುಂಬಿದ ವಾಹನಗಳು. ಮುಂದೆ ಹೋಗದ ಸ್ಥಿತಿ ಇದ್ದುದರಿಂದ ಮೋಟಾರ್ ವಾಹನದಲ್ಲಿ ಹೊರಟೆವು. ಪರಿಸ್ಥಿತಿ ಅತೀ ಗಂಭೀರ ಇರುವುದನ್ನು ಅರಿತೆವು. ಕೂಡಲೇ ಡಿವೈಎಫ್‌ಐ, ರೈತಸಂಘ, ಮಹಿಳಾ ಸಂಘ, ಎಸ್.ಎಫ್.ಐ ಮತ್ತು ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಆ ಪ್ರದೇಶದಲ್ಲಿ ಜನರ ನೆರವಿಗೆ ಧಾವಿಸಿದರು. ಈಗ ಹಾನಿಗೊಳಗಾದ ಜಿಲ್ಲೆಗಳಲ್ಲಿ ನಮ್ಮ ಸಂಘಟನೆ ಉತ್ತಮವಾಗಿತ್ತು. ಆದರೆ ಎಲ್ಲವೂ ಅಯೋಮಯ...., ನಮ್ಮ ತಂಡಗಳಿಂದ ಮೊದಲು ಜನರನ್ನು ರಕ್ಷಿಸಲು ಪ್ರಯತ್ನ. ನಂತರ ಬದುಕಿ ಉಳಿದವರಿಗೆ ಆಹಾರ ಮತ್ತು ಉಳಿದುಕೊಳ್ಳಲು ವ್ಯವಸ್ಥೆ. ಅಲ್ಲಿ ಉದ್ಭವಿಸಿದ ಕಷ್ಟಗಳು ಒಂದೆರಡಲ್ಲ.... ಆದರೆ ಅವುಗಳನ್ನು ಧೈರ್ಯವಾಗಿ ಎದುರಿಸಿದೆವು. 'ಒರಿಸ್ಸಾ ಪೀಪಲ್ಸ್ ರಿಲೀಫ್ ಕಮಿಟಿ' ರಚಿಸಿ ಅದರ ನೇತೃತ್ವದಲ್ಲಿ ಆಹಾರ ಬೇಯಿಸುವ ಕೇಂದ್ರಗಳು, ಮಕ್ಕಳ ಆಹಾರ ಪೂರೈಕೆಗೆ ವ್ಯವಸ್ಥೆ ಮಾಡಲಾಯಿತು. 82 ಮುಖ್ಯ ಕೇಂದ್ರಗಳೂ, 184 ಉಪಕೇಂದ್ರಗಳೂ ಕಾರ್ಯನಿರ್ವಹಿಸುತ್ತಿವೆ. ನೂರಾರು ಕಾರ್ಯಕರ್ತರು ಅಹೋರಾತ್ರಿ ಶ್ರಮಿಸುತ್ತಿದ್ದಾರೆ. ಡಿವೈಎಫಐ ನಿಂದಲೇ 150 ಜನ 'ಫೀಲ್ಡ್' ನಲ್ಲಿದ್ದಾರೆ. ಈಗಾಗಲೇ ವೈದ್ಯಕೀಯ ತಂಡಗಳು, ಮುರಿತಾಗಿ ವಿವರಿಸಿದ್ದೇನೆ. ಸತ್ತ ಜನ-ದನಗಳ ಹೆಣಗಳನ್ನು ಸುಡುವುದು ಅಥವಾ ಹೂಳುವುದರಲ್ಲಿ ಕಾರ್ಯಕರ್ತರು ಈಗಲೂ ತೊಡಗಿದ್ದಾರೆ. ಇದು ಮುಂದುವರಿಯುವುದರ ಜೊತೆಗೆ ಇದೀಗ ಪೂರ್ತಿ ನಾಶಗೊಂಡಿರುವ ಕೆಲವು ಊರು, ಮನೆ-ಶಾಲೆಗಳನ್ನು ಕಟ್ಟುವಲ್ಲಿ ನಮ್ಮ ಕಾರ್ಯಕರ್ತರು ಮುಂದಾಗಿದ್ದಾರೆ.

ಟಿ.ವಿ. ಪತ್ರಿಕೆಗಳಲ್ಲಿ ರಾರಾಜಿಸುತ್ತಿರುವ

ಸ್ವಘೋಷಿತ ದೇಶಭಕ್ತರು ಏನು ಮಾಡುತ್ತಿದ್ದಾರೆ?

ಓ.... ಖಾಕಿ ಚೆಡ್ಡಿ ಹಾಕಿ ಓಡಾಡುವ ಹಲವಾರು ಆರ್.ಎಸ್.ಎಸ್. ಕಾರ್ಯಕರ್ತರನ್ನು ಅಲ್ಲಲ್ಲಿ ಕಾಣಬಹುದು. ತಪ್ಪದೇ ಸೀಟಿ ಊದುತ್ತಾರೆ. ಕೋಲು ಬಡಿಯುತ್ತಾರೆ. ಪರಿಹಾರಾತ್ಮಕ ಕೆಲಸಗಳು ಹೇಳಿಕೊಳ್ಳುವಷ್ಟು ಇಲ್ಲ. ಸುದ್ದಿ ಬರುತ್ತಿರುವುದೆಲ್ಲಾ ಬರಿ ಪ್ರಚಾರ... ಆರ್.ಎಸ್.ಎಸ್. ಕಾರ್ಯಕರ್ತರು, ಸರ್ಕಾರದ ಆಫೀಸಿನಲ್ಲಿ ಕುಳಿತಿರುತ್ತಾರೆ. ಜನರು ಕಷ್ಟ ಹೇಳಿಕೊಳ್ಳಲು ಬಂದಾಗ ಅಧಿಕಾರಿ ಆರ್‌ಎಸ್‌ಎಸ್. ಕಾರ್ಯಕರ್ತರನ್ನು ಅವರೊಂದಿಗೆ ಕಳಿಸುತ್ತಾರೆ.

ಸಮಯ ಸರಿಯುತ್ತಿತ್ತು. ದೆಹಲಿಯಿಂದ ಭುವನೇಶ್ವರದತ್ತ ಹೊರಡಲು ಶಿಶಿರ್ ಮತ್ತು ಯುದಿಷ್ಟಿರ ಸಿದ್ಧರಾಗಿದ್ದರು. ನಮ್ಮ ಮಾತುಕತೆಗಳಿಗೆ ವಿದಾಯಹೇಳಲು ಎದ್ದು ನಿಂತು 'ಇದೆಲ್ಲದರ ಒಟ್ಟು ಪರಿಣಾಮ ಮುಂದೇನು?' ಎಂದೆ.... ಈಗ ನಾಶಗೊಂಡಿರುವ ಎಲ್ಲವನ್ನು ಪುನರ್ ನಿರ್ಮಿಸಬೇಕು, ಕನಿಷ್ಟ ಸೌಲಭ್ಯಗಳನ್ನು, ಕಲ್ಪಿಸಿ ಸ್ಥಿತಿ ಸುಧಾರಿಸಲು ಒಂದು ವರುಷವಾದರೂ ಸಾಕಾಗದು. ಸಾಂಕ್ರಾಮಿಕ ರೋಗಗಳ ತಡೆ ಇನ್ನೊಂದು ಸವಾಲು. ನಮ್ಮ ಹೊಲಗದ್ದೆಗಳು ಸಮುದ್ರದ ನೀರು ತುಂಬಿದ್ದರಿಂದ ಈಗ ಉಪ್ಪಡಿಸಿಹೋಗಿದೆ. ಅದನ್ನು ಶುಚಿಗೊಳಿಸದೇ ಬೆಳೆ ಬೆಳೆಯುವುದು ಅಸಾಧ್ಯ. ಇದಕ್ಕಿಂತಲೂ ಮುಂದಿನ ಪರಿಸರಾತ್ಮಕ, ಸಾಮಾಜಿಕ ಸಮಸ್ಯೆಗಳನ್ನು ನೆನೆದರೆ ಭಯವಾಗುತ್ತದೆ. ಹಸಿರು, ಗಿಡಮರಗಳು ನಾಶವಾಗಿರುವುದರಿಂದ ಪರಿಸರದಲ್ಲಿ ಉಷ್ಣತೆ ವಿಪರೀತ ಹೆಚ್ಚಲಿದೆ. ಈಗಾಗಲೇ ಬೋಳಾಗಿರುವ ಭುವನೇಶ್ವರದಲ್ಲಿ ಅಸಾಧ್ಯವಾದ ಬಿಸಿಲು ಧಗೆ ಕಾಣಿಸಿಕೊಂಡಿದೆ. ಗಿಡಮರ ಬೆಳೆಯಲು ಏನಿಲ್ಲವೆಂದರೂ 5 ರಿಂದ 10 ವರ್ಷಗಳಾದರೂ ಬೇಕು. ಇನ್ನೊಂದೆಡೆ ಎಲ್ಲವನ್ನೂ, ಎಲ್ಲರನ್ನೂ ಕಳೆದುಕೊಂಡು ಕೈಗಾರಿಕೆಗಳು ನಾಶವಾಗಿ, ಉದ್ಯೋಗ ಇಲ್ಲದೆ ಉಂಟಾಗುವ ಕ್ಷೋಭೆ. ಅದರಿಂದ ಹೆಚ್ಚಬಹುದಾದ ಕಳ್ಳತನ, ದರೋಡೆ ಮುಂತಾದ ಕ್ರಿಮಿನಲ್ ಪಿಡುಗು. ಸಾಮಾಜಿಕ ಸಂಘರ್ಷಗಳು ಇನ್ನೂ ಭಯಂಕರವೆಂದರೆ ಅನಾಥರಾದ ಮಕ್ಕಳು, ಮಹಿಳೆಯರು..... ಹೆಚ್ಚಬಹುದಾದ ವೇಶ್ಯಾ ವೃತ್ತಿಯಂತಹ ಪಿಡುಗುಗಳು... ಇವೆಲ್ಲವನ್ನು ಸೀಮಿತಕ್ಕೆ ತರಬೇಕೆಂದರೆ.. ಅದೊಂದು ದೊಡ್ಡ ಸವಾಲು. ಇದು ಒರಿಸ್ಸಾದ ಜನತೆಗೆ ಮತ್ತು ದೇಶದ ಜನತೆಗೂ ಕೂಡಾ ..... ಇದನ್ನು ಎದುರಿಸಲೇಬೇಕು. ಹೇಳಹೇಳುತ್ತಾ ಸಂಗಾತಿಗಳ ಕಾಲುಗಳು ಚಲಿಸತೊಡಗಿದವು. ಒರಿಸ್ಸಾದಲ್ಲಿ ಮಾಡಬೇಕಾದ ಕರ್ತವ್ಯಗಳನ್ನು ನೆನೆದು ಲಗೇಜ್ ಹೆಗಲಿಗೇರಿಸಿ ಸಂಗಾತಿಗಳು ಹೆಜ್ಜೆ ಹಾಕತೊಡಗಿದರು. ಭಗ್ನಗೊಂಡ ಒರಿಸ್ಸಾ, ಇನ್ನೂ ಬದುಕಲು ಹೋರಾಡುತ್ತಿರುವ ಜನತೆ ಕರೆಯುತ್ತಿದ್ದರು.... ನಮ್ಮ ನಿಮ್ಮನ್ನು ಸಹ. ○

ಕೊರಿಯಾ ಕಾರ್ಮಿಕ ಒಕ್ಕೂಟಕ್ಕೆ ಕೊನೆಗೂ ಮಾನ್ಯತೆ

ದಕ್ಷಿಣ ಕೋರಿಯಾದ ಕಾರ್ಮಿಕರ ದೀರ್ಘ ಹೋರಾಟದ ಫಲವಾಗಿ ಕೊರಿಯಾ ಕಾರ್ಮಿಕ ಸಂಘಗಳ ಒಕ್ಕೂಟ (ಕೆ.ಸಿ.ಟಿ.ಯು) ಕ್ಕೆ ಅಲ್ಲಿಯ ಸರಕಾರ ಕಾನೂನು ಮಾನ್ಯತೆ ನೀಡಬೇಕಾಗಿ ಬಂದಿದೆ. ದಕ್ಷಿಣ ಕೊರಿಯಾ ನಮ್ಮ ಬಂಡವಾಳಶಾಹಿಗಳ, ಆಳರಸರಿಗೆ 'ಮಾದರಿ' ದೇಶ. ಬಹುಶಃ ಅಲ್ಲಿ 1970 ರ ದಶಕದವರೆಗೂ ಪ್ರಜಾಸತ್ತಾತ್ಮಕ ಕಾರ್ಮಿಕ ಆಂದೋಲನಕ್ಕೆ ಅವಕಾಶವಿರಲಿಲ್ಲ ಎಂಬುದೂ ಇದಕ್ಕೆ ಒಂದುಕಾರಣವಾಗಿರಬಹುದು. ಈಗ ನಮ್ಮ ಆಳರಸರು ಇಲ್ಲಿಯ ಕಾರ್ಮಿಕ ಆಂದೋಲನದ ಮೇಲೆ ಹೊಸ-ಹೊಸ ಧಾಳಿಗಳನ್ನು ರೂಪಿಸಿ ದಕ್ಷಿಣಕೊರಿಯದ 'ಮಾದರಿ' ಅನುಸರಿಸುತ್ತಿರುವಾಗ ಅಲ್ಲಿ ನಾಲ್ಕು ವರ್ಷಗಳ ಹಿಂದೆ ಜನ್ಮತಾಳಿದ ಕೆ.ಸಿ.ಟಿ.ಯು.ಗೆ ಅಲ್ಲಿಯ ಸರಕಾರ ಕಾನೂನು ಮಾನ್ಯತೆ ನೀಡುವಂತಹ ಸನ್ನಿವೇಶ ಉಂಟಾಗಿದೆ.



ನವೆಂಬರ್ 1970 ರಲ್ಲೇ ಕಾರ್ಮಿಕ ಆಂದೋಲನ ದಕ್ಷಿಣ ಕೊರಿಯಾದ ಸಮಾಜದಲ್ಲಿ ಒಂದು ಹೊಸ ಶಕ್ತಿಯಾಗಿ ಮೂಡಿ ಬಂದರೂ 1987 ರಲ್ಲಿ ಸ್ಫೋಟಗೊಂಡ ಬೃಹತ್ ಕಾರ್ಮಿಕ ಹೋರಾಟಗಳ ಪರಿಣಾಮ 8 ವರ್ಷಗಳ ನಂತರ ನವೆಂಬರ್ 11, 1995 ರಲ್ಲಿ ಕೊರಿಯಾ ಕಾರ್ಮಿಕ ಸಂಘಗಳ ಒಕ್ಕೂಟ ಕೆ.ಸಿಟಿ.ಯು. ಸ್ಥಾಪನೆಗೊಂಡಿತು. ಡಿಸೆಂಬರ್ 1996 ರಿಂದ ಜನವರಿ 1997 ರ ವರೆಗೆ ಈ ಸಂಘಟನೆಯ ನೇತೃತ್ವದಲ್ಲಿ ನಡೆದ ಬೃಹತ್ ಸಾರ್ವತ್ರಿಕ ಮುಷ್ಕರದಿಂದಾಗಿ ಈ ಸಂಘಟನೆ ಒಂದು ರಾಷ್ಟ್ರೀಯ ಶಕ್ತಿಯಾಗಿ ಬೆಳೆಯಿತು. ಆದರೆ ಅಲ್ಲಿಯ ಸರಕಾರಗಳು ಇದನ್ನು ಒಪ್ಪಲಿಲ್ಲ. ಈ ಹೊಸ ಸಂಘಟನೆಯನ್ನು ದಮನ ಮಾಡಲು ಸರ್ವಪ್ರಯತ್ನ ನಡೆಸಿದವು. ಆ ಎಲ್ಲಾ ಪ್ರಯತ್ನಗಳು ಈಗ ವಿಫಲವಾಗಿವೆ:

ಕೊನೆಗೂ ಕೆ.ಸಿ.ಟಿ.ಯು. ಗೆ ಸರಕಾರದ 'ಮಾನ್ಯತೆ' ಯ ಸುದ್ದಿ ಬಂದ ಕೂಡಲೇ ಈ ಸಂಘಟನೆಯ ನಾಯಕತ್ವ ಮೋರಾನ್ ಪಾರ್ಕ್‌ಗೆ ತೆರಳಿ ಈ ಕಾರ್ಮಿಕ ಆಂದೋಲನವನ್ನು ತಮ್ಮ ರಕ್ತ ಚೆಲ್ಲಿ ಬೆಳೆಸಿದ ಹುತಾತ್ಮರನ್ನು ನೆನಸಿಕೊಂಡರು. ಅಲ್ಲಿ 29 ವರ್ಷಗಳ ಹಿಂದೆ ನವೆಂಬರ್ 13, 1970 ರಂದು ತನ್ನನ್ನು ಅಗ್ನಿಗಾಹುತಿ ಮಾಡಿಕೊಂಡು ದಕ್ಷಿಣ ಕೊರಿಯಾದ ಕಾರ್ಮಿಕರಲ್ಲಿ ಹೋರಾಟದ ಜ್ವಾಲೆಯುನ್ನು ಹೊತ್ತಿಸಿದ ಚುನ್-ತೇ-ಇಲ್ ಮತ್ತಿತರ ಹುತಾತ್ಮರ ಸಮಾಧಿಗಳಿವೆ. ಈ ದೀರ್ಘ ಹೋರಾಟದಲ್ಲಿ 3000 ಕ್ಕೂ ಹೆಚ್ಚು ಕಾರ್ಮಿಕರು ಜೈಲುವಾಸ ಅನುಭವಿಸಿದರು. ಹಲವರು ಪ್ರಾಣತೆತ್ತರು.

ಕಾನೂನಿನ ಮಾನ್ಯತೆ ದೊರೆತ ಸುದ್ದಿಯನ್ನು ಪ್ರಕಟಿಸಿದ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ಒಕ್ಕೂಟದ ಅಧ್ಯಕ್ಷ ದಾನ್-ಬ್ಯಾಂಗ್-ಹೊ ಹಲವು ಪಥಪ್ರದರ್ಶಕರು ತಮ್ಮ ಬಲಿದಾನ ಕೊಟ್ಟು ಜೀವಂತವಾಗಿಟ್ಟ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಹೋರಾಟದ ನೀತಿಗಳು ಮತ್ತು ಇವುಗಳ ನೈತಿಕ ಬಲದ ತಳಹದಿಯ ಮೇಲೆ ಪ್ರಜಾಸತ್ತಾತ್ಮಕ ಕಾರ್ಮಿಕ ಆಂದೋಲನದ ಕನಸುಗಳನ್ನು ಈಡೇರಿಸಿಕೊಳ್ಳಲು ಅವಕಾಶಗಳು ವಿಸ್ತಾರಗೊಂಡ ಸನ್ನಿವೇಶದಲ್ಲಿ ಹೋರಾಟವನ್ನು ನಾವು ಮುಂದುವರಿಸುತ್ತೇವೆ ಎಂದು ಸಾರಿದರು.

ಮಾನ್ಯತೆಗೆ ಅಡಚಣೆ

ಮೂರು ಬಾರಿ ಮಾನ್ಯತೆಯ ಅರ್ಜಿಯನ್ನು ತಿರಸ್ಕರಿಸಿದ ಮೇಲೆ ನಾಲ್ಕನೇ ಬಾರಿಯ ಅರ್ಜಿಯನ್ನು ಸರ್ಕಾರ ಸ್ವೀಕರಿಸಲೇಬೇಕಾದ ಪರಿಸ್ಥಿತಿಯಲ್ಲಿ ಕೆ.ಸಿ.ಟಿ.ಯು. ಈ ಮಾನ್ಯತೆಯನ್ನು ಸಾಧಿಸಿದೆ. ದಕ್ಷಿಣ ಕೊರಿಯಾದ ಕಾನೂನಿನ ಪ್ರಕಾರ ಯಾವುದೇ ಕಾರ್ಮಿಕ ಸಂಘ ಮಾನ್ಯತೆ ಪಡೆಯಲು ಅರ್ಜಿ ಹಾಕಬೇಕು. ಕೆ.ಸಿ.ಟಿ.ಯು ಮೊದಲನೇ ಸಲ ಅರ್ಜಿ ಹಾಕಿದಾಗ ವಜಾ ಆದ ಕಾರ್ಮಿಕರು ಚುನಾಯಿತ ಮುಖಂಡತ್ವದಲ್ಲಿ ಇರಬಾರದು ಮತ್ತು ನಿರ್ಭಂಧಕ ಸಂಘಗಳನ್ನು ಒಳಗೊಂಡಿರಬಾರದು ಎಂಬ ಕಾರಣ ಕೊಟ್ಟು ಅರ್ಜಿಯನ್ನು ತಿರಸ್ಕರಿಸಲಾಯಿತು. ಹಿಂದೆ ನಿಷೇಧಿಸಲ್ಪಟ್ಟಿದ್ದ ಅಧ್ಯಾಪಕರ ಸಂಘದ ಮೇಲಿನ ನಿಷೇಧ ತೆಗೆದ ನಂತರ ಮತ್ತೆ ಅರ್ಜಿ ಸಲ್ಲಿಸಿದಾಗ 'ವಜಾ ಆದವರು ಮುಖಂಡತ್ವದಲ್ಲಿ ಇದ್ದಾರೆ' ಎಂಬ ಕಾರಣ ಕೊಟ್ಟು ಮತ್ತೆ ಅರ್ಜಿತಿರಸ್ಕರಿಸಲ್ಪಟ್ಟಿತು ನವೆಂಬರ್ 12 ಕೆ.ಸಿ.ಟಿ.ಯು. ನ ಸ್ಥಾಪನೆಯ ನಾಲ್ಕನೇ ವಾರ್ಷಿಕೋತ್ಸವವನ್ನು ಆಚರಿಸಿದ ನಂತರ ಮತ್ತೆ ಅರ್ಜಿ ಸಲ್ಲಿಸಲಾಯಿತು. ಈ ಬಾರಿ ಅರ್ಜಿಯಲ್ಲಿ ಕೇವಲ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಯ ಹೆಸರು, ವಿಳಾಸಗಳನ್ನು ಮಾತ್ರ ನಮೂದಿಸಲಾಯಿತು. ದಕ್ಷಿಣ ಕೋರಿಯಾದ ಕಾರ್ಮಿಕ ಮಂತ್ರಾಲಯ ಆ ಅರ್ಜಿಯನ್ನು ಹಿಂದಕ್ಕೆ ಕಳಿಸಿ, ಎಲ್ಲಾ ಪದಾಧಿಕಾರಿಗಳ ವಿವರ ಕೇಳಿತು. ಮತ್ತೊಮ್ಮೆ ಅರ್ಜಿಯನ್ನು ತಿರಸ್ಕರಿಸಲು ನೆಪವೇ ಎಂಬ ಪ್ರಶ್ನೆ ಬಂತು - ಆದರೂ ಕೆ.ಸಿ.ಟಿ.ಯು. ಎಲ್ಲಾ ಪದಾಧಿಕಾರಿಗಳ ವಿವರಗಳನ್ನು ಸಲ್ಲಿಸಿತು. ಇದರಲ್ಲಿ ಒಕ್ಕೂಟದ ಉಪಾಧ್ಯಕ್ಷರಾಗಿರುವ ಹಾಗೂ ವಜಾ ಆದ ಕಾರ್ಮಿಕ ಯೂ ಡಕ್-ಸಾಂಗ್‌ರ ಹೆಸರೂ ಇತ್ತು. ಇವರು ವಜಾ ಆಗವ ಮೊದಲು ಕೊರಿಯಾ ದೂರಸಂಪರ್ಕ ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದವರು.

ಈ ನಡುವೆ ಕಾರ್ಮಿಕ ಕಾನೂನುಗಳನ್ನು ಬದಲಾಯಿಸಲು ಕೆ.ಸಿ.ಟಿ.ಯು. ನೇತೃತ್ವದಲ್ಲಿ ದೊಡ್ಡ ಹೋರಾಟಗಳೇ ನಡೆದವು. ಹಲವರು ವಜಾ ಆದರು, ಜೈಲುವಾಸ ಅನುಭವಿಸಿದರು. ಇದಕ್ಕೆ ಅಂತರ್ರಾಷ್ಟ್ರೀಯ ಕಾರ್ಮಿಕ ಆಂದೋಲನ ಕೂಡಾ ಸೌಹಾರ್ದ ವ್ಯಕ್ತಪಡಿಸಿತು.

ನವೆಂಬರ್ 19 ರಂದು ನಾಲ್ಕನೇ ಬಾರಿ ಅರ್ಜಿ ಸಲ್ಲಿಸಿದ ನಂತರ ಇದನ್ನೇನಾದರೂ ತಿರಸ್ಕರಿಸಿದರೆ ಕೆ.ಸಿ.ಟಿ.ಯು. ಮತ್ತು ಸರಕಾರದ ನಡುವಿನ ಎಲ್ಲಾ ಅಧಿಕೃತ ಸಂಬಂಧಗಳು ಕಳಚಿಹೋಗುತ್ತವೆ ಎಂದು ಸಂಘ ಎಚ್ಚರಿಸಿತು. ಅರ್ಜಿಯನ್ನು ತಿರಸ್ಕರಿಸಿದರೆ ಉಂಟಾಗಬಹುದಾದ ರಾಜಕೀಯ ಒತ್ತಡವನ್ನು ಎದುರಿಸುವ ಸಾಮರ್ಥ್ಯವಿಲ್ಲದ ದಕ್ಷಿಣ ಕೊರಿಯಾ ಸರಕಾರದ ಕಾರ್ಮಿಕ ಇಲಾಖೆ ನವೆಂಬರ್ 23, 1999 ರಂದು ಕೊನೆಗೂ ಎಚ್ಚೆತ್ತು ಕೆ.ಸಿ.ಟಿ.ಯು. ನ ಅಸ್ತಿತ್ವವನ್ನು, ಆ ಮೂಲಕ ದಕ್ಷಿಣ ಕೊರಿಯಾ ಸಮಾಜದಲ್ಲಿನ ಈ ವಾಸ್ತವತೆಯನ್ನು ಮಾನ್ಯ ಮಾಡಲೇಬೇಕಾಯಿತು. ಉಪಾಧ್ಯಕ್ಷ ಯೂ ಡಕ್-ಸಾನ್ ಚುನಾವಣೆಯ ವೇಳೆಗೆ ಕಾರ್ಮಿಕ ಸಂಘದ ಸದಸ್ಯರಾಗಿದ್ದುದರಿಂದ (ಆಗ ಅವರು ವಜಾ ಆಗಿರಲಿಲ್ಲ) ಅರ್ಜಿಯನ್ನು ಸ್ವೀಕರಿಸಲಾಗಿದೆ ಎಂದು ತನ್ನ ಮುಖವುಳಿಸಿಕೊಳ್ಳಲು ಸರಕಾರ ವಿವರಣೆ ನೀಡಿತು.

ಮುಂದೇನು?

ಕೆ.ಸಿ.ಟಿ.ಯು. ಗೆ ಈ ಮಾನ್ಯತೆ ದೊರೆತರೂ ಸಂಘ ಕಟ್ಟಿಕೊಳ್ಳುವ ಮೂಲಭೂತ ಹಕ್ಕಿಗೆ ಇನ್ನೂ ಕೊರಿಯಾದಲ್ಲಿ ಮಾನ್ಯತೆ ದೊರತಿಲ್ಲ. ಸುಮಾರು 10 ಲಕ್ಷ ಸರ್ಕಾರಿ ನೌಕರರಿಗೆ ಇನ್ನೂ ಈ ಹಕ್ಕು ದೊರೆತಿಲ್ಲ. ಇದಕ್ಕಾಗಿ ಹೋರಾಟ ಮುಂದುವರೆಸಲು ಕೆ.ಸಿ.ಟಿ.ಯು. ನಿರ್ಧರಿಸಿದೆ. ಅದು ಈಗಾಗಲೇ ಈ ಬಗ್ಗೆ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐ.ಎಲ್.ಓ) ಗೆ ದೂರು ಸಲ್ಲಿಸಿದೆ.

ಇಷ್ಟೇ ಅಲ್ಲ, ಇನ್ನೂ ಲಕ್ಷಾಂತರ ಕಾರ್ಮಿಕರು ಕಾರ್ಮಿಕ ಸಂಘ ಕಟ್ಟಿಕೊಳ್ಳಲಾಗದ ಸ್ಥಿತಿಯಲ್ಲಿದ್ದಾರೆ. ನಮ್ಮ ಆಳರಸರ ಈ 'ಮಾದರಿ' ಆರ್ಥಿಕದಲ್ಲಿ 50%ಕ್ಕೂ ಹ ಹೆಚ್ಚು ಕಾರ್ಮಿಕರು 'ಅನಿಯಮಿತ' ಎನಿಸಿಕೊಳ್ಳುವ ಉದ್ದಿಮೆಗಳ ಕಾರ್ಮಿಕರು. ಕಾರ್ಮಿಕ ಕಾನೂನುಗಳ ವ್ಯಾಪ್ತಿಯ ಹೊರಗೆ ಇರುವವರು. ಇವರಲ್ಲಿ 70% ಮಹಿಳಾ ಕಾರ್ಮಿಕರು. ಕೆ.ಸಿ.ಟಿ.ಯು. ತನಗೆ ಈಗ ದೊರೆತಿರುವ ಮಾನ್ಯತೆಯನ್ನು ಬಳಸಿಕೊಂಡು ಈ ಎಲ್ಲಾ ಕಾರ್ಮಿಕರನ್ನು ತನ್ನ ಸಂಘಟನೆಯಲ್ಲಿ ಬಳಸಿಕೊಳ್ಳಲು ನಿರ್ಧರಿಸಿದೆ. ಮುಂದಿನ ವರ್ಷ ಅಂದರೆ 2000 ಇಸ್ವಿಯನ್ನು ವಾರದ ಕೆಲಸದ ಅವಧಿಯನ್ನು 40 ಗಂಟೆಗಿಳಿಸುವ ವರ್ಷ ಎಂದು ಆಚರಿಸಲು ಅದು ನಿರ್ಧರಿಸಿದೆ. ಇನ್ನೊಂದು ಅದರ ನಿರ್ಧಾರವೆಂದರೆ ಈಗ ಕಂಪನಿ ಮಟ್ಟದಲ್ಲಿರುವ ಸಂಘಗಳ ಬದಲು ಉದ್ದಿಮೆ ಮಟ್ಟದ ಸಂಘಗಳನ್ನು ರಚಿಸುವುದು. ಕೆ.ಸಿ.ಟಿ.ಯು. ದಕ್ಷಿಣ ಕೊರಿಯಾ ಸಮಾಜದಲ್ಲಿ ಇನ್ನು ಮುಂದೆ ವಹಿಸಲಿರುವ ಪಾತ್ರದಲ್ಲೂ ಅಂತರ್ರಾಷ್ಟ್ರೀಯ ಕಾರ್ಮಿಕ ಆಂದೋಲನದ ಸೌಹಾರ್ದ, ನೆರವು ಕೇಳುತ್ತಾ ಕೆ.ಸಿ.ಟಿ.ಯು. ಅಧ್ಯಕ್ಷರು 'ಬದಲಾವಣೆಗೆ ದಾರಿ ಮಾಡಿಕೊಡುವ ಒಂದು ಪರ್ಯಾಯ ಬಲಿಷ್ಟ ಶಕ್ತಿಯಾಗಿ ಬೆಳೆಯುವ ನಮ್ಮ ಪ್ರಯತ್ನಗಳಲ್ಲಿ, ಹೋರಾಟಗಳಲ್ಲಿ ನಿಮ್ಮ ಬೆಂಬಲ ಬೇಕು' ಎಂದು ಪತ್ರಿಕಾ ಸಮ್ಮೇಳನದಲ್ಲಿ ತಮ್ಮ ಭಾಷಣ ಮುಕ್ತಾಯಗೊಳಿಸಿದರು.

ಇದು ನಿಮಗೆ ಗೊತ್ತೆ?

ಜಗತ್ತಿನಲ್ಲಿ ಅತಿ ಅವಶ್ಯಕವಾಗಿರುವ ಮೂಲಭೂತ ಶಿಕ್ಷಣಕ್ಕೆ ಖರ್ಚು ಮಾಡುವ ಹಣವೆಷ್ಟು ಗೊತ್ತೆ? ಕೇವಲ 6 ಬಿಲಿಯನ್ ಡಾಲರ್ ಮಾತ್ರ! ಇದನ್ನು ನೀವು ನಂಬದೆ ಇರಬಹುದು. ಆದರೆ ಇದು ಸತ್ಯ.

ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿಯ 1998 ರ ವರದಿ ಈ ಬಗ್ಗೆ ಬೆಳಕು ಚೆಲ್ಲಿದೆ. ಈ ವರದಿಯೇ ಹೇಳುವಂತೆ ವಿಶ್ವದಲ್ಲಿ ಯಾವ್ಯಾವದಕ್ಕೆ ಎಷ್ಟೆಷ್ಟು ವಾರ್ಷಿಕ ಹಣ ಖರ್ಚು ಮಾಡಲಾಗುತ್ತಿದೆ ಎಂಬುದನ್ನು ಗಮನಿಸಿ

ಜಗತ್ತಿನಲ್ಲಿ ತೀರ ಅನವಶ್ಯಕವಾಗಿರುವ ಮತ್ತು ಮಾನವ ಅಭಿವೃದ್ಧಿಗೆ ಮಾರಕವಾಗಿರುವ 'ಮಿಲಿಟರಿ'ಗೆ ಮಾಡುವ ವಾರ್ಷಿಕ ಖರ್ಚು 780 ಬಿಲಿಯನ್ ಡಾಲರ್ - (1 ಬಿಲಿಯನ್ - 1 ಸಾವಿರ ಮಿಲಿಯನ್ ಅಥವಾ ಒಂದು ನೂರು ಕೋಟಿ). ಅಂದರೆ ಡಾಲರ್ ಲೆಕ್ಕದಲ್ಲಿ ಎಪ್ಪತ್ತೆಂಟು ಸಾವಿರ ಕೋಟಿ ಡಾಲರ್, ಇದನ್ನೇ ರೂಪಾಯಿ ಬೆಲೆಯಲ್ಲಿ ಲೆಕ್ಕ ಹಾಕಿದಾಗ 32 ಲಕ್ಷದ 77 ಸಾವಿರ ಕೋಟಿ ರೂಪಾಯಿ ಆಗುತ್ತದೆ.

ವಿಪರ್ಯಾಸದ ಸಂಗತಿ ಮತ್ತು ನೋವಿನ ವಿಷಯವೆಂದರೆ ಜಗತ್ತಿನಲ್ಲಿ ತೀರ ಎಲ್ಲರಿಗೂ ಮೂಲಭೂತ ಅವಶ್ಯಕತೆ ಎನಿಸಿರುವ 'ಶಿಕ್ಷಣಕ್ಕೆ' ಒಟ್ಟಾರೆ ಮಾಡುತ್ತಿರುವ ಖರ್ಚು ಕೇವಲ 6 ಬಿಲಿಯನ್ ಡಾಲರ್, ಡಾಲರ್ ಲೆಕ್ಕದಲ್ಲಿ ಕೇವಲ ಆರು ಸಾವಿರ ಕೋಟಿ ಡಾಲರ್ ಮಾತ್ರ! ರೂಪಾಯಿಗೆ ಪರಿವರ್ತಿಸಿದರೆ ಕೇವಲ ಇಪ್ಪತ್ತೈದು ಸಾವಿರದ ಇನ್ನೂರು ಕೋಟಿ ರೂಪಾಯಿ ಮಾತ್ರ. ಅಂದರೆ ಜಗತ್ತಿನಲ್ಲಿ ಶಿಕ್ಷಣಕ್ಕೆ ಖರ್ಚು ಮಾಡುವ ಹಣಕ್ಕಿಂತ 130 ಪಟ್ಟು ಅಧಿಕ ಹಣವನ್ನು ಕೇವಲ ಮಿಲಿಟರಿಗಾಗಿಯೇ ಖರ್ಚು ಮಾಡಲಾಗುತ್ತಿದೆ ಎಂದು ವರದಿ ತಿಳಿಸಿದೆ.

ಇದರೊಂದಿಗೆ ಇನ್ನೊಂದು ಅಂಶವೆಂದರೆ, ವಿಶ್ವದ ಜನತೆಗೆ ಜೀವನಾವಶ್ಯಕ್ಕೆ ಅವಶ್ಯಕವಿರುವ ಕುಡಿಯುವ ನೀರು ಮತ್ತು ಒಳಚರಂಡಿ ಯೋಜನೆಗೆ 'ಅಭಿವೃದ್ಧಿ ಶೀಲ ರಾಷ್ಟ್ರಗಳು ಖರ್ಚು ಮಾಡುತ್ತಿರುವುದು ಕೇವಲ 9 ಬಿಲಿಯನ್ ಡಾಲರ್ ಮಾತ್ರ (900 ಕೋಟಿ ಡಾಲರ್, ರೂ. ಲೆಕ್ಕದಲ್ಲಿ 37 ಸಾವಿರದ ಎಂಟು ನೂರು ಕೋಟಿ) ಎಂದು ವರದಿ ತಿಳಿಸಿದೆ.

ಸುಮಾರು ಆರುನೂರು ಕೋಟಿಯಷ್ಟು ಜನಸಂಖ್ಯೆಯ ಜಗತ್ತಿಗೆ ಶಿಕ್ಷಣ ಮತ್ತು ಕುಡಿಯುವ ನೀರಿಗಾಗಿ, ವಿನಿಯೋಗಿಸುತ್ತಿರುವುದು ಕೇವಲ, 15 ಬಿಲಿಯನ್ ಡಾಲರ್ ಆದರೆ, ಕೇವಲ ಹತ್ತಾರು ಕೋಟಿ ಜನಸಂಖ್ಯೆಗಳನ್ನು ಹೊಂದಿರುವ, ಜಪಾನ್ ಮತ್ತು ಯುರೋಪ್ ರಾಷ್ಟ್ರಗಳು, ಆಲ್ಕೋಹಾಲ್(ಕುಡಿತ) ಮಾದಕ ಪದಾರ್ಥಗಳಿಗೆ (ಡ್ರಗ್ಸ್ ಇತ್ಯಾದಿ) ಸಿಗರೇಟು ಮತ್ತು ಮೋಜಿಗಾಗಿ ಖರ್ಚು ಮಾಡುತ್ತಿರುವ ಹಣ ಬಂಡವಾಳಶಾಹಿ ಜಗತ್ತಿನ ಸಾಮಾಜಿಕ- ಆರ್ಥಿಕ ಸ್ಥಿತಿಯ ಅಸಮಾನತೆಯನ್ನು ಪ್ರತಿಬಿಂಬಿಸುತ್ತಿದೆ.

- ಯುರೋಪ್‌ನಲ್ಲಿ ಕೇವಲ ಐಸ್‌ಕ್ರೀಂ ತಿನ್ನಲಿಕ್ಕೆ ವಿನಿಯೋಗಿಸುವ ಹಣ ವರ್ಷಕ್ಕೆ 11 ಬಿಲಿಯನ್ ಡಾಲರ್ (1100 ಕೋಟಿ ಡಾಲರ್)!
- ಸಿಗರೇಟಿಗೆ ಖರ್ಚು ಮಾಡುತ್ತಿರುವುದು - 50 ಬಿಲಿಯನ್ ಡಾಲರ್(5000 ಕೋಟಿ ಡಾಲರ್)
- ಮಾದಕ ಪಾನೀಯಗಳ ಕುಡಿತಕ್ಕೆ ಖರ್ಚು ಮಾಡುತ್ತಿರುವುದು 0 105 ಬಿಲಿಯನ್ ಡಾಲರ್(10,500 ಕೋಟಿ ಡಾಲರ್)
- ನಾರ್ಕೋಟಿಕ್ಸ್ ಡ್ರಗ್ಸ್ (ಜಗತ್ತಿನಲ್ಲಿ) 400 ಬಿಲಿಯನ್ ಡಾಲರ್(40 ಸಾವಿರ ಕೋಟಿ ಡಾಲರ್)
- ಜಪಾನ್ ದೇಶದಲ್ಲಿ ಕೇವಲ ವ್ಯಾಪಾರ ಕುದುರಿಸುವ ಮೋಜು ಮಾಡುವುದಕ್ಕಾಗಿ ವರ್ಷಕ್ಕೆ 35 ಬಿಲಿಯನ್ ಡಾಲರ್ (3500 ಕೋಟಿ ಡಾಲರ್) ಖರ್ಚಾಗುತ್ತಿದೆಯಂತೆ!

ಇದರಿಂದ ಸ್ಪಷ್ಟವಾಗುತ್ತಿರುವು ದೇನೆಂದರೆ ಜಗತ್ತಿನಲ್ಲಿ ನೂರಾರು ಕೋಟಿ ಜನರು ಹಸಿವು, ರೋಗ-ರುಜಿನಗಳಿಂದ ನರಳುತ್ತಿದ್ದರೂ ಶಿಕ್ಷಣ, ವಸತಿಯಂತಹ ಕನಿಷ್ಠ ಸೌಲಭ್ಯಗಳನ್ನೂ ಪಡೆಯಲು ಪರಿತಪಿಸುತ್ತಿರುವಾಗ 'ಅಭಿವೃದ್ಧಿ ಶೀಲ' ರಾಷ್ಟ್ರಗಳು ಮತ್ತು ಬಂಡವಾಳಶಾಹಿ ವ್ಯವಸ್ಥೆ ಜನರ ಸಂಕಷ್ಟಗಳಿಗೆ ಉತ್ತರಿಸಲು ಸಾಧ್ಯವಿಲ್ಲ. ಬದಲಿಗೆ ತನ್ನ ಕೊಳೆತು ನಾರುವ 'ಕೊಳ್ಳುಬಾಕ ಸಂಸ್ಕೃತಿ'ಯ ಮೂಲಕ, ಜಗತ್ತಿನ ಜನತೆಯ ಜೀವನ ಮಟ್ಟವನ್ನು ವಿನಾಶದ ಅಂಚಿಗೆ ಕೊಂಡೊಯ್ಯುತ್ತಿದೆ.

- ಕೆ.ಮಹಾಂತೇಶ / ಬಾಲಕೃಷ್ಣ ಶೆಟ್ಟಿ

"ಅಣು ವಿಕಿರಣದ ವಿಷ ನುಂಗಿ ನಾವು ಬದುಕಬೇಕೇ?"

ಕೈಗಾ: ಪುನರ್ವಸತಿಗಾಗಿ ರೈತರ ಹೋರಾಟ

ವಿಠ್ಠಲ ಭಂಡಾರಿ

"ಕೈಗಾ ಅಣುಸ್ಥಾವರದ ಅಧಿಕಾರಿಗಳೇ ನಾವು ನಿಮ್ಮ ಪ್ರಯೋಗದ ಬಲಿಪಶುಗಳಾಗಲು ತಯಾರಿಲ್ಲ'

"ದೇವಕಾರ, ಹರಟುಗಾ, ಬಾಳೆಮನೆ ಹಳ್ಳಿಗಳಲ್ಲಿ ಮಾನವ ಹಕ್ಕಿನ ಉಲ್ಲಂಘನೆ ಆಗುತ್ತಿದೆ'

54ನೇ ಪುನರ್ವಸತಿ ಸಭೆಯ ತೀರ್ಮಾನ ಜಾರಿಯಾಗಲಿ, ನಮ್ಮ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಿ, ಪುನರ್ವಸತಿ ಕಲ್ಪಿಸಿ' ಕೈಗಾ ಅಣು ವಿಕಿರಣದಿಂದ ನಮ್ಮನ್ನು ರಕ್ಷಿಸಿ, NPC (ನ್ಯೂಕ್ಲಿಯರ್ ಪವರ್ ಕಾರ್ಪೋರೇಶನ್) ಗೆ ಧಿಕ್ಕಾರ. ಕರ್ನಾಟಕ ಪ್ರಾಂತ ರೈತ ಸಂಘ ಜಿಂದಾಬಾದ್... ಹೀಗೆ ಕಾರವಾರದಲ್ಲಿ ರೈತರ ಕೂಗು ಮುಗಿಲು ಮುಟ್ಟಿತ್ತು. ಅಲ್ಲಿ ಕೈಗಾದಲ್ಲಿ ವಿದ್ಯುತ್ ಉತ್ಪಾದನೆಗೆ ತಯಾರಿ ನಡೆದಿತ್ತು. ಒಂದೆಡೆ ವಿದ್ಯುತ್ ಪ್ರಾರಂಭವಾದಾಗಿನಿಂದ ವಿಕಿರಣ ಹೊರಚೆಲ್ಲುತ್ತಿದ್ದಂತೆ ನಮ್ಮ ಗತಿಯೇನು ಎನ್ನುವ ಆತಂಕ ಒಂದು ಕಡೆಯಾದರೆ ನಮ್ಮ ಹೋರಾಟದಿಂದ ಏನೂ ಪ್ರಯೋಜನ ಆಗದೇ ಇದ್ದರೆ, ಜಿಲ್ಲಾಡಳಿತ ಅಸಡ್ಡೆ ತೋರಿಸಿದರೆ ನಮ್ಮ ಕತೆಯೇನು ಎನ್ನುವ ಆತಂಕ ಇನ್ನೊಂದೆಡೆ ಈ ರೈತರನ್ನು ಕಾಡುತ್ತಿತ್ತು.

ಕಳೆದ 6-8 ವರ್ಷಗಳಿಂದ ಈ ಭಾಗದ ರೈತರು ಸರ್ಕಾರಕ್ಕೆ ಮನವಿಗಳನ್ನು ಕೊಡುತ್ತಲೇ ಬಂದಿದ್ದಾರೆ. ಜಿಲ್ಲಾಡಳಿತ ಅವರಿಗೆ ಭರವಸೆ ಕೊಡುತ್ತಲೇ ಬಂದಿದೆ. ಆದರೆ ಬೇಡಿಕೆ ಮಾತ್ರ ಈಡೇರಲಿಲ್ಲ. ಯಾರಾದರೂ ನಮ್ಮ ಸಮಸ್ಯೆಯನ್ನು ಬಗೆಹರಿಸಲು ಸಹಾಯ ಮಾಡಬಹುದೆಂದು ಜಾತಕ ಪಕ್ಷಿಯಂತೆ ಕಾದರು. ಯಾರೂ ಇವರಲ್ಲಿ ಬಂದಿಲ್ಲ ಎಂದಲ್ಲ. ಆದರೆ ಇವರಿಗಾಗಿ ಅಲ್ಲ. ತಮ್ಮ ಕೆಲಸಕ್ಕೆ ಪ್ರಚಾರಕ್ಕೆ ಎಷ್ಟು ಬೇಕೋ ಅಷ್ಟಕ್ಕೇ ಇವರನ್ನು ಬಳಸಿಕೊಂಡರು. ಈಗಲೂ ಬಳಸಿಕೊಳ್ಳುವ ಪ್ರಯತ್ನ ನಡೆಸಿಯೇ ಇದ್ದಾರೆ.

ಇನ್ನೇನು ವಿದ್ಯುತ್ ಪ್ರಾರಂಭ ಆಗಿಬಿಡುತ್ತದೆ ಎನ್ನುವ ಭಯ. ಯಾಕೆಂದರೆ 1994 ರಲ್ಲಿ ಈ ಯೋಜನೆಯ ನಿರ್ದೇಶಕರಾಗಿದ್ದ ಪಿ.ಡಿ.ವಾಲಿಯವರು ವಿದ್ಯುತ್ ಉತ್ಪಾದನೆ ಆಗುವ ಕ್ಷಣದಿಂದ ಯಾವೊಂದು ಜೀವಿಗೂ ಇಲ್ಲಿ ಪ್ರವೇಶವಿಲ್ಲ ಎನ್ನುವ ಹೇಳಿಕೆ ಕೊಟ್ಟಿದ್ದು ಇವರ ನೆನಪಿನಲ್ಲಿ ಇನ್ನೂ ಇದೆ. ಕೊನೆಗೂ ಕರ್ನಾಟಕ ಪ್ರಾಂತ ರೈತ ಸಂಘ ಇವರನ್ನು ಹೋರಾಟಕ್ಕೆ ಇಳಿಸಿ ನ್ಯಾಯ ದೊರಕಿಸುವ ಒಂದು ಪ್ರಯತ್ನ ಮಾಡಿತು.

ಇನ್ನು ಭರವಸೆ ಸಾಕು, ಜಿಲ್ಲಾಡಳಿತ ಕ್ರಿಯೆಗೆ ಇಳಿಯುವ ವರೆಗೆ ನಾವು ಹೋರಾಟ ಹಿಂತೆಗೆದುಕೊಳ್ಳಬಾರದೆಂಬ ದೃಢ ನಿಶ್ಚಯದೊಂದಿಗೆ ದಿನಾಂಕ 29 ಅಕ್ಟೋಬರ್ 99 ರಿಂದ ಜಿಲ್ಲಾಧಿಕಾರಿಗಳ ಕಛೇರಿಯ ಎದುರು ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಂಡಿತು. ಅನೇಕ ದಿನ ಉಳಿಯುವ ಉದ್ದೇಶದಿಂದ ಹಾಸಲು, ಹೊದೆಯಲು ಬಟ್ಟೆಗಳನ್ನು, ಸಾಮೂಹಿಕವಾಗಿ ಅಡಿಗೆ ಮಾಡಲು ದೊಡ್ಡ ದೊಡ್ಡ ಪಾತ್ರೆಗಳು, ಮೂರು ನಾಲ್ಕು ಸೀಮೆ ಎಣ್ಣೆ ಸ್ಟೌವ್, ಕೆರೋಸಿನ್ ಕ್ಯಾನ್ ಹೀಗೆ ಸಕಲ ತಯಾರಿಯೊಂದಿಗೆ ಹಾಜರಾದರು.

ಸಂಘಟನೆ ಒಡೆವ ವಿಫಲ ಪ್ರಯತ್ನ

ಸಮಸ್ಯೆಗಳು ಬಗೆಹರಿಸ ಬೇಕಾದವರೇ ಈ ರೈತರ ವಿರುದ್ಧ ನಿಂತು ಸಂಘಟನೆ ಒಡೆಯುವ ಪ್ರಯತ್ನ ಕೂಡ ಇಲ್ಲಿ ನಡೆಯುತ್ತಿದೆ ಎಂದು ರೈತರು ಹೇಳುತ್ತಾರೆ. ಅನೇಕ ಸ್ಥಳೀಯರು ಈ ಪ್ರಯತ್ನದಲ್ಲಿ ತೊಡಗಿದ್ದಾರೆ ಎನ್ನುವುದನ್ನು ನೋಡಿದರೆ ರೈತರ ಬದುಕಿನೊಡನೆ ಆಟವಾಡಲು ಇವರಿಗೆ ಮನಸ್ಸಾದರೂ ಹೇಗೆ ಭರುತ್ತದೆಯೋ ತಿಳಿಯದು. ಮನುಷ್ಯತ್ವ ಎನ್ನುವುದು ರಾಜಕಾರಣಕ್ಕಿಂತ ದೊಡ್ಡದು ಎಂದು ತಿಳಿಯದ ಈ ಜನ ಆಗುವ ಕೆಲಸಕ್ಕೂ ಕಲ್ಲು ಹಾಕಲು ಪ್ರಯತ್ನಿಸುವುದು ಬೆಳಕಿಗೆ ಬಂದಿದೆ. ಸಂಘಟನೆ ಅದು ಯಾವುದೇ ಇರಲಿ ಅದು ತಮ್ಮ ಅಧಿಕಾರವನ್ನು ಪ್ರಶ್ನಿಸುತ್ತದೆ ಅಥವಾ ತಮ್ಮ ಸ್ವೇಚ್ಛಾಚಾರವನ್ನು ಪ್ರಶ್ನಿಸುತ್ತಿದೆ ಎಂದಾಗ ಸಂಘಟನೆ ಕಟ್ಟುವ (ಈ ದೇಶದ ಸಂವಿಧಾನ ಕೊಟ್ಟ ಹಕ್ಕು) ಹಕ್ಕನ್ನೇ ಪ್ರಶ್ನಿಸುವವರೆಗೂ ಹೋಗುವುದು ಯಾವುದೇ ಪಕ್ಷಕ್ಕೆ, ಜನರಿಗೆ ಶೋಭೆ ತರುವಂತದಾಗುವುದಿಲ್ಲ.

ಚುರುಕಾದ ಅಧಿಕಾರಿಗಳು - ರಾಜಕಾರಣಿಗಳ ಭೇಟಿ

1994 ರಿಂದ ನೆನೆಗುದಿಗೆ ಬಿದ್ದ ಫೈಲುಗಳು, ಅರ್ಜಿಗಳು ಜೋರಾಗಿ ಓಡಾಡಿದ್ದು ಈ ಭಾಗದ ರೈತರು ಅನಿರ್ದಿಷ್ಟಾವಧಿಯವರೆಗೆ ಧರಣಿ ಕೂಡುವ ನಿರ್ಧಾರ ಮಾಡಿದ ನಂತರ. ಎನ್.ಪಿ.ಸಿ. ಯವರೊಂದಿಗೆ ಸರಿಯಾದ ಮಾತುಕತೆ ನಡೆಸದೇ ನಿಷ್ಕ್ರಿಯರಾದ ಪರಿಣಾಮ ಇದು. ಈ ಹಿಂದೆ ಎಂ.ಪಿ.ಯಾಗಿದ್ದ ಅನಂತಕುಮಾರ ಹೆಗಡೆ ಕೂಡ ಈ ಸಮಸ್ಯೆಯ ಬಗ್ಗೆ ಮುತುವರ್ಜಿ ವಹಿಸಲಿಲ್ಲ. 94ನೇ ಪುನರ್ವಸತಿ ಸಭೆಗೆ ಕೂಡ ಅವರು ಭಾಗವಹಿಸಲಿಲ್ಲ. ಇದು ಮುಖ್ಯವೆಂದು ಅನ್ನಿಸದಿರುವುದು ಆಶ್ಚರ್ಯವಲ್ಲದಿದ್ದರೂ ಗಮನಿಸಬೇಕಾದದ್ದು. ಮುಖ್ಯಮಂತ್ರಿ ಕರೆದ ಸಭೆಯಲ್ಲಿ 2 ಕೋಟಿ ಕೊಡಲು ಒಪ್ಪಿದ ಎನ್.ಪಿ.ಸಿ.ಯವರ ಮೇಲೆ ಒತ್ತಡ ಹೇರಿ ಹಣ ಪಡೆವ ಯೋಜನೆಯನ್ನು ಇವರು ಮಾಡಿಲ್ಲ. ಜಿಲ್ಲಾಡಳಿತ, ಜನಪ್ರತಿನಿಧಿಗಳ ನಿಷ್ಕ್ರಿಯತೆಯ ಪರಿಣಾಮವಾಗಿ ಇಂದು ವಿದ್ಯುತ್ ಉತ್ಪಾದನೆ ಆಗುತ್ತಿದ್ದರೂ ಸಮಸ್ಯೆ ಸಮಸ್ಯೆಯಾಗೇ ಇದೆ. ಉಸ್ತುವಾರಿ ಸಚಿವರಾಗಿ ಆರ್.ವಿ.ದೇಶಪಾಂಡೆಯವರು ಇದ್ದಾಗ ಅದೇ ತೀರ್ಮಾನ ಪ್ರೇಮಾನಂದ ಜೈವಂತ ಅವರು ಉಸ್ತುವಾರಿ ಸಚಿವರಾಗಿದ್ದಾಗ ಕೂಡ ನೆನೆಗುದಿಗೆ ಬಿತ್ತು. ಈಗ ಮತ್ತೆ ದೇಶಪಾಂಡೆ ಸಚಿವರಾಗಿ ಬಂದಿದ್ದಾರೆ. ಸಮಸ್ಯೆ ಹಾಗೆ ಇದೆ.

ಧರಣಿ ನಿರತರನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷ ಷಣ್ಮುಖಗೌಡ, ಶಾಸಕ ಅಸ್ನೋಟಿಕರ್, ಮಾಜಿ ಮಂತ್ರಿ ಪ್ರಭಾಕರ ರಾಣೆ, ಮಾಜಿ ಶಾಸಕ ಎಂ.ಪಿ.ಕರ್ಕಿ, ಮಾಜಿ ಎಂ.ಪಿ. ಕದಂ ಮುಂತಾದವರು ಭೇಟಿ ಕೊಟ್ಟರು. ಹಲವರು ಬೆಂಬಲಿಸಿದರು ಕೆಲವರು ಬೈದಾಡಿದರು.

ಹಾಲಿ ಎಂ.ಪಿ. ಮಾರ್ಗರೇಟ್ ಆಳ್ವ ಅವರು ಭೇಟಿ ಕೊಟ್ಟು ಎನ್.ಪಿ.ಸಿ.ಯವರೊಂದಿಗೆ ದೆಹಲಿಯಲ್ಲಿ ಮಾತನಾಡುವ ಭರವಸೆ ಕೊಟ್ಟರು. 'ನನ್ನ ಮೊದಲ ಕೆಲಸ ನಿಮ್ಮ ಸಮಸ್ಯೆಯನ್ನು ಬಗೆಹರಿಸುವುದು ಎನ್ನುವ ಧನಾತ್ಮಕ ಉತ್ತರ ಹೇಳಿ ಇವರ ಬಗೆಗಿರುವ ಕಾಗದ ಪತ್ರವನ್ನು ಕೊಡಲು ವಿನಂತಿಸಿದರು. ಮತ್ತು ಸಾರ್ವಜನಿಕ ಸಭೆಯಲ್ಲಿ ಕೂಡ ಈ ಬಗ್ಗೆ ಮಾತನಾಡಿ ತಕ್ಷಣ ಗಮನ ಹರಿಸುವ ವಚನ ಕೊಟ್ಟರು.

ಸಚಿವ ಆರ್.ವಿ.ದೇಶಪಾಂಡೆ ಕೂಡ ಧರಣಿ ಕುಳಿತಲ್ಲಿಗೆ ಬಂದು ಮನವಿ ಸ್ವೀಕರಿಸಿ ನಾನು ಇರುವಾಗಲೇ ಆದ ತೀರ್ಮಾನ ಇದು. ನಿಮಗೆ ಪುನರ್ವಸತಿ ಕಲ್ಪಿಸುತ್ತೇನೆ, ಇದು ಒಂದು ಭರವಸೆ ಅಲ್ಲ. ಕೆಲವು ದಿನಗಳ ಕಾಲಾವಕಾಶ ಕೊಡಿ ಎಂದು 20 ದಿನಗಳ ಒಳಗೆ ಸಭೆ ಕರೆದು ಬಗೆಹರಿಸುವ ವಚನ ಕೊಟ್ಟರು. ನಿಗದಿತ ದಿನದೊಳಗೆ ಪರಿಹಾರ ಸಾಧ್ಯವಾಗದಿದ್ದಲ್ಲಿ ಮತ್ತೆ ಇಲ್ಲೇ ಧರಣಿ ಕೂರುವ ಬಗ್ಗೆ ರೈತರು ಎಚ್ಚರಿಕೆ ಕೊಟ್ಟು ತಾತ್ಕಾಲಿಕವಾಗಿ ಧರಣಿ ನಿಲ್ಲಿಸುವ ಬಗ್ಗೆ ತೀರ್ಮಾನಿಸಿದರು.

ಸಭೆ ಕೂಡ ನಿಗದಿಗೊಂಡು ಡಿಸೆಂಬರ್ 7 ರ ಒಳಗೆ ಭೂಸ್ವಾದೀನದ ರೀತಿಯನ್ನು ಒಳಗೊಂಡು ವಿವರವಾದ ವರದಿ ಕೊಡಲು ದೇಶಪಾಂಡೆ 7 ಸದಸ್ಯರ ಸಮಿತಿ ನೇಮಿಸಿದ್ದಾರೆ. ರೈತ ಸಂಘವನ್ನು ಒಡೆಯಲು ಪ್ರಯತ್ನಿಸಿದವರ ಎದುರು ರೈತ ಸಂಘದ ಮಹತ್ವದ ವಿಜಯ ಕೂಡ ಹೌದು.

ರಾಜಕಾರಣಿಗಳ, ಅಧಿಕಾರಿಗಳ ಭರವಸೆಗಳೆಂದರೆ ವಾಕರಿಕೆ ಈ ರೈತರಿಗೆ. 11.2.97 ರಿಂದ 16.7.97 ರ

ಪುಟ 8 ಕ್ಕೆ

ರೈತರ ಕೊನೆಯ ವಿನಂತಿ

ಅಣು ವಿಕಿರಣದ ವಿಷ ಸೇವಿಸುತ್ತಾ ನಿಷೇಧಿತ ಪ್ರದೇಶದಲ್ಲಿ ಸ್ವತಂತ್ರ ಭಾರತದ ಹಳ್ಳಿಗಳಲ್ಲಿ ವಾಸ ಮಾಡುತ್ತಾ ಪ್ರಜೆಗಳು ಬದುಕಬೇಕೆಂದು ಭಾರತದ ಸಂವಿಧಾನದಲ್ಲಿ ಎಲ್ಲಿಯೂ ಬರೆದದ್ದು ಇರುವುದಿಲ್ಲ. ಭಾರತದ ಮಾನವ ಹಕ್ಕುಗಳ ಆಯೋಗ ಕೂಡ ಜನರ ಬದುಕುವ ಹಕ್ಕುಗಳನ್ನು ದಮನ ಮಾಡಿ ಅಣುಸ್ಥಾವರ ಪ್ರಾರಂಭಿಸಲು ನಿರ್ದೇಶನ ಕೊಟ್ಟಿದ್ದು ಇರುವುದಿಲ್ಲ. ತಮ್ಮ ಖಾಯಂ ವಾಸದ ಕಾಲೋನಿಯನ್ನು ಅಣು ಸ್ಥಾವರದ ನಿರ್ಮಾಣದ ಸ್ಥಳದಿಂದ 15 ಕಿ.ಮಿ. ದೂರದಲ್ಲಿ ಕಟ್ಟಿ ನಮ್ಮನ್ನು ನಿಷೇಧಿತ 5. ಕಿ.ಮಿ. ವ್ಯಾಪ್ತಿಯಲ್ಲಿ ಇರಿ ಎಂದು ಹೇಳುವುದು ಯಾವ ನ್ಯಾಯ?

ಜನ ಕಲ್ಯಾಣ ಮಾಡುವ ಮತ್ತು ಪ್ರಜೆಗಳ ಜೀವರಕ್ಷಣೆಯ ಜವಾಬ್ದಾರಿ ಹೊಂದಿದ ರಾಜ್ಯ ಸರ್ಕಾರ ಅದೇ ಪ್ರಕಾರ ಕೈಗಾ ಯೋಜನೆ ಪುನರ್‌ವಸತಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಮಾನವೀಯ ದೃಷ್ಟಿಯಿಂದ ನಮ್ಮ ಸಮಸ್ಯೆಗಳ ಕಡೆಗೆ ಬೇಗ ಗಮನ ಹರಿಸಿ ನಮ್ಮ ಬೇಡಿಕೆಗಳನ್ನು ಈಡೇರಿಸುವ




ಪರಿಸರವಾದಿಗಳು ಮತ್ತು ರೈತರು

ಕೈಗಾ ಅಣುಸ್ಥಾವರನ್ನು ಅನೇಕ ವರ್ಷಗಳಿಂದ ವಿರೋಧಿಸುತ್ತಾ ಬಂದಿರುವ ಜಿಲ್ಲೆಯ ಪರಿಸರವಾದಿ ಸಂಘಟನೆಗಳು ಈ ಮೂರು ಹಳ್ಳಿಗಳ ಜನರಿಗೆ ಪರಿಹಾರ ಕೊಡಿಸುವ ಗಂಭೀರ ಪ್ರಯತ್ನಕ್ಕೆ ಕೈಹಾಕಿದಂತಿಲ್ಲ. ಅವರು ಇತ್ತೀಚೆಗೆ ಹಾಕಿದ ಕರಪತ್ರ ಮತ್ತು ಭಿತ್ತಿ ಪತ್ರದಲ್ಲಿ ಈ ಮೂರು ಹಳ್ಳಿಗಳ ಹೆಸರಿರಲಿಲ್ಲ. ಅಲ್ಲಿ ವಿದ್ಯುತ್ ಸ್ಥಾಪನೆ ಆಗುತ್ತಿದ್ದರೂ ಇನ್ನೂ ನಮ್ಮ ಹೋರಾಟದಿಂದ ಕೈಗಾ ಅಣುಸ್ಥಾವರವನ್ನು ನಿಲ್ಲಿಸುತ್ತೇವೆ ಎನ್ನುವ ಭ್ರಮೆಯಲ್ಲಿ ಇದ್ದಂತಿದೆ. ಈ ಮೂರು ಹಳ್ಳಿಗಳ ಜನರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ್ದಾರಂತೆ. (ಆರೋಗ್ಯ ಸಮೀಕ್ಷೆ) ಇನ್ನೂ ಕಲವು ವರ್ಷಗಳ ನಂತರ ಬಂದು ಮತ್ತೆ ಆರೋಗ್ಯ ಸಮೀಕ್ಷೆ ನಡೆಸಿ ವಿಕಿರಣದ ಪರಿಣಾಮವನ್ನು ಇವರು ಅಧ್ಯಯನ ಮಾಡುತ್ತಾರಂತೆ. ಇನ್ನೂ ಕೆಲವೇ ದಿನದಲ್ಲಿ ಕೈಗಾದ ಒಂದು ಸ್ಥಾವರ ಪೂರ್ಣಗೊಳ್ಳುವ ಮೊದಲು ಅದರಲ್ಲಿ ಎಷ್ಟು ವಿಕಿರಣ ಪ್ರಮಾಣವಿತ್ತು ಎಂಬ ಸಮೀಕ್ಷೆ ನಡೆಯಲಿದೆ. ಪ್ರಾರಂಭಗೊಂಡ ನಂತರ ಅದರ ಮೇಲೆ ಮತ್ತೆ ವಿಕಿರಣದ ಪ್ರಮಾಣ ಅಳೆಯಲಾಗುವುದು. ಈ ಜನರು ಹಂದಿ, ನಾಯಿ, ಮೊಲ, ಇಲಿಗಳಂತೆ ವಿಕಿರಣದ ಪ್ರಯೋಗ ಪಶುಗಳಾಗುತ್ತಿರುವುದು ಈ ಜಗತ್ತಿನ ಧ್ವನಿ ಇಲ್ಲದ ಬಡವರ ದುರಂತದಂತೆ ಇವರದೂ ಸಹ" ಎಂದು ಕಾರವಾರದ 'ಕರಾವಳಿ ಮುಂಜಾವು' ವರದಿ ಮಾಡಿತು.

ಸಾವು ಬದುಕಿನ ನಡುವೆ ಹೋರಾಡುತ್ತಿರುವ ಈ ರೈತರು 29 ರಿಂದ ಜಿಲ್ಲಾಧಿಕಾರಿಗಳ ಕಛೇರಿ ಎದುರು ಧರಣಿ ಕೂತಾಗಲೂ ಇವರು ರೈತರ ಬಗ್ಗೆ ಅಪಾರ ಕಾಳಜಿ ಇರುವ(!?) ಪರಿಸರ ಸಂರಕ್ಷಣಾ ಸಮಿತಿಯ ಯಾವೊಬ್ಬ ಮುಖಂಡರೂ ಒಂದೇ ಒಂದು ಸೌಹಾರ್ದದ ಮಾತನ್ನು ಆಡದಿರುವುದು ಅವರ ಜನಪರ ಕಾಳಜಿಯ ಸ್ವರೂಪವನ್ನು ಚೆನ್ನಾಗಿಯೇ ತೋರಿಸಿತು. ಇದಕ್ಕೆ ಬದಲು ನವೆಂಬರ್ 1 ನ್ನು 'ಕಪ್ಪುದಿನ'ವನ್ನಾಗಿ ಆಚರಿಸಲು ಕರೆ ಕೊಟ್ಟರು. ಆದರೆ ಕರ್ನಾಟಕ ಪ್ರಾಂತ ರೈತ ಸಂಘ ಇವನ್ನು ವಿರೋಧಿಸಿ ಎಲ್ಲಾ ರೈತರಿಗೆ ರಾಜ್ಯೋತ್ಸವದಲ್ಲಿ ಪಾಲ್ಗೊಳ್ಳಲು ಕರೆ ಕೊಟ್ಟಿತು.

ಒಂದು ದಿನ ಕೂಗಾಡಿ ಕಪ್ಪು ದಿನ ಆಚರಿಸುವ ಇವರು ಮತ್ತೆ ನಾಪತ್ತೆಯಾಗಿದ್ದಾರೆ. ಈ ರೈತರ ತಕ್ಷಣದ ಸಮಸ್ಯೆಯ ಪರಿಹಾರಕ್ಕೆ ಒಂದು ಕ್ರಿಯಾತ್ಮಕ ಕಾರ್ಯಕ್ರಮ ರೂಪಿಸಲಿಲ್ಲ. ಹಾಗಾದರೆ ಇವರ ಪ್ರತಿಭಟನೆಗಳೆಲ್ಲವೂ ಪ್ರಚಾರಕ್ಕಾಗಿಯೇ ಎಂಬ ಸಂಶಯ ಬರುತ್ತದೆ.



1.8.86 ರಲ್ಲಿ ನ್ಯೂಕ್ಲಿಯರ್ ಪವರ್ ಕಾರ್ಪೋರೇಷನ್ ಸಿದ್ದಪಡಿಸಿದ ನಕ್ಷೆ. 5 ಕಿ.ಮಿ. ನಿರ್ಬಂಧಿತ ಪ್ರದೇಶವೆಂದು ಗುರುತಿಸಿದ್ದು

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ